ಸಂಪುಟ: 06 ಸಂಚಿಕೆ: 78 ಪುಟಗಳು: 08 ಸೋಮವಾರ 01 ಜೂನ್ 2026 www.udayavahini.in epaper.udayavahini.in Udaya vahini news Udaya vahini news Udayavahini news youGÓ...qbe udayavahininews@gmail.
ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5

**ಮುಂಜಾನೆ ಮಾತು**
ಯಾರು ಏನೇನು ಮಾಡ್ತಾ ಇದ್ದಾರೆ, ಹೇಗೆ, ಯಾಕೆ ಇತ್ಯಾದಿ ಅನವಶ್ಯಕ ವಿವರಗಳಿಂದ ದೂರ ಇದ್ದಷ್ಟೂ ಒತ್ತಡ ಕಮ್ಮಿಯಾಗಿ ಸುಖ ಹೆಚ್ಚುತ್ತದೆ !

# ಉದಯ ವಾಹಿನಿ
ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

## ಪದಗ್ರಹಣ ದಿನದಂದೇ ಕಾಂಗ್ರೆಸ್ ಕಚೇರಿ ಭೂಮಿ ಪೂಜೆಗೆ ಚಿಂತನೆ: ಡಿ.ಕೆ. ಶಿವಕುಮಾರ್

• ಉದಯವಾಹಿನಿ, ಬೆಂಗಳೂರು

ಜೂನ್ 3ರಂದು ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕಾರ ಕಾರ್ಯಕ್ರಮ ಮುಗಿದ ಬಳಿಕ ರೇಸ್ ಕೋರ್ಸ್ ರಸ್ತೆ ಬಳಿ ಕಾಂಗ್ರೆಸ್ ಭವನ ನಿರ್ಮಾಣಕ್ಕೆ ಭೂಮಿ ಪೂಜೆ ಕಾರ್ಯಕ್ರಮ ನಡೆಸಲು ಆಲೋಚಿಸಲಾಗಿದೆ. ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಹಾಗೂ ರಾಹುಲ್ ಗಾಂಧಿ ಅವರು ಇನ್ನಷ್ಟೇ ಸಮಯ ನಿಗದಿ ಮಾಡಬೇಕಿದೆ ಎಂದು ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಡಿ.ಕೆ. ಶಿವಕುಮಾರ್ ತಿಳಿಸಿದರು. ರೇಸ್ ಕೋರ್ಸ್ ರಸ್ತೆ ಬಳಿ ಉದ್ದೇಶಿತ ಕಾಂಗ್ರೆಸ್ ಭವನ ನಿರ್ಮಾಣ ಜಾಗಕ್ಕೆ ಭಾನುವಾರ ಭೇಟಿ ನೀಡಿ, ಪರಿಶೀಲನೆ ನಡೆಸಿ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ಪಕ್ಷದ ಎಲ್ಲಾ ಬ್ಲಾಕ್ ಹಾಗೂ ಜಿಲ್ಲಾ ಅಧ್ಯಕ್ಷರು, ಶಾಸಕರು ಹಾಗೂ ಮಾಜಿ ಶಾಸಕರು, ಪಕ್ಷದ ವಿವಿಧ ಮುಂಚೂಣಿ ಘಟಕಗಳ ಅಧ್ಯಕ್ಷರು, ಸಂಸದರು, ವಿವಿಧ ನಿಗಮ ಹಾಗೂ ಮಂಡಳಿಗಳ ಅಧ್ಯಕ್ಷರಿಗೆ ಆಹ್ವಾನ ನೀಡಲಾಗುವುದು. ಈ ಕಾರ್ಯಕ್ರಮದಲ್ಲಿ ಸಾರ್ವಜನಿಕರಿಗೆ ಅವಕಾಶ ಇಲ್ಲ. ಕಾರ್ಯಕರ್ತರು ಕ್ಷಮಿಸಬೇಕು. ಅಲ್ಲಿ ಜಾಗದ ಕೊರತೆ ಇರುವುದರಿಂದ ಆಹ್ವಾನಿತರಿಗೆ ಮಾತ್ರ ಅವಕಾಶ ಕಲ್ಪಿಸಲಾಗುವುದು ಎಂದು ಹೇಳಿದರು.

## ಧರ್ಮಸ್ಥಳಕ್ಕೆ ಭೇಟಿ ನೀಡಿದ ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್

• ಉದಯವಾಹಿನಿ, ಬೆಂಗಳೂರು

ಭಾರತದ ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಅವರು ಶ್ರೀ ಕ್ಷೇತ್ರ ಧರ್ಮಸ್ಥಳಕ್ಕೆ ಭೇಟಿ ನೀಡಿ, ಶ್ರೀ ಮಂಜುನಾಥ ಸ್ವಾಮಿಯ ದರ್ಶನ ಪಡೆದರು.

ಸಾಂಪ್ರದಾಯಿಕ ಉಡುಪಿನಲ್ಲಿ ದೇವಾಲಯಕ್ಕೆ ಆಗಮಿಸಿದ ಉಪರಾಷ್ಟ್ರಪತಿ, ಶ್ರೀ ಮಂಜುನಾಥ ಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಿ ಆಶೀರ್ವಾದ ಪಡೆದರು. ಬಳಿಕ ಅನ್ನಪೂರ್ಣ ಛತ್ರಕ್ಕೆ ತೆರಳಿ ಅಲ್ಲಿನ ವ್ಯವಸ್ಥೆಗಳು ಹಾಗೂ ಸೇವಾ ಕಾರ್ಯಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ನಂತರ ಧರ್ಮಸ್ಥಳದ ಧರ್ಮಾಧಿಕಾರಿ, ರಾಜ್ಯಸಭಾ ಸದಸ್ಯ ಡಾ.ಡಿ.ವೀರೇಂದ್ರ ಹೆಗ್ಗಡೆ ಅವರನ್ನು ಭೇಟಿ ಮಾಡಿ ಕೆಲಕಾಲ ಮಾತುಕತೆ ನಡೆಸಿದರು.

ಈ ಸಂದರ್ಭದಲ್ಲಿ ಕ್ಷೇತ್ರದ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಹಾಗೂ ಆರೋಗ್ಯ ಸೇವಾ ಕಾರ್ಯಗಳ ಬಗ್ಗೆ ಮಾಹಿತಿ ಪಡೆದ ಅವರು, ಕ್ಷೇತ್ರದ ಸಮಾಜಮುಖಿ ಸೇವೆಗಳನ್ನು ಶ್ಲಾಘಿಸಿದರು. ದೇವರ ದರ್ಶನದ ಸಂದರ್ಭದಲ್ಲಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್, ಲೋಕಸಭಾ ಸದಸ್ಯ ಕ್ಯಾಪ್ಟನ್ ಬ್ರಿಜೇಶ್ ಚೌಟ, ವಿಧಾನ ಪರಿಷತ್ ಸದಸ್ಯ ಕೆ.ಪ್ರತಾಪಸಿಂಹ ನಾಯಕ್, ಡಿ.ಸುರೇಂದ್ರ ಕುಮಾರ್, ಡಿ.ಹರ್ಷೇಂದ್ರ ಕುಮಾರ್, ಡಿ.ಶ್ರೇಯಸ್ ಕುಮಾರ್ ಹಾಗೂ ಅಮಿತ್ ಕುಮಾರ್ ಸೇರಿದಂತೆ ಗಣ್ಯರು ಉಪಸ್ಥಿತರಿದ್ದರು.

## ರಾಜ್ಯಸಭಾ ಚುನಾವಣೆಗೆ ಇಂದಿನಿಂದ ನಾಮಪತ್ರ ಸಲ್ಲಿಕೆ

• ಉದಯವಾಹಿನಿ, ಬೆಂಗಳೂರು

ರಾಜ್ಯ ವಿಧಾನಸಭೆಯಿಂದ ರಾಜ್ಯಸಭೆಗೆ ನಡೆಯುವ ದ್ವೈವಾರ್ಷಿಕ ಚುನಾವಣೆಗೆ ನಾಳೆ ಅಧಿಸೂಚನೆ ಪ್ರಕಟವಾಗಲಿದ್ದು, ಇಂದಿನಿಂದಲೇ ನಾಮಪತ್ರ ಸಲ್ಲಿಕೆ ಪ್ರಕ್ರಿಯೆ ಆರಂಭವಾಗಲಿದೆ. ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಬಿಜೆಪಿಯ ನಾರಾಯಣ ಕೊರಗಪ್ಪ, ಈರಣ್ಣ ಕಡಾಡಿ ಅವರು ಜೂನ್ 25ರಂದು ರಾಜ್ಯ ಸಭಾ ಸದಸ್ಯ ಸ್ಥಾನದಿಂದ ನಿವೃತ್ತರಾಲಿಗದ್ದಾರೆ. ನಿವೃತ್ತಿಯಿಂದ ತೆರವಾಗುವ ಈ 4 ರಾಜ್ಯಸಭಾ ಸದಸ್ಯ ಸ್ಥಾನಗಳಿಗೆ ಭಾರತೀಯ ಚುನಾವಣಾ ಆಯೋಗವು ಚುನಾವಣಾ ವೇಳಾಪಟ್ಟಿ ಪ್ರಕಟಿಸಿದೆ. ಆಡಳಿತಾರೂಢ ಕಾಂಗ್ರೆಸ್ ಪಕ್ಷವು ವಿಧಾನಸಭೆಯಲ್ಲಿ ಹೊಂದಿರುವ ಶಾಸಕರ ಸಂಖ್ಯಾಬಲದ ಆಧಾರದ ಮೇಲೆ ಮೂರು ಸ್ಥಾನಗಳನ್ನು ಗೆಲ್ಲಬಹುದು. ಬಿಜೆಪಿ ಒಂದು ಸ್ಥಾನ ಪಡೆಯಲು ಅವಕಾಶವಿದೆ. 18 ಶಾಸಕರನ್ನು ಹೊಂದಿರುವ ಜೆಡಿಎಸ್ ಒಂದು ಸ್ಥಾನವನ್ನು ಪಡೆಯಲು ಸಾಧ್ಯವಾಗುವುದಿಲ್ಲ.

ಬಿಜೆಪಿ ಜೆಡಿಎಸ್ ಮೈತ್ರಿಯ ಎನ್‌ಡಿಎ ಅಭ್ಯರ್ಥಿಯನ್ನು ರಾಜ್ಯಸಭಾ ಚುನಾವಣಾ ಕಣಕ್ಕೆ ಇಳಿಸಲಾಗುತ್ತದೆ. ದೇವೇಗೌಡರನ್ನು ಮರು ಆಯ್ಕೆ ಮಾಡಬೇಕು ಎಂಬ ಒತ್ತಡ ಅವರ ಹಿತೈಷಿಗಳು ಹಾಗೂ ಅಭಿಮಾನಿಗಳಿಂದ ಇದೆ.

## ಬೆಂಗಳೂರಲ್ಲಿ ಭಾರೀ ಮಳೆ ಮುನ್ಸೂಚನೆ ಯೆಲ್ಲೋ ಅಲರ್ಟ್ ಘೋಷಣೆ



• ಉದಯವಾಹಿನಿ, ಬೆಂಗಳೂರು

ಬೆಂಗಳೂರಲ್ಲಿ ಗುಡುಗು ಸಹಿತ ಭಾರೀ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಮುಂದಿನ 3 ಗಂಟೆ ಮಳೆ ಮುನ್ಸೂಚನೆ ಇದ್ದು, ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ. ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಕೋಲಾರ ಜಿಲ್ಲೆಗಳಿಗೂ ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ.

ಸಾರ್ವಜನಿಕರು ಮಳೆ ಗಾಳಿಯ ವೇಳೆ ಅನಗತ್ಯ ಹೊರಗೆ ಓಡಾಡುವುದು, ಅಸುರಕ್ಷಿತ ಕಟ್ಟಡ, ಮರಗಳ ಕೆಳಗೆ, ಶಿಥಿಲಾವಸ್ಥೆಯಲ್ಲಿರುವ ಗೋಡೆಗಳ ಬಳಿ ನಿಲ್ಲದಂತೆ ಎಚ್ಚರಿಸಲಾಗಿದೆ. ಕಳೆದ ಕೆಲವು ದಿನಗಳಿಂದ ಬೆಂಗಳೂರು ಸೇರಿದಂತೆ ರಾಜ್ಯದ ಹಲವೆಡೆ ಮಳೆಯಾಗುತ್ತಿದೆ. ಹಠಾತ್ ಆಗಿ ಸಂಜೆ ವೇಳೆಗೆ ಶುರುವಾಗುವ ಮಳೆಯಿಂದ ವಾಹನ ಸವಾರರು, ಸಾರ್ವಜನಿಕರು ಪರದಾಡುವಂತಾಗಿದೆ.

# ಈ ಸಲನೂ ಕಪ್ ನಮ್ದೇ






## ಗುಜರಾತ್ ಮಣಿಸಿದ ಆರ್‌ಸಿಬಿಗೆ ಚಾಂಪಿಯನ್

### ಫೈನಲ್ ಪಂದ್ಯದಲ್ಲೂ ಆರ್‌ಸಿಬಿಗೆ ಮೋಸ;

ಪ್ರತಿ ಐಪಿಎಲ್‌ನಂತೆ ಈ ಬಾರಿಯ ಐಪಿಎಲ್ ಕೂಡ ವಿವಾದಗಳಿಂದ ಹೊರತಾಗಿರಲಿಲ್ಲ. ಈ ಆವೃತ್ತಿಯಲ್ಲೂ ಸಾಕಷ್ಟು ವಿವಾದಗಳು ಸೃಷ್ಟಿಯಾದವು. ಅದರಲ್ಲೂ ಮೂರನೇ ಅಂಪೈರ್ ನೀಡಿದ ಕೆಲವೊಂದು ತೀರ್ಪುಗಳು ಹಲವರ ಅಸಮಾಧಾನಕ್ಕೆ ಕಾರಣವಾಗಿದ್ದವು. ಅದರಲ್ಲಿ ಪ್ರಮುಖವಾದದ್ದು, ಲೀಗ್ ಹಂತದಲ್ಲಿ ಆರ್‌ಸಿಬಿ ಹಾಗೂ ಗುಜರಾತ್ ನಡುವಿನ ಪಂದ್ಯದಲ್ಲಿ ಆರ್‌ಸಿಬಿ ನಾಯಕ ರಜತ್ ಪಾಟಿದರ್ ನೀಡಿದ ಕ್ಯಾಚ್ ಅನ್ನು ಜೇಸನ್ ಹೋಲ್ಡರ್ ಹಿಡಿದ ರೀತಿ ಸಾಕಷ್ಟು ವಿವಾದಗಳಿಗೆ ಕಾರಣವಾಗಿತ್ತು. ಚೆಂಡು ಸ್ಪಷ್ಟವಾಗಿ ನೆಲಕ್ಕೆ ತಾಗಿದರೂ ಮೂರನೇ ಅಂಪೈರ್ ಅದನ್ನು ಔಟೆಂದು ತೀರ್ಪು ನೀಡಿದ್ದರು. ಆದರೆ ಫೈನಲ್ ಪಂದ್ಯದಲ್ಲಿ ಅದೇ ರೀತಿಯ ಕ್ಯಾಚ್ ಅನ್ನು ಆರ್‌ಸಿಬಿ ಹಿಡಿದಿತ್ತು. ನಾಟೌಟ್ ಎಂದು ಮೂರನೇ ಅಂಪೈರ್ ತೀರ್ಪು ನೀಡಿರುವುದು ಇದೀಗ ವಿವಾದಕ್ಕೆ ಕಾರಣವಾಗಿದೆ.




**ಆರೇಂಜ್ ಕ್ಯಾಪ್ ಮ್ಯಾನ್ ಆಫ್ ದಿ ಸಿರೀಜ್ ವೈಭವ ಸೂರ್ಯವಂಶಿ**



**ಆರ್‌ಸಿಬಿ ಬೌಲರ್‌ಗಳ ಮಾರಕ ಬೌಲಿಂಗ್ ದಾಳಿ**

**ಜೋಶ್ ಹ್ಯಾಜಲ್‌ವುಡ್ ಮತ್ತು ಭುವನೇಶ್ವರ್ ಕುಮಾರ್ ತಲಾ ಎರಡು ವಿಕೆಟ್**

### ಆರ್‌ಸಿಬಿ ವೇಗಿಗಳ ದಾಳಿಗೆ ಗುಜರಾತ್ ಟೈಟನ್ಸ್ ಸೈಲೆಂಟ್!

ಆರ್‌ಸಿಬಿ ಪರ ಯುವ ವೇಗಿ ರಸಿಖ್ ದಾರ್ ಸಲಾಮ್ ಅದ್ಭುತ ಬೌಲಿಂಗ್ ಪ್ರದರ್ಶನ ಮಾಡಿದ್ದಾರೆ. ಗುಜರಾತ್ ತಂಡವನ್ನು ಕಟ್ಟಿ ಹಾಕುವಲ್ಲಿ ರಸಿಖ್ ದಾರ್ ಪ್ರಮುಖ ಪಾತ್ರವಹಿಸಿದ್ದಾರೆ. ಕೊನೆಯ 20ನೇ ಓವರ್‌ನಲ್ಲಿ ರಶೀದ್ ಖಾನ್ ಅವರನ್ನು ರಸಿಖ್ ದಾರ್ ಔಟ್ ಮಾಡಿದರು. ಈ ಮೂಲಕ ರಸಿಖ್ ದಾರ್ ಮೂರು ವಿಕೆಟ್ ಕಬಳಿಸಿ ಮಿಂಚಿದ್ದಾರೆ.

### ಆರ್‌ಸಿಬಿಗೆ ಪರ್ವ ಕಾಲ, ಜಿಟಿಗೆ ರಾಹುಕಾಲ

• ಉದಯವಾಹಿನಿ, ದೆಹಲಿ

ಆರ್‌ಸಿಬಿ.. ಮಿಲಿಯನ್ ಡಾಲರ್ ಟೂರ್ನಿ ಐಪಿಎಲ್‌ನಲ್ಲಿ ಅತಿ ಹೆಚ್ಚು ಅಭಿಮಾನಿ ಬಳಗವನ್ನು ಹೊಂದಿರುವ ತಂಡ. ಈ ತಂಡದ ಪರವಾಗಿ ಹಲವು ದಿಗ್ಗಜ ಕ್ರಿಕೆಟಿಗರು ಸಾಕಷ್ಟು ವರ್ಷ ಕ್ರಿಕೆಟ್ ಆಡಿದ್ದಾರೆ. ಆದರೆ ಅಂತಹವರ ಉಪಸ್ಥಿತಿಯ ಹೊರತಾಗಿಯೂ ಸತತ 17 ವರ್ಷಗಳವರೆಗೆ ಆರ್‌ಸಿಬಿಗೆ ಒಮ್ಮೆಯೂ ಚಾಂಪಿಯನ್ ಪಟ್ಟಕ್ಕೇರಲು ಸಾಧ್ಯವಾಗಲಿಲ್ಲ. ಆದರೆ ಕಳೆದ ಆವೃತ್ತಿಯಲ್ಲಿ ಆ ಟ್ರೋಫಿ ಬರವನ್ನು ನೀಗಿಸಿಕೊಂಡು ತನ್ನ ಅಭಿಮಾನಿಗಳು ನೀರಾಳರಾಗುವಂತೆ ಮಾಡಿದ್ದ ಆರ್‌ಸಿಬಿ ಇದೀಗ 2026 ರ ಐಪಿಎಲ್‌ನಲ್ಲೂ ಟ್ರೋಫಿ ಎತ್ತಿಹಿಡಿಯುವ ಮೂಲಕ ತನ್ನ ಅಭಿಮಾನಿ ಬಳಗಕ್ಕೆ ಡಬಲ್ ಸಂತೋಷ ನೀಡಿದೆ. ಗುಜರಾತ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ಗುಜರಾತ್ ತಂಡವನ್ನು ಮಣಿಸಿದ ಆರ್‌ಸಿಬಿ ತನ್ನ ಹಾಲಿ ಚಾಂಪಿಯನ್ ಪಟ್ಟವನ್ನು ತನ್ನಲ್ಲಿಯೇ ಉಳಿಸಿಕೊಂಡಿದೆ.


**ಮುಂಬೈ ದಾಖಲೆ ಮುರಿದ ಆರ್‌ಸಿಬಿ:** ಇಂಡಿಯನ್ ಪ್ರೀಮಿಯರ್ ಲೀಗ್ 2026ರ ಟೂರ್ನಿಯಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ಬೌಲಿಂಗ್‌ನಲ್ಲಿ ಅಪರೂಪದ ದಾಖಲೆಯನ್ನು ಬರೆದಿದೆ. ಐಪಿಎಲ್ ಫೈನಲ್ ಪಂದ್ಯದ ಪವರ್ ಪ್ಲೇನಲ್ಲಿ ಶುಭಮನ್ ಗಿಲ್ ಹಾಗೂ ಸಾಯಿ ಸುದರ್ಶನ್ ಅವರನ್ನು ಔಟ್ ಮಾಡುವ ಮೂಲಕ ಆರ್‌ಸಿಬಿ ತಂಡ, ಏಕೈಕ ಐಪಿಎಲ್ ಸೀಸನ್‌ನ ಪವರ್‌ಪ್ಲೇನಲ್ಲಿ 35 ವಿಕೆಟ್‌ಗಳನ್ನು ಕಬಳಿಸಿದ ಮೊದಲ ತಂಡ ಎಂಬ ದೊಡ್ಡ ದಾಖಲೆಯನ್ನು ಆರ್‌ಸಿಬಿ ತಂಡ ಬರೆದಿದೆ. ಆ ಮೂಲಕ ಈ ಹಿಂದೆ 2013ರಲ್ಲಿ ಮುಂಬೈ ಇಂಡಿಯನ್ಸ್ ಹಾಗೂ 2023ರಲ್ಲಿ ತನ್ನದೇ ಜಂಟಿ ದಾಖಲೆಯನ್ನು ಬೆಂಗಳೂರು ತಂಡ ಇದೀಗ ಬ್ರೇಕ್ ಮಾಡಿದೆ. ಭಾನುವಾರ ಇಲ್ಲಿನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆದಿದ್ದ ಫೈನಲ್ ಪಂದ್ಯದ ಗುಜರಾತ್ ಟೈಟನ್ಸ್ ಇನಿಂಗ್ಸ್ ವೇಳೆ ಆರ್‌ಸಿಬಿ ಈ ದಾಖಲೆಯನ್ನು ಬರೆಯಿತು. ಅಂದ ಹಾಗೆ ಆರ್‌ಸಿಬಿಯ ಈ ದಾಖಲೆಯನ್ನು ಮುರಿಯಲು ಗುಜರಾತ್ ಟೈಟನ್ಸ್‌ಗೆ ಪವರ್‌ಪ್ಲೇನಲ್ಲಿ ಮೂರು ವಿಕೆಟ್ ಗಳನ್ನು ಪಡೆಯಬೇಕಾಗಿತ್ತು. ಆದರೆ, ಆರ್‌ಸಿಬಿ ಇದಕ್ಕೆ ಅವಕಾಶ ಮಾಡಿಕೊಡಲಿಲ್ಲ. 156 ರನ್‌ಗಳ ಚೇಸಿಂಗ್‌ನಲ್ಲಿ ಆರ್‌ಸಿಬಿ ಪವರ್‌ಪ್ಲೇ ಅಂತ್ಯಕ್ಕೆ 70 ರನ್‌ಗಳಿಗೆ ಎರಡು ವಿಕೆಟ್ ಕಳೆದುಕೊಂಡಿತ್ತು. ಆ ಮೂಲಕ ಜಿಟಿ, ಆರ್‌ಸಿಬಿ ಜೊತೆ ಜಂಟಿ ದಾಖಲೆಯನ್ನು ಹೊಂದಿದೆ. ಇದೇ ತಂತ್ರವನ್ನು ಮುಂದುವರಿಸಿದ ಭುವನೇಶ್ವರ್ ಕುಮಾರ್ ಬಳಿಕ ಸಾಯಿ ಸುದರ್ಶನ್ ವಿಕೆಟ್‌ನ್ನೂ ಕಬಳಿಸಿದರು. ಹೇಝಲ್‌ವುಡ್‌ನಂತೆ ಅವರು ಕೂಡ ಸತತ ಎರಡು ಬೌನ್ಸರ್‌ಗಳನ್ನು ಎಸೆದರು. ಎರಡನೇ ಬೌನ್ಸರ್ ಸುದರ್ಶನ್‌ಗೆ ಅಚ್ಚರಿ ಉಂಟುಮಾಡಿದ್ದು, ಬ್ಯಾಟ್‌ನ ಅಂಚು ತಗುಲಿ ಚೆಂಡು ವಿಕೆಟ್‌ಕೀಪರ್ ಕಡೆಗೆ ಹಾರಿತು. ಜಿತೇಶ್ ಶರ್ಮಾ ಯಾವುದೇ ತಪ್ಪು ಮಾಡದೇ ಕ್ಯಾಚ್ ಪಡೆದು ಜಿಟಿಗೆ ಮತ್ತೊಂದು ದೊಡ್ಡ ಹೊಡೆತ ನೀಡಿದರು.

ಶುಭಮನ್ ಗಿಲ್ ಮತ್ತು ಸಾಯಿ ಸುದರ್ಶನ್ ಈ ಸೀಸನ್‌ನಲ್ಲಿ ಪವರ್‌ಪ್ಲೇ ಅವಧಿಯಲ್ಲೇ ಔಟಾಗಿದ್ದು ಕೇವಲ ನಾಲ್ಕು ಬಾರಿ ಮಾತ್ರ. ಮೂರು ಸಂದರ್ಭಗಳಲ್ಲಿ ಅವರನ್ನು ಔಟ್ ಮಾಡಿದ್ದ ತಂಡವೇ ಆರ್‌ಸಿಬಿ. ಈ ಬಾರಿ ಕೂಡ ಆರಂಭದಲ್ಲೇ ಈ ಇಬ್ಬರು ಪ್ರಮುಖ ಬ್ಯಾಟರ್‌ಗಳನ್ನು ಕಳೆದುಕೊಂಡ ಪರಿಣಾಮ, ಗುಜರಾತ್ ತಂಡ ಸಂಪೂರ್ಣವಾಗಿ ಚೇತರಿಸಿಕೊಳ್ಳಲು ವಿಫಲವಾಯಿತು. ಪರಿಣಾಮವಾಗಿ ಪ್ರಥಮ ಇನಿಂಗ್ಸ್‌ನಲ್ಲಿ ಕೇವಲ 155/8 ರನ್‌ಗಳಿಗೆ ಸೀಮಿತಗೊಂಡಿದ್ದು, ಫೈನಲ್ ಪಂದ್ಯದಲ್ಲಿ ಇದು ತಂಡಕ್ಕೆ ದೊಡ್ಡ ಹಿನ್ನಡೆಯಾಗಿ ಪರಿಣಮಿಸಿತು. **ಸಿಎಸ್‌ಕೆ ದಾಖಲೆ ಮುರಿದ ಆರ್‌ಸಿಬಿ:** 2026ರ ಐಪಿಎಲ್ ಫೈನಲ್ ಅಹಮದಾಬಾದ್‌ನ ನರೇಂದ್ರ ಮೋದಿ ಮೈದಾನದಲ್ಲಿ ನಡೆಯಿತು. ಬ್ಯಾಟಿಂಗ್ ಮಾಡಿದ ಆತಿಥೇಯ ಗುಜರಾತ್ ತಂಡ ನಿಗದಿತ 20 ಓವರ್‌ಗಳಲ್ಲಿ 8 ವಿಕೆಟ್‌ಗಳನ್ನು ಕಳೆದುಕೊಂಡು 155 ರನ್ ಕಲೆಹಾಕಿತು. ಈ ಮೂಲಕ ಆರ್‌ಸಿಬಿ ಗೆಲುವಿಗೆ 156 ರನ್‌ಗಳ ಗುರಿ ನೀಡಿತು. ಈ ಗುರಿ ಬೆನ್ನಟ್ಟಿದ ಆರ್‌ಸಿಬಿಗೆ ಸ್ಫೋಟಕ ಆರಂಭ ಸಿಕ್ಕಿತು. ಕೊಹ್ಲಿ, ವೆಂಕಟೇಶ್ ಅಯ್ಯರ್ ಮೊದಲ ವಿಕೆಟ್‌ಗೆ 62 ರನ್‌ಗಳ ಜೊತೆಯಾಟ ನೀಡಿದರು. ಇವರಿಬ್ಬರು ತೆಗೆದುಕೊಂಡಿದ್ದು ಕೇವಲ 27 ಎಸೆತಗಳು ಮಾತ್ರ. ಈ ಹೈವೋಲ್ಟೇಜ್ ಕದನದಲ್ಲಿ ಒತ್ತಡವನ್ನು ಸಮರ್ಥವಾಗಿ ನಿಭಾಯಿಸಿದ ಆರ್‌ಸಿಬಿ ಆರಂಭಿಕರು ಸ್ಫೋಟಕ ಆಟಕ್ಕೆ ಮುಂದಾದರು. ಇವರಿಬ್ಬರ ಸಿಡಿಲಬ್ಬರದ ಬ್ಯಾಟಿಂಗ್‌ನಿಂದ ಆರ್‌ಸಿಬಿ ಕೇವಲ 3.3 ಓವರ್‌ಗಳಲ್ಲಿ 50 ರನ್‌ಗಳ ಗಡಿ ದಾಟಿತು. ಆರ್‌ಸಿಬಿ ಐಪಿಎಲ್ ಫೈನಲ್ ಇತಿಹಾಸದಲ್ಲಿ ಅತಿ ಕಡಿಮೆ ಎಸೆತಗಳಲ್ಲಿ 50 ರನ್ ಬಾರಿಸಿದ ತಂಡವೆಂಬ ದಾಖಲೆ ಬರೆಯಿತು. 2023ರ ಐಪಿಎಲ್‌ನಲ್ಲಿ ಗುಜರಾತ್ ವಿರುದ್ಧದ ಫೈನಲ್ ಪಂದ್ಯದಲ್ಲಿ 24 ಎಸೆತಗಳಲ್ಲಿ 50 ರನ್ ಬಾರಿಸಿದ್ದ ಸಿಎಸ್‌ಕೆ ತಂಡದ ದಾಖಲೆಯನ್ನು ಮುರಿಯಿತು.

### ಸಿಕ್ಸರ್‌ಗಳ ಸುರಿಮಳೆಗೈದ ಕೊಹ್ಲಿ


ಆರ್‌ಸಿಬಿಯ ಈ ಐತಿಹಾಸಿಕ ಕಪ್ ಗೆಲುವಿನಲ್ಲಿ ರನ್ ಮಷಿನ್ ವಿರಾಟ್ ಕೊಹ್ಲಿ ಮತ್ತೊಮ್ಮೆ ಅತ್ಯಂತ ನಿರ್ಣಾಯಕ ಪಾತ್ರವಹಿಸಿದರು. ವಿರಾಟ್ ಕೊಹ್ಲಿ ಆರಂಭಿಕ ಆಟಗಾರನಾಗಿ ಕ್ರೀಸ್‌ಗಿಳಿದು ಜಿಟಿ ಬೌಲರ್‌ಗಳ ಮೇಲೆ ಸವಾರಿ ಮಾಡಿದರು. ಪಂದ್ಯದ ಮೊದಲ ಓವರ್‌ನಿಂದಲೇ ಮೈದಾನದ ಮೂಲೆ ಮೂಲೆಗೂ ಬೌಂಡರಿ, ಸಿಕ್ಸರ್‌ಗಳ ಸುರಿಮಳೆಗೈದ ಕೊಹ್ಲಿ ಅಜೇಯ 75 ರನ್ (42 ಎಸೆತ, 9 ಬೌಂಡರಿ, 3 ಸಿಕ್ಸ್) ಹೊಡೆದು ತಂಡಕ್ಕೆ ಜಯವನ್ನು ತಂದುಕೊಟ್ಟರು.

### ಶಮಿ ದಾಖಲೆ ಸರಿಗಟ್ಟಿದ ಭುವಿ



ಈ ಪಂದ್ಯದಲ್ಲಿ ಭುವನೇಶ್ವರ್ ಕುಮಾರ್ ಭಾರತದ ದಂತಕಥೆ ವೇಗದ ಬೌಲರ್ ಮೊಹಮ್ಮದ್ ಶಮಿ ಅವರ ದಾಖಲೆಯನ್ನು ಸರಿಗಟ್ಟಿದರು. ಅವರು ಈಗ ಒಂದೇ ಐಪಿಎಲ್ ಋತುವಿನಲ್ಲಿ ಅತಿ ಹೆಚ್ಚು ಪವರ್‌ಪ್ಲೇ ವಿಕೆಟ್‌ಗಳನ್ನು ಪಡೆದ ಭಾರತೀಯ ಬೌಲರ್ ಎಂಬ ದಾಖಲೆಯನ್ನ ಸರಿಗಟ್ಟಿದರು. ಟಾಸ್ ಗೆದ್ದು ಮೊದಲು ಬೌಲಿಂಗ್ ಮಾಡಲು ಆಯ್ಕೆ ಮಾಡಿಕೊಂಡ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ತಮ್ಮ ಅತ್ಯಂತ ಅನುಭವಿ ಬೌಲರ್‌ನಿಂದ ಆರಂಭಿಕ ವಿಕೆಟ್ ನಿರೀಕ್ಷಿಸುತ್ತಿತ್ತು.

ಭುವನೇಶ್ವರ್ ತಂಡವನ್ನ ನಿರಾಶೆಗೊಳಿಸಲಿಲ್ಲ. ಗುಜರಾತ್ ಟೈಟನ್ಸ್ ಇನ್ನಿಂಗ್ಸ್‌ನ ನಾಲ್ಕನೇ ಓವರ್‌ನಲ್ಲಿ ಭುವನೇಶ್ವರ್ ಸಾಯಿ ಸುದರ್ಶನ್ ವಿಕೆಟ್ ಪಡೆಯುವಲ್ಲಿ



### ಕೃನಾಲ್ ಬೌಲಿಂಗ್‌ಗೆ ಸಚಿನ್ ಮೆಚ್ಚುಗೆ

ಫೈನಲ್ ಪಂದ್ಯದಲ್ಲಿ ಅದ್ಭುತ ಬೌಲಿಂಗ್ ಮಾಡಿದ ಕೃನಾಲ್ ಪಾಂಡ್ಯ ತಮ್ಮ ನಾಲ್ಕು ಓವರ್‌ಗಳಲ್ಲಿ ಕೇವಲ 23 ರನ್‌ಗಳನ್ನು ಬಿಟ್ಟುಕೊಟ್ಟು ಸ್ಟಾರ್ ಬ್ಯಾಟರ್ ಜೋಸ್ ಬಟ್ಲರ್ ಅವರ ವಿಕೆಟ್ ಪಡೆದರು. ಗುಜರಾತ್ ಇನ್ನಿಂಗ್ಸ್‌ನ 13ನೇ ಓವರ್ ಅನ್ನು ಕೃನಾಲ್ ಪಾಂಡ್ಯ ಬೌಲಿಂಗ್ ಮಾಡಿದರು. ಇತ್ತ ಸ್ಟ್ರೈಕ್‌ನಲ್ಲಿದ್ದ ಜೋಸ್ ಬಟ್ಲರ್ ಈಗಾಗಲೇ ಕ್ರೀಸ್‌ನಲ್ಲಿ ನೆಲೆಸಿದ್ದರು. ಓವರ್‌ನ ಮೊದಲ ಎಸೆತದಲ್ಲೇ ಬಟ್ಲರ್ ದೊಡ್ಡ ಶಾಟ್ ಹೊಡೆಯಲು ಮುಂದಾಗಿ ಕ್ರೀಸ್‌ನಿಂದ ಹೊರಬಂದರು. ಇದೀಗ ಕೃನಾಲ್ ಅವರ ಈ ಜಾಣ್ಮೆಯ ಬೌಲಿಂಗ್‌ಗೆ ಮೆಚ್ಚುಗೆ ವ್ಯಕ್ತಪಡಿಸಿರುವ ಸಚಿನ್ ತೆಂಡೂಲ್ಕರ್ ತಮ್ಮ ಎಕ್ಸ್ ಖಾತೆಯಲ್ಲಿ, ಕೃನಾಲ್ ಪಾಂಡ್ಯ ಅವರಿಂದ ಎಂತಹ ಅದ್ಭುತ ಎಸೆತ! ಕೊನೆಯವರೆಗೂ ಬ್ಯಾಟ್ಸ್‌ಮನ್‌ನ ಪಾದಚಲನೆಯನ್ನು ಗಮನಿಸಿ ಚೆಂಡನ್ನು ಬೌಲ್ ಮಾಡಿದರು. ಇದರೊಂದಿಗೆ ಜೋಸ್ ಬಟ್ಲರ್ ಅವರನ್ನು ಪೆವಿಲಿಯನ್‌ಗೆ ಕಳುಹಿಸಿದರುಎಂದು ಬರೆದುಕೊಂಡಿದ್ದಾರೆ.



## ಪೂರ್ವ ಮುಂಗಾರು ಮಳೆ ಕೊರತೆ : ಜಲಾಶಯಗಳಲ್ಲಿ ನೀರಿನ ಮಟ್ಟ ಇಳಿಕೆ

• ಉದಯವಾಹಿನಿ, ಬೆಂಗಳೂರು

ಪೂರ್ವ ಮುಂಗಾರು ಮಳೆ ಸಾಕಷ್ಟು ಪ್ರಮಾಣದಲ್ಲಿ ಬೀಳದ ಹಿನ್ನೆಲೆಯಲ್ಲಿ ಕಾವೇರಿ ಕೊಳ್ಳದ ಜಲಾಶಯಗಳಿಗೆ ಒಳಹರಿವು ಆರಂಭವಾಗಿಲ್ಲ. ಹೀಗಾಗಿ ಗಣನೀಯ ಪ್ರಮಾಣದಲ್ಲಿ ಜಲಾಶಯದ ನೀರು ಕಡಿಮೆಯಾಗುತ್ತಿದೆ. ಮುಂಗಾರು ಸಕಾಲದಲ್ಲಿ ಆರಂಭಗೊಂಡು ಜಲಾನಯನ ಪ್ರದೇಶದಲ್ಲಿ ವಾಡಿಕೆಗಿಂತ ಹೆಚ್ಚು ಮಳೆಯಾದರೆ ಜಲಾಶಗಳಿಗೆ ಸಾಕಷ್ಟು ನೀರು ಹರಿದು ಬರಲಿದೆ. ಇಲ್ಲದಿದ್ದರೆ, ಜಲಾಶಯಗಳೂ ನೀರಿನ ಕೊರತೆ ಎದುರಿಸಬೇಕಾಗಬಹುದು.

ಕರ್ನಾಟಕ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ ಮಾಹಿತಿ ಪ್ರಕಾರ ಮೇ 30ರ ವೇಳೆಗೆ ಕಾವೇರಿ ಕೊಳ್ಳದ ನಾಲ್ಕು ಜಲಾಶಗಳಲ್ಲಿ ಕಳೆದ ವರ್ಷಕ್ಕೆ ಹೋಲಿಸಿದರೆ, ಶೇ.50 ರಷ್ಟು ಕಡಿಮೆ ನೀರಿನ ಸಂಗ್ರಹವಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ 67.06 ಟಿಎಂಸಿ ಅಡಿ ನೀರು ನಾಲ್ಕು ಜಲಾಶಯಗಳಲ್ಲಿತ್ತು. ಆದರೆ, ಈ ವರ್ಷ ಕೇವಲ 33.83 ಟಿಎಂಸಿ ಅಡಿಯಷ್ಟಿದೆ. ಅಂದರೆ ಶೇ. 30ರಷ್ಟು ಮಾತ್ರ ನೀರಿದೆ.

ಹಾರಂಗಿ ಜಲಾಶಯದಲ್ಲಿ 2.98 ಟಿಎಂಸಿ ನೀರಿದ್ದು, ಕಳೆದ ವರ್ಷ 5.11 ಟಿಎಂಸಿ ನೀರಿತ್ತು. ಹೇಮಾವತಿ ಜಲಾಶಯದಲ್ಲಿ 14.77 ಟಿಎಂಸಿ ನೀರಿದ್ದು, ಕಳೆದ ರ್ಷ 23.31 ಟಿಎಂಸಿ ನೀರು ಸಂಗ್ರಹವಾಗಿತ್ತು. ಕೆಆರ್‌ಎಸ್ ಜಲಾಶಯಲ್ಲಿ 11.36 ಟಿಎಂಸಿ ನೀರಿದ್ದು,



22.89 ಟಿಎಂಸಿ ನೀರು ಕಳೆದ ವರ್ಷ ಸಂಗ್ರಹವಾಗಿತ್ತು. ಕಬಿನಿ ಜಲಾಶಯದಲ್ಲಿ 4.73 ಟಿಎಂಸಿ ನೀರಿದ್ದು, ಕಳೆದ ವರ್ಷ 15.75 ಟಿಎಂಸಿ ನೀರು ಸಂಗ್ರಹವಾಗಿತ್ತು. ನಾಲ್ಕು ಜಲಾಶಗಳ ಗರಿಷ್ಠ ಸಾಮರ್ಥ್ಯ 114.57 ಟಿಎಂಸಿ ಆಗಿದ್ದು, ಈಗ ಕೇವಲ 33.83 ಟಿಎಂಸಿಯಷ್ಟು ಮಾತ್ರ ಇದೆ. ಕೆಆರ್‌ಎಸ್ ಜಲಾಶಯದ ಗರಿಷ್ಠ ಸಾಮರ್ಥ್ಯ 124.80 ಅಡಿಗಳಾಗಿದ್ದು, ಪ್ರಸ್ತುತ 81.28 ಅಡಿಗಳಷ್ಟಿದೆ. ಕಳೆದ ವರ್ಷ 100.10 ಅಡಿಗಳಷ್ಟು ನೀರು ಸಂಗ್ರಹವಾಗಿತ್ತು.ಕಳೆದ ವರ್ಷ ಪೂರ್ವ ಮುಂಗಾರು ಹಾಗೂ ಮುಂಗಾರು ಮಳೆ ಕಾವೇರಿ ಕೊಳ್ಳದ ಜಲಾನಯನ ಭಾಗದಲ್ಲಿ ಉತ್ತಮವಾಗಿತ್ತು. ಹೀಗಾಗಿ ಈ ನಾಲ್ಕು ಜಲಾಶಯಗಳು ಪೂರ್ಣ ಪ್ರಮಾಣದಲ್ಲಿ ತುಂಬಿದ್ದವು. ಹಿಂಗಾರು ಮಳೆ ಕೈಕೊಟ್ಟಿತ್ತು. ಜತೆಗೆ ಬೇಸಿಗೆ ಮಳೆಯೂ ವಾಡಿಕೆ ಪ್ರಮಾಣದಲ್ಲಿ ಬೀಳಲಿಲ್ಲ. ಮಾರ್ಚ್ ಮತ್ತು ಮೇ ನಡುವಿನ ಪೂರ್ವ ಮುಂಗಾರು ಮಳೆಯೂ ಸಾಕಷ್ಟು ಪ್ರಮಾಣದಲ್ಲಿ ಆಗಲಿಲ್ಲ. ಕೆಲವೆಡೆ ಮಳೆಯಾದರೂ ಜಲಾಶಯಗಳಿಗೆ ಒಳ ಹರಿವು ಬರುವಷ್ಟು ಮಳೆಯಾಗಿಲ್ಲ.

## ಶಾಲೆಯ ಮುಂದೆಯೇ ಲಾಂಗ್ ಬೀಸಿದ ಪುಂಡರು

• ಉದಯವಾಹಿನಿ, ಬೆಂಗಳೂರು:

ಕಾನೂನು ಸುವ್ಯವಸ್ಥೆಗೆ ಹೆಸರಾಗಿದ್ದ ಸಿಲಿಕಾನ್ ಸಿಟಿ ಬೆಂಗಳೂರು ಇತ್ತೀಚಿನ ದಿನಗಳಲ್ಲಿ ಪುಂಡರ ಅಡ್ಡೆಯಾಗುತ್ತಿದೆಯೇ ಎಂಬ ಅನುಮಾನ ಮೂಡಲಾರಂಭಿಸಿದೆ. ನಗರದ ಡೇನಿಸ್ ರಸ್ತೆಯ ಸೆಂಟ್ ಅಲ್ಫೋನ್ಸಸ್ ಶಾಲೆಯ ಜಂಕ್ಷನ್ ಬಳಿ, ಸಾರ್ವಜನಿಕವಾಗಿ ಯುವಕರ ಗುಂಪೊಂದು ಮಾರಕಾಸ್ತ್ರ ಪ್ರದರ್ಶಿಸಿ ದಾದಾಗಿರಿ ನಡೆಸಿರುವ ಬೆಚ್ಚಿಬೀಳಿಸುವ ಘಟನೆ ಮುಂಜಾನೆ ನಡೆದಿದೆ. ಈ ಕುರಿತಾದ ವೀಡಿಯೊ ಸೋಷಿಯಲ್ ಮೀಡಿಯಾದಲ್ಲಿ ವೈರಲ್ ಆಗಿದೆ. ಈ ವಿಡಿಯೋವನ್ನು ನೋಡಿ ನಾಗರಿಕರು ಆತಂಕಗೊಂಡಿದ್ದಾರೆ.

ಲಕ್ಕಿ ಜಂಕ್ಷನ್‌ನ ಗೌಸಿಯಾ ಟೀ ಹೋಟೆಲ್ ಎದುರು ಶನಿವಾರ ಬೆಳಿಗ್ಗೆ ಸುಮಾರು 7:30ರ ಸುಮಾರಿಗೆ ಈ ಘಟನೆ ಸಂಭವಿಸಿದೆ.

ಈ ಬಗ್ಗೆ ಸ್ಥಳೀಯ ನಿವಾಸಿಯೊಬ್ಬರು ಹಂಚಿಕೊಂಡಿರುವ ಮಾಹಿತಿ ಪ್ರಕಾರ, ಎರಡು ಸ್ಕೂಟರ್‌ಗಳಲ್ಲಿ ಹೆಲ್ಮೆಟ್ ಧರಿಸದೆ, ಟ್ರಾಫಿಕ್ ನಿಯಮಗಳನ್ನು ಸಂಪೂರ್ಣ ಗಾಳಿಗೆ ತೂರಿ ಒಂದೊಂದು ದ್ವಿಚಕ್ರ ವಾಹನದಲ್ಲಿ ತಲಾ ನಾಲ್ಕು ಜನರಂತೆ ಒಟ್ಟು ಎಂಟು ಜನ ಯುವಕರು ಬಂದಿದ್ದರು. ಅಲ್ಲಿ ಸಣ್ಣ ವಿಷಯಕ್ಕೆ ಪರಸ್ಪರ ತೀವ್ರ ಜಗಳ ಆರಂಭಿಸಿದ್ದಾರೆ. ಯುವಕರ ನಡುವಿನ ಮಾತಿನ ಚಕಮಕಿ ತೀವ್ರಗೊಳ್ಳುತ್ತಿದ್ದಂತೆ, ಆ ಗುಂಪಿನಲ್ಲಿದ್ದ ಒಬ್ಬ ಪುಂಡ ಸಾರ್ವಜನಿಕ ರಸ್ತೆಯಲ್ಲೇ ದೊಡ್ಡ ಲಾಂಗ್ ಹೊರತೆಗೆದು ಬೀಸುತ್ತಾ ಎದುರಾಳಿಗಳಿಗೆ ಮತ್ತು ಸಾರ್ವಜನಿಕರಿಗೆ ಬೆದರಿಕೆ ಹಾಕಿದ್ದಾನೆ.

ಈ ಘಟನೆ ನಡೆದ ಸ್ಥಳದ ಅಕ್ಕಪಕ್ಕದಲ್ಲೇ ಶಾಲೆ, ಟೀ ಸ್ಟಾಲ್ ಹಾಗೂ ಸಿಗರೇಟ್ ಅಂಗಡಿಗಳಿರುವುದರಿಂದ, ಮುಂಜಾನೆ ಶಾಲೆಗೆ ತೆರಳುತ್ತಿದ್ದ ಸಣ್ಣ ಸಣ್ಣ ಮಕ್ಕಳು, ಪೋಷಕರು ಹಾಗೂ ಸವಾರರು ಈ ರೌಡಿಸಂ ನೋಡಿ ತೀವ್ರ ಭಯಭೀತರಾಗಿದ್ದಾರೆ. ಇತ್ತೀಚೆಗೆ ಈ ಭಾಗದಲ್ಲಿ ಇಂತಹ ಗಾಂಜಾ ಪುಂಡರ ಮತ್ತು ರೌಡಿಗಳ ಹಾವಳಿ ಹೆಚ್ಚಾಗುತ್ತಿದೆ ಎಂದು ಸ್ಥಳೀಯರು ಆರೋಪಿಸಿದ್ದಾರೆ.

## ಸಿದ್ದರಾಮಯ್ಯ ಎಂದೂ ದ್ವೇಷ ರಾಜಕಾರಣ ಮಾಡಿಲ್ಲ ; ಇನ್ಮುಂದು ಇದು ನಡೆಯಲ್ಲ ಬಿಜೆಪಿಯ ಇಬ್ಬರಿಗೆ ಹುಷಾರು ಎಂದ ಯತ್ನಾಳ್

• ಉದಯವಾಹಿನಿ ,ಬೆಂಗಳೂರು

ಸಿಸಿಎಂ ಆಗಿದ್ದ ಸಿದ್ದರಾಮಯ್ಯ ಎಂದೂ ದ್ವೇಷ ರಾಜಕಾರಣ ಮಾಡಿಲ್ಲ. ಆದರೆ, ಮುಂದಿನ ದಿನಗಳಲ್ಲಿ ಇದು ನಡೆಯಲ್ಲ. ಬಿಜೆಪಿಯ ಬಿವೈ ವಿಜಯೇಂದ್ರ, ಆರ್ ಅಶೋಕ್ ಮಾತನಾಡುವ ಮುನ್ನ ಹುಷಾರು ಎಂದು ಶಾಸಕ ಬಸನಗೌಡ ಯತ್ನಾಳ್ ಸಲಹೆ ನೀಡಿದ್ದಾರೆ. ಸಿಎಂ ಆಗಿದ್ದ ಸಿದ್ದರಾಮಯ್ಯ ಎಂದೂ ದ್ವೇಷ ರಾಜಕಾರಣ ಮಾಡಿಲ್ಲ. ಆದರೆ, ಮುಂದಿನ ದಿನಗಳಲ್ಲಿ ಇದು ನಡೆಯಲ್ಲ. ಬಿಜೆಪಿಯ ಬಿವೈ ವಿಜಯೇಂದ್ರ, ಆರ್ ಅಶೋಕ್ ಮಾತನಾಡುವ ಮುನ್ನ ಹುಷಾರು ಎಂದು ಶಾಸಕ ಬಸನಗೌಡ ಯತ್ನಾಳ್ ಸಲಹೆ ನೀಡಿದ್ದಾರೆ. ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಅವರು ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡುತ್ತಾ, ರಾಜ್ಯ ರಾಜಕೀಯ, ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ. ಶಿವಕುಮಾರ್, ಹಾಗೂ ವಿಜಯಪುರದ ಕಾನೂನು ಸುವ್ಯವಸ್ಥೆ ಕುರಿತು ಹಲವು ಹೇಳಿಕೆಗಳನ್ನು ನೀಡಿದ್ದಾರೆ.

ಯಾವಾಗಲೂ ಸಿಎಂ ಸಿದ್ದರಾಮಯ್ಯ ವಿರುದ್ಧ ವಾಗ್ದಾಳಿ ನಡೆಸುವ ಯತ್ನಾಳ್, ಈ ಬಾರಿ ಅಚ್ಚರಿ ಎಂಬಂತೆ ಅವರ ಪರ ಬ್ಯಾಟಿಂಗ್ ಮಾಡಿದ್ದಾರೆ. ನಾನೊಬ್ಬ ಲಿಂಗಾಯತ ನಾಯಕನಾಗಿ ಸಿದ್ದರಾಮಯ್ಯನವರ ಬಗ್ಗೆ ಕೀಳಾಗಿ ಮಾತನಾಡುವುದಿಲ್ಲ. ಅವರೊಬ್ಬ ಹಿರಿಯ ನಾಯಕರು ಹಾಗೂ ಅತಿ ಹೆಚ್ಚು ಬಾರಿ ಬಜೆಟ್ ಮಂಡಿಸಿದ ಅನುಭವಿ.




ಅವರಲ್ಲಿರುವ ಒಂದು ಒಳ್ಳೆಯ ಗುಣವೆಂದರೆ, ಅವರು ಎಂದಿಗೂ 'ವೈಯಕ್ತಿಕ ದ್ವೇಷ' ಸಾಧಿಸುವುದಿಲ್ಲ. ನಾವು ಎಷ್ಟೇ ಟೀಕೆ ಮಾಡಿದರೂ, ವಿರೋಧ ಮಾಡಿದರೂ ಅವರು ಹಳೆಯ ಫೈಲ್‌ಗಳನ್ನು ತೆಗೆದು ದ್ವೇಷದ ರಾಜಕಾರಣ ಮಾಡುವವರಲ್ಲ. ಆದರೆ ಈಗ ಬರುವವರು (ಬೇರೆ ನಾಯಕರನ್ನು ಪರೋಕ್ಷವಾಗಿ ಉಲ್ಲೇಖಿಸಿ) ಆ ಕೆಲಸ ಮಾಡುತ್ತಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಮುಖ್ಯಮಂತ್ರಿ ಬದಲಾವಣೆ ವದಂತಿಗಳ ಕುರಿತು ಮಾತನಾಡಿದ ಅವರು, ಸಿದ್ದರಾಮಯ್ಯನವರು ರಾಜೀನಾಮೆ ನೀಡಿದರೆ, ಡಿ.ಕೆ. ಶಿವಕುಮಾರ್ ಅವರು ಮುಖ್ಯಮಂತ್ರಿಯಾಗುತ್ತಾರೆ ಎಂಬ ಲೆಕ್ಕಾಚಾರದಲ್ಲಿ ದೆಹಲಿಗೆ ಹೋಗುತ್ತಿದ್ದಾರೆ. ಆದರೆ, ಡಿ.ಕೆ. ಶಿವಕುಮಾರ್ ಸಿಎಂ ಆದರೆ ಅವರಿಗಿಂತ ಹೆಚ್ಚು ಖುಷಿ ಪಡುವುದು ನಮ್ಮ ಬಿಜೆಪಿ ರಾಜ್ಯಾಧ್ಯಕ್ಷರು (ಬಿ.ವೈ. ವಿಜಯೇಂದ್ರ). ಅವರಿಬ್ಬರೂ ಬ್ಯುಸಿನೆಸ್ ಪಾರ್ಟ್ನರ್‌ಗಳು ಎಂದು ಸ್ವಪಕ್ಷದ ನಾಯಕನ ವಿರುದ್ಧವೇ ಪರೋಕ್ಷವಾಗಿ ತೀವ್ರ ವಾಗ್ದಾಳಿ ನಡೆಸಿದರು. ಇತ್ತೀಚೆಗೆ ಸಿದ್ದರಾಮಯ್ಯನವರು ರಾಜೀನಾಮೆ ನೀಡುತ್ತಾರೆ ಎಂಬ ವದಂತಿ ಹಬ್ಬಿದಾಗ, ವಿಜಯಪುರದಲ್ಲಿ ಕೆಲವು ಮುಸ್ಲಿಮರು ಪಟಾಕಿ ಸಿಡಿಸಿ ಸಂಭ್ರಮಿಸಿದ್ದಾರೆ. ಸಿದ್ದರಾಮಯ್ಯನವರು ಮುಸ್ಲಿಮರಿಗೆ ಯಾವುದೇ



### ಭೀಮಾ ತೀರದ ರಕ್ತಚರಿತ್ರೆ ಬಗ್ಗೆ ಆತಂಕ

ಇದೇ ವೇಳೆ ವಿಜಯಪುರ ಜಿಲ್ಲೆಯ ಕಾನೂನು ಸುವ್ಯವಸ್ಥೆ ಬಗ್ಗೆ ಕಳವಳ ವ್ಯಕ್ತಪಡಿಸಿದ ಯತ್ನಾಳ್, ಭೀಮಾ ತೀರದಲ್ಲಿ ಮತ್ತೆ ಗುಂಡಿನ ಸದ್ದು ಕೇಳಿಸುತ್ತಿದೆ. ಸರಣಿ ಕೊಲೆಗಳು ನಡೆಯುತ್ತಿವೆ. ಈ ಹಿಂದೆ ಪ್ರತಾಪ್ ರೆಡ್ಡಿ ಅವರು ಎಸ್‌ಪಿ ಆಗಿದ್ದಾಗ ಇದನ್ನೆಲ್ಲಾ ಕಂಟ್ರೋಲ್ ಮಾಡಿದ್ದರು. ಆದರೆ ಈಗ ಮತ್ತೆ ರೌಡಿಗಳ ಹಾವಳಿ ಹೆಚ್ಚಾಗಿದೆ. ಪೊಲೀಸ್ ಇಲಾಖೆಯ ಭಯವೇ ಇಲ್ಲದಂತಾಗಿದೆ. ಎಸ್‌ಪಿ ಅವರು ಯಾವುದೇ ರಾಜಕೀಯ ಒತ್ತಡಕ್ಕೆ ಮಣಿಯದೆ, ತಪ್ಪು ಮಾಡಿದವರು ಎಷ್ಟೇ ದೊಡ್ಡವರಾಗಿದ್ದರೂ ಅವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ಜನರಿಗೆ ಪೊಲೀಸ್ ವ್ಯವಸ್ಥೆಯ ಮೇಲಿನ ನಂಬಿಕೆ ಹೋಗುತ್ತದೆ ಎಂದು ಎಚ್ಚರಿಕೆ ಹಾಗೂ ಸಲಹೆಯನ್ನು ನೀಡಿದರು.

ಅನ್ಯಾಯ ಮಾಡಿಲ್ಲ, ಆದರೂ ಅವರು ಯಾಕೆ ಹೀಗೆ ಸಂಭ್ರಮಿಸಿದರು? ಇದು ಅವರ ಮನಸ್ಥಿತಿಯನ್ನು ತೋರಿಸುತ್ತದೆ. ನಮ್ಮ ಧರ್ಮ, ನಮ್ಮ ಸಂಸ್ಕೃತಿ, ನಮ್ಮ ಜನ ನಮಗೆ ಮುಖ್ಯ ಎಂದು ಯತ್ನಾಳ್ ಗುಡುಗಿದರು.

**ಈ ದಿನದ ದರ** ಪೆಟ್ರೋಲ್: 110.89 ₹/L | ಡೀಸೆಲ್ : 98.80₹/L | ಬಂಗಾರ: ₹ 15,607/Gram 24ct ₹14,296 /Gram 22ct | ಬೆಳ್ಳಿ: ₹290.00/Gram

# ಬ್ರಾಹ್ಮಣ ಸಮುದಾಯದ ಮಹಿಳೆಯರಿಂದ ತಯಾರಿಕೆಯ ಆಹಾರ ಮತ್ತು ವಸ್ತುಗಳು ಮಾರಾಟ ಪ್ರದರ್ಶನ

• ಉದಯವಾಹಿನಿ, ಬೆಂಗಳೂರು

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಗಾಯಿತ್ರಿ ಭವನದಲ್ಲಿ ವಿಪ್ರ ಬ್ಯುಸಿನೆಸ್ ಫೋರಂ ವತಿಯಿಂದ ಮಾತೃ ವೈಭವ ಕಾರ್ಯಕ್ರಮ ಬ್ರಾಹ್ಮಣ ಸಮುದಾಯದ ಮಹಿಳೆಯರ ತಯಾರಿಕೆ ಮಾಡಿದ ಆಹಾರ ಮತ್ತು ವಸ್ತುಗಳ ಮಾರಾಟ ಮತ್ತು ಪ್ರದರ್ಶನ ಏರ್ಪಡಿಸಲಾಗಿತ್ತು. ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಅಧ್ಯಕ್ಷರಾದ ಅಸಗೋಡು ಜಯಸಿಂಹ, ವಿಪ್ರ ಬ್ಯುಸಿನೆಸ್ ಫೋರಂ ಅಧ್ಯಕ್ಷರಾದ ಆನಂದ್‌ರವರು,ಕಾರ್ಯದರ್ಶಿ ವಿಜಯರಾವ್, ವಿಪ್ರ ಸಮಾಜದ ಶ್ರೀಮತಿ ವಸುಧ, ಪದ್ಮ ಶೇಷಾದ್ರಿರವರು ದೀಪ ಬೆಳಗಿಸಿ ಉದ್ಘಾಟನೆ, ನಂತರ ಪ್ರದರ್ಶನ ಮಾರಾಟ ಮಳಿಗೆಯನ್ನು ಉದ್ಘಾಟಿಸಿದರು. ಬ್ರಾಹ್ಮಣ ಮಹಿಳೆಯರು ಸ್ವಾವಲಂಭಿ, ಸ್ವಾಭಿಮಾನಿಯಾಗಿ ಬದುಕಲು ಸ್ವಂತ ವ್ಯಾಪಾರ ಉದ್ಯಮಿ ಪ್ರಾರಂಭ ಮಾಡಿ ನಮ್ಮ




ಉದಯವಾಹಿನಿ ಚಿತ್ರ

ಅಭಿವೃದ್ಧಿ ಮಂಡಳಿಯಿಂದ ಸುಲಭ ಸಾಲ, ಸೌಲಭ್ಯ ಸಿಗಲಿದೆ. ಮಂಡಳಿಯಿಂದ ಪ್ರತಿಯೊಬ್ಬ ಮಹಿಳೆಗೆ 2ಲಕ್ಷ ಸಾಲ ಸೌಲಭ್ಯ ಸಿಗಲಿದೆ. ಇದುವರಗೆ 1116 ಜನರಿಗೆ ತಲಾ 2ಲಕ್ಷ ಸಾಲ ನೀಡಲಾಗಿದೆ ಇದರಲ್ಲಿ 376 ಹೆಣ್ಣು ಮಕ್ಕಳು ಇದರಲ್ಲಿ ಫಲಾನುಭವಿಗಳು ಇದ್ದಾರೆ.

ಅಂದಿನ ಮುಖ್ಯಮಂತ್ರಿ ಕುಮಾರಸ್ವಾಮಿ ಬ್ರಾಹ್ಮಣ ಅಭಿವೃದ್ಧಿ ಮಂಡಳಿಗೆ 50ಕೋಟಿ ಅನುದಾನ ನೀಡಿದ್ದರು. ಆರ್.ವಿ.ದೇಶಪಾಂಡೆ ಮತ್ತು ದಿನೇಶ್ ಗುಂಡೂರಾವ್ ರವರ ಸಹಕಾರ ಮರೆಯುವಂತಿಲ್ಲ. ಮಂಡಳಿ ವತಿಯಿಂದ ಪ್ರತಿ ಜಿಲ್ಲೆಯಲ್ಲಿ ಅತಿ ಹೆಚ್ಚು ಅಂಕ ಪಡೆದವರಿಗೆ ನಗದು ಪುರಸ್ಕಾರ ನೀಡಲಾಗುತ್ತಿದೆ. ಮೆಡಿಕಲ್, ಇಂಜನಿಯರಿಂಗ್ ವಿದ್ಯಾರ್ಥಿಗಳಿಗೆ ಆರ್ಥಿಕ ಸಹಾಯ ನೀಡಲಾಗುತ್ತಿದೆ ಎಂದು ಹೇಳಿದರು. ಅಧ್ಯಕ್ಷರಾದ ಆನಂದ್ ರವರು ಮಾತನಾಡಿ ಮಾತೃ ವೈಭವ ಎಂದರೆ ನಮ್ಮ ವಿಪ್ರ ಸಮುದಾಯದವರು ಸ್ವಾವಲಂಭಿ ಮತ್ತು ಸ್ವಯಂ ಉದ್ಯೋಗದಿಂದ ತಯಾರಿಕೆ ಮಾಡಿದ ಆಹಾರ ಪದಾರ್ಥಗಳು ಮತ್ತು ವಸ್ತುಗಳ ಪ್ರದರ್ಶನ ಮತ್ತು ಮಾರಾಟ ಮಾಡಲು ವೇದಿಕೆ ಕಲ್ಪಿಸಲಾಗಿದೆ. ಮಹಿಳೆಯರು ತಾಯಿ, ತಂಗಿ ಅಕ್ಕನಾಗಿ ಹಾಗೂ ಸಮಾಜದ ಅಭಿವೃದ್ಧಿಗೆ ಶ್ರಮಿಸುವಳು ಅವರಿಗೆ ಗೌರವ ಸಲ್ಲಿಸಬೇಕಾಗಿದ್ದು ನಮ್ಮ ಕರ್ತವ್ಯ ಎಂದು ಹೇಳಿದರು. 50ಕ್ಕೂ ಹೆಚ್ಚು ಮಳಿಗೆಗಳಲ್ಲಿ ಪ್ರದರ್ಶನ ಮತ್ತು ನೂರಾರು ಮಹಿಳೆಯರು ಭಾಗವಹಿಸಿದ್ದರು, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಸಹಯೋಗ ನೀಡಿತು.

> **ಬ್ರಾಹ್ಮಣರು ಸಮಾಜಕ್ಕೆ ಅನಿವಾರ್ಯ. ಸಂಸ್ಕಾರ ಮತ್ತು ಮಾನವೀಯತೆ ಮುಖ್ಯ. ಸರಿಯಾದ ದಾರಿಯಲ್ಲಿ ಸಾಗಬೇಕು. ತಂದೆ, ತಾಯಿಗೆ ಮಕ್ಕಳು ಗೌರವ ಕೊಡಬೇಕು. ಮಕ್ಕಳಿಗೆ ಸಂಸ್ಕರ ಕೊಡಿಸಬೇಕು. ಸಮಾಜದಲ್ಲಿ ಹಣ ಇರಬೇಕು, ಹಣದ ವ್ಯಾಮೋಹಕ್ಕೆ ಬೀಳಬಾರದು. ಬ್ರಾಹ್ಮಣರು ಅಲ್ಪತೃಪ್ತರು. ಬ್ರಾಹ್ಮಣರು ತಯಾರಿಸಿದ ಆಹಾರ ಪದಾರ್ಥಗಳಿಗೆ ಉತ್ತಮ ಬೇಡಿಕೆ ಇದೆ.** ಜಯಸಿಂಹ ಅಸಗೋಡು

## ಅಂತರರಾಷ್ಟ್ರೀಯ ಶುಶೂಷಕರ ದಿನ ಆಚರಣೆ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು


ರೋಗಿಗಳ ಆರೈಕೆ ಮತ್ತು ಚಿಕಿತ್ಸೆಯಲ್ಲಿ ಶುಶೂಷಕರ ಪಾತ್ರ ಪ್ರಮುಖವಾಗಿದ್ದು, ಅವರು ರೋಗಿಯನ್ನು ಪ್ರತಿ ಹಂತದಲ್ಲಿಯೂ ಗಮನಿಸುತ್ತಾರೆ' ಎಂದು ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ನಿರ್ದೇಶಕ ಡಾ.ಟಿ.ನವೀನ್ ಅಭಿಪ್ರಾಯಪಟ್ಟರು.

ಸಂಸ್ಥೆಯು ನಗರದಲ್ಲಿ ಹಮ್ಮಿಕೊಂಡಿದ್ದ ಅಂತರರಾಷ್ಟ್ರೀಯ ಶುಶೂಷಕರ ದಿನ ಸಮಾರಂಭ ಉದ್ಘಾಟಿಸಿ ಮಾತನಾಡಿದರು.

ವೈದ್ಯರು ರೋಗಿಯನ್ನು ತಪಾಸಣೆ ಮಾಡಿ, ಚಿಕಿತ್ಸೆ ಕುರಿತು ಅಗತ್ಯ ಸಲಹೆ, ಸೂಚನೆಗಳನ್ನು ಶುಶೂಷಕರಿಗೆ ನೀಡುತ್ತಾರೆ. ಚಿಕಿತ್ಸೆಯಲ್ಲಿ ಯಾವುದೇ ರೀತಿಯ ವ್ಯತ್ಯಯವಾಗದಂತೆ ನೋಡಿಕೊಳ್ಳುವ ಶುಶೂಷಕರ ಪಾತ್ರ ಅನನ್ಯ. ರೋಗಿ ಮತ್ತು ಶುಶೂಷಕರ ನಡುವಿನ ಸಂಬಂಧ ಒಂದು ರೀತಿ ತಾಯಿ–ಮಕ್ಕಳ ಸಂಬಂಧ ಇದ್ದಂತೆ. ಶುಶ್ರೂಷಕರ ನಗುಮುಖದ ಸೇವೆಯು ರೋಗಿಯ ಆತ್ಮವಿಶ್ವಾಸ ಹೆಚ್ಚಿಸುತ್ತದೆ' ಎಂದು ಅವರು ಹೇಳಿದರು. ನಮ್ಮ ಸಂಸ್ಥೆಯಲ್ಲಿ ವಿದ್ಯಾಭ್ಯಾಸ ಮಾಡಿದ ಶುಶೂಷಕರು ವಿವಿಧೆಡೆ ಕಾರ್ಯನಿರ್ವಹಿಸುತ್ತಿದ್ದಾರೆ.

ಕ್ಯಾನ್ಸರ್ ರೋಗಿಗಳಿಗೆ ಉತ್ತಮ ಚಿಕಿತ್ಸೆ ನೀಡುವಲ್ಲಿ ಸಂಸ್ಥೆ ಮುಂಚೂಣಿಯಲ್ಲಿರುವುದಕ್ಕೆ ಶುಶೂಷಕರ ಸಹಕಾರವೂ ಪ್ರಮುಖ ಕಾರಣ ಎಂದು ಅಭಿಪ್ರಾಯಪಟ್ಟರು.

## ಲೋಕ ಕಲ್ಯಾಣಕ್ಕಾಗಿ ಪೌರ್ಣಮಿ ಪ್ರಯುಕ್ತ 108 ದಂಪತಿಗಳಿಂದ ಸಾಮೂಹಿಕ ಶ್ರೀ ಸತ್ಯ ನಾರಾಯಣ ವ್ರತ ಪೂಜೆ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಪವಮಾನಪುರದ ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಪರಮಪೂಜ್ಯ ಶ್ರೀಶ್ರೀಸುಬುಧೇಂದ್ರತೀರ್ಥ ಶ್ರೀಪಾದಂಗಳವರ ಆದೇಶಾನುಸಾರ ಶ್ರೀಮಠದ ವಿಚಾರಣಾಕರ್ತರಾದ ಶ್ರೀ ಗಿರಿರಾಜಾಚಾರ್ ಹಾಗೂ ನೂತನ ವ್ಯವಸ್ಥಾಪಕರಾದ ಶ್ರೀ ನಂದಕಿಶೋರಾಚಾರ್ ನೇತೃತ್ವದಲ್ಲಿ ಪೌರ್ಣಮಿ ಪ್ರಯುಕ್ತ 108 ದಂಪತಿಗಳಿಂದ ಸಾಮೂಹಿಕ ಶ್ರೀ ಸತ್ಯನಾರಾಯಣ ವ್ರತ ಪೂಜೆಯು ವಿಶೇಷವಾಗಿ ಅರ್ಚಕರಿಂದ ನೆರವೇರಿತು, ಸೇವಾ ಕರ್ತೃಗಳಿಗೆ ಪ್ರತ್ಯೇಕ ಕಲಶ ಮತ್ತು ಶ್ರೀ ಸತ್ಯನಾರಾಯಣ ಫೋಟೋ ಭಾವಚಿತ್ರವನ್ನು ಇರಿಸಿ ಸಂಕಲ್ಪವನ್ನು ಮಾಡಿಸಿ. ಪಂಚಾಮೃತ ಅಭಿಷೇಕ ದೊಂದಿಗೆ ವಿಶೇಷವಾಗಿ ಪೂಜೆಯನ್ನು ನೆರವೇರಿಸಲಾಯಿತು ಈ ಸಂದರ್ಭದಲ್ಲಿ ಕರ್ತೃಗಳು ಭಕ್ತಿಯಿಂದ ಪೂಜಿಸಿ ಅರ್ಚನೆಯನ್ನು ಸಲ್ಲಿಸಿ ಸಪಾದ ಭಕ್ಷ ಪ್ರಸಾದವನ್ನು ಸ್ವೀಕರಿಸಿ ಶ್ರೀ ಹರಿ ವಾಯು ಗುರುಗಳ ಅನುಗ್ರಹಕ್ಕೆ ಪಾತ್ರರಾದರು, ಈ ಸಂದರ್ಭದಲ್ಲಿ ಸೇವಾ ಕರ್ತರಿಗೆ ಪ್ರಸಾದ ರೂಪವಾಗಿ ಸತ್ಯನಾರಾಯಣ ಫೋಟೋ ಸಪಾದ ಭಕ್ಷ್ಯ ಪ್ರಸಾದ ಮತ್ತು ಪೂಜೆಗೆ ಇರಿಸಿದ ಕಳಶವನ್ನು ಪ್ರಸಾದ ರೂಪವಾಗಿ ಕೊಡಲಾಯಿತು. ವ್ಯವಹಾರದೊಂದಿಗೆ ನೈತಿಕತೆಯನ್ನೂ ಕಲಿಸುವ ಏಕೈಕ ಸಂಸ್ಥೆ ನಮ್ಮದು' ಎಂದು ಹೇಳಿದರು.

ಸಂಸ್ಥೆಯ ಪ್ರಾಂಶುಪಾಲ ಎಸ್.ಸತ್ಯನಾರಾಯಣ, ಡಾ.ಮನಮೋಹನ ಸಿಂಗ್ ವಿಶ್ವವಿದ್ಯಾಲಯದ ಸೆನೆಟ್ ಸದಸ್ಯ ಎಚ್. ಕೃಷ್ಣರಾವ್, ಸಂಸ್ಥೆಯ ಉಪ ಅಧ್ಯಕ್ಷ ವಿ.ಮುರಳೀಧರ್ ಭಾಗವಹಿಸಿದ್ದರು.

## ಉತ್ತಮ ವರ್ಷಧಾರೆ

• ಉದಯವಾಹಿನಿ, ಬೆಂಗಳೂರು

ಹೋಬಳಿಯ ವಿವಿಧೆಡೆ ಶನಿವಾರ ಸಂಜೆ ಉತ್ತಮ ಮಳೆಯಾಯಿತು. ಬೆಳಗಿನಿಂದ ಮೋಡ–ಬಿಸಿಲಿನ ನಡುವೆ ಉಷ್ಣಾಂಶದಲ್ಲೂ ಏರಿಕೆಯಾಗಿತ್ತು.

ಮಳೆ ಸುರಿಯುವ ನಿರೀಕ್ಷೆ ಮೂಡಿಸಿತು. ಸಂಜೆ 4.30 ಗಂಟೆಗೆ ಮೋಡಗಳು ಸಾಲು ದಟ್ಟಿಸಿತು. ಗಾಳಿ, ರಭಸ ಹೆಚ್ಚಾಗುತ್ತಲೇ ಗುಡುಗು ಸಿಡಿಲ ಅಬ್ಬರದ ಜೊತೆ ಮಳೆಯೂ ಜೋರಾಗಿ ಸುರಿಯಿತು. ತೋಟಗಳಿಗೆ ತೆರಳಿದ್ದ ಜನ, ಜಾನುವಾರು ಸಾಕಾಣಿಕೆದಾರರು ಮನೆ ಸೇರಲು ಪರಿದಾಡಿದರು. ಸಂಜೆ ವೇಳೆಗೆ ಮಳೆ ಸುರಿದ ಪರಿಣಾಮ ಶಾಲಾ–ಕಾಲೇಜಿಗೆ ಹೋಗುವ ವಿದ್ಯಾರ್ಥಿಗಳು ಮನೆಗೆ ತೆರಳಲು ಪರದಾಡಿದರು. ವಾಹನ ಸವಾರರು, ಪಾದಚಾರಿಗಳು ಸಹ ತೊಂದರೆ ಅನುಭವಿಸಿದರು.

**ರೈತರಿಗೆ ಸಂತಸ:** ಉತ್ತಮ ಮಳೆ ಆಗಿರುವುದರಿಂದ ರೈತರಲ್ಲಿ ಸಂತಸ ಮೂಡಿಸಿದ್ದು, ಮುಂಗಾರು ಬಿತ್ತನೆ ಕಾರ್ಯ ಚಟುವಟಿಕೆಗಳನ್ನು ಕೈಗೊಳ್ಳಲು ಕೃಷಿ ಭೂಮಿಯನ್ನು ಹಸನು ಮಾಡಲು ಅನುಕೂಲ ಮಾಡಿಕೊಟ್ಟಿರುವುದು ರೈತರಿಗೆ ಸಂತಸ ತಂದು ಕೊಟ್ಟಿದೆ.

## ಪಾಶ್ಚಿಮಾತ್ಯ ಸಂಸ್ಕೃತಿಗೆ ಮರುಳಾಗದಿರಿ

• ಉದಯವಾಹಿನಿ, ಬೆಂಗಳೂರು

ಚನ್ನಕೇಶವಸ್ವಾಮಿ ದೇವಾಲಯದಲ್ಲಿ ವಿಶ್ವ ಹಿಂದೂ ಪರಿಷತ್ ಜಿಲ್ಲಾ ಘಟಕದಿಂದ ಗಣ್ಯರೊಂದಿಗೆ ಸಂವಾದ ಮತ್ತು ಧರ್ಮ ರಕ್ಷಾ ನಿಧಿ ಕಾರ್ಯಕ್ರಮ ಈಚೆಗೆ ನಡೆಯಿತು. ಅಖಿಲ ಭಾರತೀಯ ವಿಶೇಷ ಸಂಪರ್ಕ ಪ್ರಮುಖ್ ಸಂಜಯ್ ಧವಳೇಕರ್ ಮಾತನಾಡಿ, ಪಾಶ್ಚಿಮಾತ್ಯ ಸಂಸ್ಕೃತಿಗೆ ಮರುಳಾಗಿ ಯುವಜನತೆ ವಿಭಿನ್ನ ಜೀವನ ಶೈಲಿಯಲ್ಲಿ ಬದುಕುತ್ತಿದ್ದಾರೆ. ಇದು ಮುಂದೆ ಒಂದು ದಿನ ಹಿಂದೂಗಳ ಸಂಖ್ಯೆ ಕ್ಷೀಣಿಸಿ ದಬ್ಬಾಳಿಕೆಗೆ ಒಳಗಾಗುವ ಅನಿವಾರ್ಯತೆ ಎದುರಾಗಲಿದೆ ಎಂದು ಹೇಳಿದರು. ಲವ್ ಜಿಹಾದ್, ಮತಾಂತರ ವಿರುದ್ಧ ಹಿಂದೂ ಸಮಾಜವನ್ನು ಇನ್ನಷ್ಟು ಗಟ್ಟಿಗೊಳಿಸಬೇಕು. ಹಿಂದುಗಳು ಒಗ್ಗಟ್ಟಾಗಬೇಕು ಹಾಗೂ ಹಿಂದೂ ಜಾಗ್ರತಗೊಂಡು ದೇಶದ ಪ್ರತಿಯೊಬ್ಬ ವ್ಯಕ್ತಿಯ ಮನಸ್ಸಿನಲ್ಲಿ ಹಿಂದೂ ಎಂಬ ಭಾವನೆ ಮೂಡಬೇಕು ಎಂದರು. ಧೈಯ, ನೇತೃತ್ವ, ಪ್ರಾಮಾಣಿಕತೆ, ಕಾರ್ಯಬದ್ಧತೆ, ಕಾರ್ಯಕರ್ತರ ತಂಡ ಇದ್ದರೆ ಮಾತ್ರವೇ ಸಾಧ್ಯ.


# ಸಿದ್ದರಾಮಯ್ಯ ಬಣದ ಪ್ರಯತ್ನ















ಹುದ್ದೆಗೆ ಪೈಪೋಟಿ

## ಕೆಪಿಸಿಸಿ ಅಧ್ಯಕ್ಷ ಸ್ಥಾನದ ವಿಚಾರವಾಗಿ ಚರ್ಚೆ

**ತಮಗೆ ಮತ್ತೆ ಕೆಪಿಸಿಸಿ ಅಧ್ಯಕ್ಷ ಸ್ಥಾನ ಕೊಟ್ಟರೆ, ಮುಂದಿನ ಬಾರಿ ಕಾಂಗ್ರೆಸ್ ಪಕ್ಷವನ್ನು ಗೆಲ್ಲಿಸಿ ಅಧಿಕಾರಕ್ಕೆ ತರುವುದಾಗಿ ಪರಮೇಶ್ವರ್ ಭರವಸೆ ನೀಡಿದ್ದಾರೆ ಎನ್ನಲಾಗಿದೆ. ಆದರೆ ಹೈಕಮಾಂಡ್ ಇದಕ್ಕೆ ಒಪ್ಪುವ ಸಾಧ್ಯತೆ ಕಡಿಮೆ ಇದೆ.ರಾಜ್ಯದ ಪ್ರಮುಖವಾದ ಎರಡು ಹುದ್ದೆಗಳು ಮತ್ತೆ ಹಳೇ ಮೈಸೂರು ಭಾಗಕ್ಕೆ ಸೀಮಿತಗೊಳ್ಳುತ್ತವೆ ಎಂಬ ಕಾರಣಕ್ಕಾಗಿ ಈ ಭಾರಿ ಉತ್ತರ ಕರ್ನಾಟಕ ಭಾಗಕ್ಕೆ ಅಧ್ಯಕ್ಷ ಸ್ಥಾನ ನೀಡುವ ಚರ್ಚೆಗಳಾಗಿವೆ. ಬೀದರ್ ಜಿಲ್ಲೆಯ ಈಶ್ವರ್ ಖಂಡ್ರೆ ವೀರಶೈವ ಲಿಂಗಾಯತ ಸಮುದಾಯದವರಾಗಿರುವುದರಿಂದ ಅವರಿಗೆ ಮಣೆ ಹಾಕಬಹುದು ಎಂಬ ಚರ್ಚೆಗಳು ನಡೆಯುತ್ತಿವೆ. ಉಳಿದಂತೆ ಎಂ.ಬಿ.ಪಾಟೀಲ್, ದಿನೇಶ್ ಗುಂಡೂರಾವ್, ಕೆ.ಎಚ್.ಮುನಿಯಪ್ಪ, ಎಚ್.ಕೆ.ಪಾಟೀಲ್ ಸೇರಿದಂತೆ ಕೆಲ ಹಿರಿಯ ನಾಯಕರುಗಳ ಹೆಸರುಗಳು ಕೆಪಿಸಿಸಿ ಅಧ್ಯಕ್ಷ ಸ್ಥಾನದ ವಿಚಾರವಾಗಿ ಚರ್ಚೆಯಾಗುತ್ತಿವೆ.**

**ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ಸಮರ್ಥ ನಾಯಕನ ಆಯ್ಕೆ**

• ಉದಯವಾಹಿನಿ, ಬೆಂಗಳೂರು

ಮುಂದಿನ ಎರಡು ವರ್ಷಗಳಲ್ಲಿ ವಿಧಾನಸಭಾ ಚುನಾವಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಕೆಪಿಸಿಸಿ ಅಧ್ಯಕ್ಷರನ್ನು ಆಯ್ಕೆಮಾಡುವುದಾಗಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ತಿಳಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿಯಾದ ಬಳಿಕ ಕೆಪಿಸಿಸಿ ಸ್ಥಾನವನ್ನು ಬಿಟ್ಟುಕೊಡುವುದು ಸಹಜ. ಬೇರೆಯವರನ್ನು ಅಧ್ಯಕ್ಷರನ್ನಾಗಿ ಮಾಡಲೇ ಬೇಕಿದೆ ಎಂದರು.

ಪಕ್ಷದ ಅಧ್ಯಕ್ಷ ಸ್ಥಾನಕ್ಕೆ ಹುಡುಕಾಟ ನಡೆಯುತ್ತಿದೆ. ನೂತನ ಅಧ್ಯಕ್ಷರು ಒಳ್ಳೆಯವರಾಗಿರಬೇಕು. ಪಕ್ಷದ ಅಧ್ಯಕ್ಷರು ಮತ್ತು ಮುಖ್ಯಮಂತ್ರಿ ನಡುವೆ ಹೊಂದಾಣಿಕೆ ಇರಬೇಕು. ಪಕ್ಷದ ಹಿತದೃಷ್ಟಿ ಹಾಗೂ ಪಕ್ಷ ಸಂಘಟನೆ ಗಮನದಲ್ಲಿಟ್ಟುಕೊಂಡು ಆಯ್ಕೆ ಮಾಡುತ್ತೇವೆ. ಇನ್ನೂ 24 ತಿಂಗಳಲ್ಲಿ ವಿಧಾನಸಭಾ ಚುನಾವಣೆ ಎದುರಾಗಲಿದೆ. ಮುಂದಿನ ದಿನಗಳಲ್ಲಿ ವೇಗವಾಗಿ ಕೆಲಸ ಮಾಡುವ, ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸಮಗ್ರವಾಗಿ ಪಕ್ಷ ಕಟ್ಟುವ ನಾಯಕರನ್ನು ಹುಡುಕಬೇಕಾಗಿದೆ. ಮುಖ್ಯಮಂತ್ರಿಯವರ ಜೊತೆ ಸಹಕರಿಸಬೇಕು. ಈ ಎಲ್ಲಾ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ಪಕ್ಷದ ಅಧ್ಯಕ್ಷರನ್ನು ನೇಮಿಸಲಾಗುತ್ತಿದೆ ಎಂದಿದ್ದಾರೆ.

ಈವರೆಗೂ ಪಕ್ಷದ ಆಧಿಪತ್ಯ ಡಿ.ಕೆ.ಶಿವಕುಮಾರ್ ಅವರ ಬಳಿಯಿತ್ತು. ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದರು. ಇಬ್ಬರೂ ಹಳೇ ಮೈಸೂರು ಭಾಗದವರಾಗಿದ್ದರು. ಉತ್ತರ ಕರ್ನಾಟಕ ಭಾಗಕ್ಕೆ ಅನ್ಯಾಯವಾಗಿದೆ ಎಂಬ ಅಸಮಾಧಾನ ಇತ್ತು.

ಕೆಪಿಸಿಸಿ ಅಧ್ಯಕ್ಷರಾಗಿದ್ದವರು ಸಹಜವಾಗಿಯೇ ಮುಖ್ಯಮಂತ್ರಿ ಹುದ್ದೆಯ ಆಕಾಂಕ್ಷಿಯಾಗಿರುತ್ತಾರೆ. ಕಳೆದ ವಿಧಾನಸಭಾ ಚುನಾವಣೆಯಿಂದ ಈವರೆಗೂ ಕೆಪಿಸಿಸಿ ಅಧ್ಯಕ್ಷರಾಗಿರುವ ಡಿ.ಕೆ.ಶಿವಕುಮಾರ್ ಪಟ್ಟು ಹಿಡಿದು ಕೊನೆಗೂ ಮುಖ್ಯಮಂತ್ರಿ ಸ್ಥಾನ ಧಕ್ಕಿಸಿಕೊಂಡಿದ್ದಾರೆ. ಮುಂದೆ ಕೆಪಿಸಿಸಿ ಅಧ್ಯಕ್ಷರಾಗಿ ಕೆಲಸ ಮಾಡುವವರು ಕೂಡ ಇದೇ ರೀತಿ ಮುಖ್ಯಮಂತ್ರಿ ಹುದ್ದೆಗೆ ಪೈಪೋಟಿ ನಡೆಸುವ ಸಾಧ್ಯತೆ ಇದೆ.

ಪ್ರಸ್ತುತ ಎರಡು ವರ್ಷಗಳ ಕಾಲ ಸಚಿವರಾಗಿದ್ದಕ್ಕಿಂತಲೂ ಪಕ್ಷದ ಅಧ್ಯಕ್ಷ ಸ್ಥಾನ ಪ್ರಭಾವಿ ಎಂದು ಭಾವಿಸಲಾಗಿದೆ. ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿ ಆಗಿರುವುದರಿಂದ ಮುಂದಿನ ಚುನಾವಣೆಯಲ್ಲಿ ಒಂದು ವೇಳೆ ಕಾಂಗ್ರೆಸ್ ಮರಳಿ ಅಧಿಕಾರ ಹಿಡಿದರೂ ಡಿ.ಕೆ.ಶಿವಕುಮಾರ್ ಮುಂದುವರೆಯುವ ಸಾಧ್ಯತೆ ಇದೆ.

ಹೀಗಾಗಿ ಕೆಲವರು ಪಕ್ಷದ ಅಧ್ಯಕ್ಷರಾಗಲು ಹಿಂದೇಟು ಹಾಕುತ್ತಿದ್ದಾರೆ ಎನ್ನಲಾಗಿದೆ. ನೂತನ ಅಧ್ಯಕ್ಷರು ಒಳ್ಳೆಯವರಾಗಿರಬೇಕು.

ಸದ್ಯದ ಮಟ್ಟಿಗೆ ಸತೀಶ್ ಜಾರಕಿಹೊಳಿ ಸಚಿವ ಸ್ಥಾನ ಮತ್ತು ಕೆಪಿಸಿಸಿ ಅಧ್ಯಕ್ಷ ಸ್ಥಾನ ಎರಡರ ಮೇಲೂ ಕಣ್ಣಿಟ್ಟಿದ್ದಾರೆ. ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸಮಗ್ರವಾಗಿ ಪಕ್ಷ ಕಟ್ಟುವ ನಾಯಕರನ್ನು ಹುಡುಕಬೇಕಾಗಿದೆ.

ತಾವು ಹೈಕಮಾಂಡ್ ಬಳಿ ಪಕ್ಷದ ಅಧ್ಯಕ್ಷ ಸ್ಥಾನ ಕೇಳಿರುವುದು ನಿಜ ಎಂದು ಸತೀಶ್ ಜಾರಕಿಹೊಳಿ ಸ್ಪಷ್ಟಪಡಿಸಿದ್ದಾರೆ. ಆದರೆ ಪಕ್ಷ ಯಾವುದೇ ನಿರ್ಧಾರ ಕೈಗೊಂಡರೂ ಅದಕ್ಕೆ ಬದ್ಧ ಎಂದು ಪುನರುಚ್ಚರಿಸಿದ್ದಾರೆ.

**ಮೊದಲು 2010ರ ಅಕ್ಟೋಬರ್ 27 ರಿಂದ 2018ರ ಜುಲೈ 4ರವರೆಗೂ ಕೆಪಿಸಿಸಿ ಅಧ್ಯಕ್ಷರಾಗಿ ಕೆಲಸ ಮಾಡಿದ್ದ ಡಾ.ಜಿ.ಪರಮೇಶ್ವರ್ ಮುಖ್ಯಮಂತ್ರಿ ಹುದ್ದೆಗೆ ಆಸೆ ಪಟ್ಟಿದ್ದರು. ಆದರೆ ಅದು ಸಾಧ್ಯವಾಗಿಲ್ಲ. 2019ರಲ್ಲಿ ಕಾಂಗ್ರೆಸ್ -ಜೆಡಿಎಸ್ ಸರ್ಕಾರದಲ್ಲಿ ಉಪ ಮುಖ್ಯಮಂತ್ರಿ ಯಾಗಿದ್ದರು. 2023ರಲ್ಲಿ ಕಾಂಗ್ರೆಸ್ ಸರ್ಕಾರದಲ್ಲಿ ಉಪ ಮುಖ್ಯಮಂತ್ರಿಯಾಗಲು ಸಾಕಷ್ಟು ಪ್ರಯತ್ನ ಮಾಡಿದ್ದರೂ ಅದು ಈಡೇರಲಿಲ್ಲ. ಸಿದ್ದರಾಮಯ್ಯ ಅವರ ಸಂಪುಟದಲ್ಲಿ ತಾವೊಬ್ಬರೇ ಉಪ ಮುಖ್ಯಮಂತ್ರಿಯಾಗಿರಬೇಕೆಂದು ಡಿ.ಕೆ. ಶಿವಕುಮಾರ್ ಪಟ್ಟು ಹಿಡಿದಿದ್ದರಿಂದಾಗಿ ಇತರ ಆಕಾಂಕ್ಷಿಗಳಿಗೆ ಅವಕಾಶ ಸಿಗಲಿಲ್ಲ. ಡಿ.ಕೆ.ಶಿವಕುಮಾರ್ ಸಂಪುಟದಲ್ಲಿ ಪರಮೇಶ್ವರ್ ಉಪ ಮುಖ್ಯಮಂತ್ರಿಯಾಗಲು ಬಯಸಿದ್ದರೂ ನಾಲ್ಕು ಜನರನ್ನು ಉಪ ಮುಖ್ಯಮಂತ್ರಿ ಮಾಡುವ ಸಾಧ್ಯತೆ ಇರುವುದರಿಂದಾಗಿ ಆ ಹುದ್ದೆಗೆ ಪ್ರಾಮುಖ್ಯ ಇಲ್ಲ ಎಂದು ಹೇಳಲಾಗುತ್ತಿದೆ. ಈ ಕಾರಣಕ್ಕಾಗಿ ಪರಮೇಶ್ವರ್ ಹಿಂದೇಟು ಹಾಕುತ್ತಿದ್ದಾರೆ.**

**ಇತರ ಆಕಾಂಕ್ಷಿಗಳಿಗೆ ಅವಕಾಶ ಸಿಗಲಿಲ್ಲ**

# ಶ್ರೀಶಂಕರಾನಂದ ಪಾರ್ಥ ಸಾರಥಿ ಗೀತಾ ಮಂದಿರದಿಂದ ಶಂಕರ ಜಯಂತಿ

• ಉದಯವಾಹಿನಿ, ದೊಡ್ಡಬಳ್ಳಾಪುರ

ನಗರದ ಗಗನಾರ್ಯಗ ಮಠದಲ್ಲಿ ಶ್ರೀಶಂಕರಾನಂದ ಪಾರ್ಥ ಸಾರಥಿ ಗೀತಾ ಮಂದಿರದಿಂದ ಶಂಕರ ಜಯಂತಿ ನಡೆಯಿತು. ವೇದಾಂತ ಡಿಂಡಿಮ ಕುರಿತು ಪ್ರವಚನ ನೀಡಿದ ಆನಂದಭಾರತೀಸ್ವಾಮೀಜಿ, ಭಜಗೋವಿಂದಂ ಆದಿ ಶಂಕರರಿಂದ ರಚಿಸಲ್ಪಟ್ಟ ಜನಪ್ರಿಯ ಹಿಂದೂ ಭಕ್ತಿ ಕಾವ್ಯವಾಗಿದೆ. ವೇದಗಳಲ್ಲಿ ಜ್ಞಾನ, ಕರ್ಮ, ಬದುಕಿನ ಸಾರಗಳು


ಉದಯವಾಹಿನಿ ಚಿತ್ರ

ಅಡಗಿವೆ. ಆಧ್ಯಾತ್ಮಕತೆ ಜಗತ್ತಿನಲ್ಲಿ ನಾವು, ನಮ್ಮ ಅಸ್ತಿತ್ವವನ್ನು ಪ್ರತಿಪಾದಿಸುತ್ತದೆ ಎಂದು ತಿಳಿಸಿದರು.ಭಗವಂತನ ಸಾಕ್ಷಾತ್ಕಾರ ಮಾಡಿಕೊಳ್ಳಬೇಕಾದರೆ ಸಮಾಜಮುಖಿ ಚಿಂತನೆ ಇರಬೇಕು. ಜ್ಞಾನ, ಸತ್ಸಂಗ, ಉತ್ತಮ ಚಿಂತನೆಗಳ ಮೂಲಕ ನಮ್ಮ ಬದುಕನ್ನು ಸಾರ್ಥಕಪಡಿಸಿಕೊಳ್ಳಬೇಕು ಎಂದರು. ಬಾಗೇಪಲ್ಲಿಯ ಶಿವಾನಂದ ಸ್ವಾಮೀಜಿ, ಭಗವಂತನ ಸಾಕ್ಷಾತ್ಕಾರ, ಭಗವದ್ಗೀತೆಯ ಸಾರ ಅರಿಯಬೇಕಿದೆ. ನಿದ್ರೆ ಮತ್ತು ವಾಸ್ತವದ ನಡುವಿನ ಈ ಬದುಕಿನಲ್ಲಿ ನಾವು ಸತ್ಯವನ್ನು ಅರಿಯಬೇಕಿದೆ. ಕನ್ನಡಿಯಲ್ಲಿ ನಮ್ಮ ಪ್ರತಿಬಿಂಬ ಎಷ್ಟುಸರಾಗವಾಗಿ ಕಾಣುತ್ತದೆಯೋ ಅಂತೆಯೇ, ಬದುಕಿನ ಸತ್ಯಗಳು ನಮಗೆ ಕಾಣುತ್ತವೆ. ಆದರೆ ಕಾಣುವ ಮನಸ್ಥಿತಿ ಇರಬೇಕು ಎಂದು ಹೇಳಿದರು. ಕಸ್ತೂರು ರಾಮಸ್ವಾಮಿ ಮತ್ತು ಸಂಗಡಿಗರಿಂದ ಹಾಗೂ ಗೀತಾಮಂದಿರದ ಭಕ್ತ ವೃಂದದಿಂದ ಭಜನೆ, ವಿಶೇಷ ಪೂಜಾ ಕಾರ್ಯಗಕ್ರಮ ಹಾಗೂ ಪ್ರಸಾದ ವಿತರಣೆ ನಡೆಯಿತು.

# ಆರು ಜಿಲ್ಲೆಗಳಲ್ಲಿ ಮಳೆ ಬಿರುಸು

• ಉದಯವಾಹಿನಿ, ಬೆಂಗಳೂರು

ರಾಜ್ಯದ ಹಾಸನ, ಚಿಕ್ಕಮಗಳೂರು, ಮೈಸೂರು, ಬೆಂಗಳೂರು ಗ್ರಾಮಾಂತರ, ಕೋಲಾರ, ತುಮಕೂರು ಜಿಲ್ಲೆಗಳ ವಿವಿಧೆಡೆ ಶುಕ್ರವಾರ ರಾತ್ರಿ ಹಾಗೂ ಶನಿವಾರ ಉತ್ತಮ ಮಳೆಯಾಗಿದೆ.

ಹಾಸನ ಜಿಲ್ಲೆಯ ಅರಸೀಕೆರೆ, ಜಾವಗಲ್ ಹಾಗೂ ಸುತ್ತಮುತ್ತ ಮಧ್ಯರಾತ್ರಿ ಬಿರುಗಾಳಿ, ಜೋರು ಮಳೆಯಿಂದಾಗಿ ತೆಂಗು, ಬಾಳೆ, ಅಡಿಕೆ ಬೆಳೆ ನೆಲಕಚ್ಚಿವೆ.

ಜಾವಗಲ್‌ನಲ್ಲಿ ಭಾರಿ ಮಳೆ–ಗಾಳಿಗೆ 15ಕ್ಕೂ ಹೆಚ್ಚು ವಿದ್ಯುತ್ ಕಂಬ ಉರುಳಿದರೆ, ಅರಸೀಕೆರೆ ತಾಲ್ಲೂಕಿನ ಸಲುಪರಹಳ್ಳಿ, ಉಂಡಿಗನಾಳುವಿನಲ್ಲಿ ಅಡಿಕೆ ಬೆಳೆಗೆ ಹಾನಿಯಾಗಿದೆ. ಮುದ್ದನಹಳ್ಳಿಯಲ್ಲಿ 200ಕ್ಕೂ ಹೆಚ್ಚು ಬಾಳೆಗಿಡಗಳಿಗೆ ಹಾನಿಯಾಗಿದೆ. ಮೈಸೂರು ಜಿಲ್ಲೆಯಾದ್ಯಂತ ಗುಡುಗು–ಸಿಡಿಲು ಸಹಿತ ಮಳೆ ಯಾಗಿದ್ದು, ನಂಜನಗೂಡು ತಾಲ್ಲೂಕು ದಾಸನೂರಿನಲ್ಲಿ ಗರಿಷ್ಠ ಅಂದರೆ 5.2 ಸೆಂ.ಮೀ. ಮಳೆ ಯಾಗಿದೆ. ಎಚ್.ಡಿ. ಕೋಟೆ ತಾಲ್ಲೂಕು ಹಂಪಾಪುರ ಹೋಬಳಿಯ ಎಂ.ಕನ್ನೇನಹಳ್ಳಿಯಲ್ಲಿ ಸಿಡಿಲು ಬಡಿದು ಹಸು ಮೃತಪಟ್ಟಿತು.

ಚಿಕ್ಕಮಗಳೂರು ನಗರದಲ್ಲಿ ಬಿರುಗಾಳಿ ಸಹಿತ ಮಳೆ ಅಬ್ಬರಿಸಿದೆ. ವಿವಿಧ ಬಡಾವಣೆಗಳಲ್ಲಿ ವಿದ್ಯುತ್ ಕಂಬ, ಮರ ಉರುಳಿವೆ. ಕೆಲ ಮನೆಗಳ ಚಾವಣಿ ಶೀಟ್‌ಗಳು ಹಾರಿಹೋಗಿವೆ. ಶನಿವಾರ ಇಡೀ ದಿನ ನಗರದಲ್ಲಿ ವಿದ್ಯುತ್ ಸಂಪರ್ಕ ಕಡಿತಗೊಂಡಿತ್ತು.


ಉದಯವಾಹಿನಿ ಚಿತ್ರ

ಕೋಲಾರ ಜಿಲ್ಲೆಯ ಬಂಗಾರಪೇಟೆ ತಾಲ್ಲೂಕಿನಲ್ಲಿ ಬಿರುಗಾಳಿ ಸಹಿತ ಮಳೆಗೆ 70ಕ್ಕೂ ಹೆಚ್ಚು ಕಂಬಗಳು ಬಿದ್ದಿವೆ. ಹೂವಿನ ತೋಟಗಳು ಬಿರುಗಾಳಿಗೆ ಸಿಲುಕಿ ಹಾಳಾಗಿವೆ. ಕೆಜಿಎಫ್ ತಾಲ್ಲೂಕಿನಲ್ಲಿ ಬೆಳೆ ಹಾನಿಯಾಗಿದೆ. ತುಮಕೂರು ಜಿಲ್ಲೆ ತಿಪಟೂರು ತಾಲ್ಲೂಕಿನಲ್ಲಿ ಗಾಳಿ ಸಹಿತ ಮಳೆಗೆ ನೂರಾರು ತೆಂಗು, ಅಡಿಕೆ, ಬಾಳೆ, ದಾಳಿಂಬೆ ಗಿಡ, ವಿದ್ಯುತ್ ಕಂಬಗಳು ನೆಲಕ್ಕೆ ಉರುಳಿವೆ. 15ಕ್ಕೂ ಹೆಚ್ಚು ಮನೆಗಳಿಗೆ ಹಾನಿಯಾಗಿದೆ. ಹುಳಿಯಾರು ಹೋಬಳಿ ಬೋರನ ಕಣಿವೆ ಪ್ರೌಢಶಾಲೆ ಅಡುಗೆ ಮನೆ ಚಾವಣಿ ಹಾರಿಹೋಗಿದೆ.


ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದ ಸುತ್ತಲಿನ ಪ್ರದೇಶಗಳಲ್ಲಿ ಶನಿವಾರ ಸಂಜೆ ಸುರಿದ ಭಾರಿ ಮಳೆಯಿಂದ ಜನಜೀವನ ಅಸ್ತವ್ಯಸ್ತಗೊಂಡಿತು. ಬೆಂಗಳೂರು–ಹೈದರಾಬಾದ್ ರಾಷ್ಟ್ರೀಯ ಹೆದ್ದಾರಿಯಲ್ಲಿ ವಾಹನ ಸಂಚಾರ ವ್ಯತ್ಯಯಗೊಂಡಿತು.

# ಜಿ.ಪಂ, ತಾ.ಪಂ ಚುನಾವಣೆಗೆ ಜೆಡಿಎಸ್ ಸಿದ್ಧತೆ

• ಉದಯವಾಹಿನಿ, ದೇವನಹಳ್ಳಿ

ಮುಂಬರುವ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯಿತಿ ಚುನಾವಣೆಗಳನ್ನು ಸಮರ್ಥವಾಗಿ ಎದುರಿಸಲು ಜೆಡಿಎಸ್ ಕಾರ್ಯಕರ್ತರು ಈಗಿನಿಂದಲೇ ಸಂಘಟನೆ ಬಲಪಡಿಸಬೇಕು ಎಂದು ಮಾಜಿ ಶಾಸಕ ನಿಸರ್ಗ ನಾರಾಯಣಸ್ವಾಮಿ ಹೇಳಿದರು. ತಾಲ್ಲೂಕಿನಲ್ಲಿ ಜೆಡಿಎಸ್ ಪಕ್ಷದಿಂದ ಶುಕ್ರವಾರ ಹಮ್ಮಿಕೊಂಡಿದ್ದ ಎಸ್‌ಸಿ ಘಟಕದ ನೂತನ ಪದಾಧಿಕಾರಿಗಳ ನೇಮಕಾತಿ ಪತ್ರ ವಿತರಣಾ ಸಮಾರಂಭದಲ್ಲಿ ಮಾತನಾಡಿ, ಪರಿಶಿಷ್ಟ ಜಾತಿಯ ವಿವಿಧ ಸಮುದಾಯಗಳ ಮುಖಂಡರು ಒಗ್ಗಟ್ಟಿನಿಂದ ಪದಾಧಿಕಾರಿಗಳ ಆಯ್ಕೆ ಪ್ರಕ್ರಿಯೆಯನ್ನು ಯಶಸ್ವಿಯಾಗಿ ನಡೆಸಿದ್ದಾರೆ ಎಂದರು.

ಮುಂದಿನ ದಿನಗಳಲ್ಲಿ ಕುಮಾರಸ್ವಾಮಿ ರಾಜ್ಯದ ಮುಖ್ಯಮಂತ್ರಿಯಾಗಬೇಕು. ದೇವನಹಳ್ಳಿ ಕ್ಷೇತ್ರದಲ್ಲಿ ಜೆಡಿಎಸ್ ಭರ್ಜರಿ ಗೆಲುವು ಸಾಧಿಸಬೇಕು. ಇದಕ್ಕಾಗಿ


ಉದಯವಾಹಿನಿ ಚಿತ್ರ

ನೂತನ ಪದಾಧಿಕಾರಿಗಳು ಹಾಗೂ ಮೂಲ ಸಂಸ್ಥೆಯ ಮುಖಂಡರು ಹಗಲಿರುಳು ಶ್ರಮಿಸಿ ಪಕ್ಷವನ್ನು ತಳಮಟ್ಟದಿಂದ ಕಟ್ಟಬೇಕು ಎಂದು ಹೇಳಿದರು.

ತಾಲ್ಲೂಕು ಎಸ್.ಸಿ ಘಟಕದ ಪುನರ್‌ರಚನೆಗೆ ಕರೆ ನೀಡಿದಾಗ ಹಿರಿಯ ಮುಖಂಡರು ಸಕಾರಾತ್ಮಕವಾಗಿ ಸ್ಪಂದಿಸಿದರು. ತಾಲ್ಲೂಕು ಘಟಕಕ್ಕೆ ರಾಮಣ್ಣ ಹಾಗೂ ಜಿಲ್ಲಾ ಘಟಕಕ್ಕೆ ಕಾರ್ಯಕರ್ತರ ಬೆಂಬಲದೊಂದಿಗೆ ವಿದ್ಯಾವಂತ ನಾಗರಾಜು ಅವರನ್ನು ಆಯ್ಕೆ ಮಾಡಲಾಗಿದೆ. ಇದರಿಂದ ಸಂಘಟನೆಗೆ ಹೆಚ್ಚಿನ ಬಲ ದೊರಕಿದೆ ಎಂದು ಜಿಲ್ಲಾಧ್ಯಕ್ಷ ಕೆ.ವಿ. ಮಂಜುನಾಥ್ ಹೇಳಿದರು.

ತಾಲ್ಲೂಕು ಜೆಡಿಎಸ್ ಅಧ್ಯಕ್ಷ ಮಹೇಶ್ ಎಸ್., ಪ್ರಧಾನ ಕಾರ್ಯದರ್ಶಿ ಗೋಣೂರು ಮನೋಹರ್, ಕಾರ್ಯಾಧ್ಯಕ್ಷ ಜಿ.ಎ. ರವೀಂದ್ರ, ಗೌರವ ಅಧ್ಯಕ್ಷ ಸಂಪಂಗಪ್ಪ, ಉಪಾಧ್ಯಕ್ಷ ಎಸ್. ನಾಗೇಶ್ ಸೇರಿದಂತೆ ವಿವಿಧ ಘಟಕಗಳ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಕಾರ್ಯಾಧ್ಯಕ್ಷರಾಗಿ ಶಿವಾನಂದ, ಪ್ರಧಾನ ಕಾರ್ಯದರ್ಶಿಯಾಗಿ ತಿರುಮಲೇಶ್ ಸಿ.,ಕಾರ್ಯದರ್ಶಿಯಾಗಿ ಮೂರ್ತಿ ಡಿ.ಟಿ, ಹಿರಿಯ ಉಪಾಧ್ಯಕ್ಷರಾಗಿ ಚಂದ್ರು, ನಾಗರಾಜು, ಮಾರಪ್ಪ, ಹರೀಶ್ ನಾಯಕ್, ಸಿದ್ದಪ್ಪ, ನಾರಾಯಣಸ್ವಾಮಿ, ಮೋಹನ್, ಮುನಿಕೃಷ್ಣ, ನರಸಿಂಹಮೂರ್ತಿ, ಜನಕಮಣಿ, ನರಸಿಂಹಯ್ಯ (ಬಾಬು), ಭರತ್, ಚನ್ನಕೃಷ್ಣ, ಶ್ರೀನಿವಾಸ್, ಡಿ.ಎಂ. ನಾಗರಾಜು ಮತ್ತು ನಾಗೇಶ್ ನೇಮಕಗೊಂಡಿದ್ದಾರೆ.

## ನದಿಯಂತಾದ ರಸ್ತೆಯಲ್ಲಿ ಸಿಲುಕಿದ್ದ ದಿವ್ಯಾಂಗ ಯುವಕನನ್ನು ರಕ್ಷಿಸಿದ ಬೆಂಗಳೂರು ಪೊಲೀಸ್ : ವಿಡಿಯೋ ವೈರಲ್

• ಉದಯವಾಹಿನಿ, ಬೆಂಗಳೂರು

ಕಳೆದ ಒಂದು ವಾರದಿಂದ ಸುರಿಯುತ್ತಿರುವ ಭಾರೀ ಮಳೆಗೆ ಬೆಂಗಳೂರಿನ ಜನ ಹೈರಾಣಾಗಿದ್ದಾರೆ. ಮಳೆಯಿಂದಾಗಿ ಹಲವೆಡೆ ರಸ್ತೆಯಂತಾಗಿದ್ದು, ವಾಹನ ಸವಾರರು ಪರದಾಡುದ್ದಾರೆ. ಭೀಕರ ಮಳೆಗೆ ಇಡೀ ರಸ್ತೆಯೇ ನದಿಯಂತಾಗಿದ್ದಾಗ, ಟ್ರಾಫಿಕ್ ಪೊಲೀಸ್ ಪೇದೆಯೊಬ್ಬರು ತೋರಿದ ಅಪ್ರತಿಮ ಸಾಹಸ ಮತ್ತು ಮಾನವೀಯ ಕಾರ್ಯದ ವಿಡಿಯೋ ಈಗ ಸಾಮಾಜಿಕ ಜಾಲತಾಣಗಳಲ್ಲಿ ಭಾರಿ ವೈರಲ್ ಆಗುತ್ತಿದೆ. ತಡರಾತ್ರಿ ಗುಡುಗು ಸಹಿತ ಭಾರಿ ಮಳೆಯಾಗಿದ್ದು, ರಸ್ತೆಗಳೆಲ್ಲ ಜಲಾವೃತಗೊಂಡಿದ್ದವು. ರಸ್ತೆಯಲ್ಲಿ ಮಂಡಿ ಆಳಕ್ಕೆ ನೀರು ಪ್ರವಾಹದಂತೆ ನುಗ್ಗುತ್ತಿದ್ದುದರಿಂದ ವಾಹನ ಸವಾರರೇ ಸಂಚರಿಸಲು ಹರಸಾಹಸ ಪಡುತ್ತಿದ್ದರು. ಇಂತಹ ಅಪಾಯಕಾರಿ ಪರಿಸ್ಥಿತಿಯಲ್ಲಿ ದಿವ್ಯಾಂಗ ಯುವಕನೊಬ್ಬ ರಸ್ತೆ ದಾಟಲಾಗದೆ, ನೀರಿನ ರಭಸಕ್ಕೆ ಕೊಚ್ಚಿಹೋಗುವ ಭೀತಿಯಲ್ಲಿ ತೀವ್ರವಾಗಿ ಪರದಾಡುತ್ತಿದ್ದನು. ಯಾರು ಕೂಡ ಆತನ ನೆರವಿಗೆ ಬಾರದ ಆ ಕಷ್ಟದ ಸಮಯದಲ್ಲಿ, ಕರ್ತವ್ಯದಲ್ಲಿದ್ದ ಟ್ರಾಫಿಕ್ ಪೊಲೀಸ್ ಕಾನ್‌ಸ್ಟೆಬಲ್ ಅನಿಲ್ ಅವರು ಮಾನವೀಯತೆ ಮೆರೆದಿದ್ದಾರೆ.

# ಉದ್ಯಮಕ್ಕೆಅಗತ್ಯವಿರುವ ಕಲಿಕೆ, ಎಐ-ಸಿದ್ಧ ಪ್ರತಿಭೆಗಳು ಬೇಕು

• ಉದಯವಾಹಿನಿ, ಬೆಂಗಳೂರು

ಜಗತ್ತಿನಲ್ಲಿ ಎಲ್ಲೆಡೆಗಳಲ್ಲೂ ಕ್ಷಿಪ್ರವಾಗಿಆಗುತ್ತಿರುವಕೃತಕ ಬುದ್ಧಿಮತ್ತೆ (ಎಐ) ಬಳಕೆ, ಯಾಂತ್ರೀಕರಣ, ಮತ್ತು ತಾಂತ್ರಿಕ ಪ್ರಗತಿಗಳು ಕೆಲಸದ ಸ್ಥಳಗಳಿಗೆ ಹೊಸ ವ್ಯಾಖ್ಯಾನಗಳನ್ನು ಬರೆಯುತ್ತಿವೆ. ಈ ನಿಟ್ಟಿನಲ್ಲಿ, ಪುಣೆಯಎಂಐಟಿ ವರ್ಲ್ಡ್ ಪೀಸ್‌ಯೂನಿವರ್ಸಿಟಿ (ಎಮ್‌ಐಟಿ–ಡಬ್ಲ್ಯೂಪಿಯು), ರಾಷ್ಟ್ರೀಯ ಸಿಬ್ಬಂದಿ ನಿರ್ವಹಣಾ ಸಂಸ್ಥೆ (ಎನ್‌ಐಪಿಎಮ್),ಕರ್ನಾಟಕ ಶಾಖೆಯ ಸಹಯೋಗದೊಂದಿಗೆಇಂಡಸ್ಟ್ರಿ ಅಕೆಡೆಮಿಯಾಕಾನ್ ಕ್ಲೇವ್ 2026 ಎಂಬ ಸಮಾವೇಶವನ್ನು ಆಯೋಜಿಸಿತ್ತು.

ತಮ್ಮ ಪ್ರಧಾನ ಭಾಷಣದಲ್ಲಿ ಶ್ರೀ ತ್ಯಾಗು ವಲ್ಲಿಯಪ್ಪಅವರು, ಯಾವ ರೀತಿ ಉದ್ದಿಮೆ–ಸಂಯೋಜಿತ ಕಲಿಕಾ ಮಾದರಿಗಳು ವಿದ್ಯಾರ್ಥಿಗಳಿಗಾಗಿ ಉದ್ಯೋಗಶೀಲತೆಯ ಫಲಿತಾಂಶಗಳನ್ನು ಸುಧಾರಿಸುತ್ತಿವೆ ಎಂದು ಒತ್ತಿ ಹೇಳುತ್ತಾ, ಶೈಕ್ಷಣಿಕ ಸಂಸ್ಥೆಗಳು ಕೇವಲಉದ್ದಿಮೆಯ ಪ್ರವೃತ್ತಿಗಳಿಗೆ ಪ್ರತಿಕ್ರಿಯೆ ನೀಡುವ ಬದಲು ಭವಿಷ್ಯತ್ತಿನ ತಂತ್ರಜ್ಞಾನಗಳು ಮತ್ತು ಕಾರ್ಯಪಡೆ ಅಗತ್ಯಗಳನ್ನು ಸಕ್ರಿಯವಾಗಿ ಊಹಿಸುವಷ್ಟು ವಿಕಸನಗೊಳ್ಳಬೇಕು ಎಂಬುದನ್ನೂ ಒತ್ತಿ ಹೇಳಿದರು.

''ಭವಿಷ್ಯತ್ತು, ನಾಳಿನ ತಂತ್ರಜ್ಞಾನಗಳನ್ನು ಇಂದೇ




ಕಲಿಸುವಂತಹ ಸಂಸ್ಥೆಗಳಿಗೆ ಸೇರುತ್ತದೆ. ಎಲ್ಲರಿಗೂಒಂದೇ ಮಾಡಲ್ ಇಂದು ಶಿಕ್ಷಣ ಅಥವಾ ಕೌಶಲದಲ್ಲಿ ಕೆಲಸ ಮಾಡುವುದಿಲ್ಲ ಎಂದು ಅವರು ಸೇರಿಸಿದರು.

ಚರ್ಚೆಗಳು, ಕ್ಷಿಪ್ರಆವಿಷ್ಕಾರಗಳು ನಿರಂತರವಾಗಿ ಉದ್ಯೋಗ ಪಾತ್ರಗಳು ಮತ್ತು ಪ್ರತಿಭಾ ಅವಶ್ಯಕತೆಗಳನ್ನು ಬದಲಾಯಿಸುತ್ತಿರುವಂತಹತಂತ್ರ ಜ್ಞಾನ, ಎಲೆಕ್ಟ್ರಾನಿಕ್ಸ್, ಸೆಮಿಕಂಡಕ್ಟರುತ್ಪಾದನೆ ಮತ್ತು ಅತ್ಯಾಧುನಿಕ ವಸ್ತುಗಳ ಉತ್ಪಾದನೆಇತ್ಯಾದಿ ಕ್ಷೇತ್ರಗಳಲ್ಲಿ ಕೌಶಲ್ಯಗಳುಕುಗ್ಗುತ್ತಿರುವುದರ ಮೇಲೆ ಗಮನ ಕೇಂದ್ರೀಕರಿಸಿದವು. ಶೈಕ್ಷಣಿಕ ಸಂಸ್ಥೆಗಳು ಕೇವಲಉದ್ದಿಮೆಯ ಪ್ರವೃತ್ತಿಗಳಿಗೆ ಪ್ರತಿಕ್ರಿಯೆ ನೀಡುವ ಬದಲು ಭವಿಷ್ಯತ್ತಿನ ಶೈಕ್ಷಣಿಕ ವಿದ್ಯಾರ್ಹತೆಗಳ ಜೊತೆಗೆ, ಪ್ರಾಯೋಗಿಕವಾಗಿತೆರೆದುಕೊಂಡ, ಬಹುವಿಷಯಗಳಲ್ಲಿ ಪರಿಣತಿ ಹಾಗೂ ಸವಾಲುಗಳನ್ನು ಬಗೆಹರಿಸುವ ಸಾಮರ್ಥ್ಯಗಳು ಹಾಗೂ ಎಂತಹ ಸಂದರ್ಭಗಳಿಗೂ ಹೊಂದಿಕೊಳ್ಳುವ ಪ್ರತಿಭೆಗಳಿಗಾಗಿ ಸಂಸ್ಥೆಗಳು ಹೆಚ್ಚು ಹೆಚ್ಚು ಹುಡುಕುತ್ತಿವೆ ಎಂದು ಉದ್ಯಮತಜ್ಞರು ಹೇಳಿದರು.

## ನಿಕಟ ಸಹಯೋಗ ಬಹಳ ಮುಖ್ಯ

**ಎನ್‌ಐಪಿಎಮ್, ಕರ್ನಾಟಕ ಶಾಖೆಯ ಅಧ್ಯಕ್ಷ ಸಂಜಯ್ ಮಿತ್ರಶೈಕ್ಷಣಿಕ ಪಠ್ಯಕ್ರಮವು, ಸದಾ ಹೆಚ್ಚುತ್ತಿರುವ ಉದ್ಯಮದ ನಿರೀಕ್ಷೆಗಳು ಮತ್ತು ಆಧುನಿಕಕೆಲ ಸದ ವಾಸ್ತವಗಳಿಗೆ ಅನುಗುಣವಾಗಿರುವುದನ್ನು ಖಾತರಿಪಡಿಸಲು ಮಾನವ ಸಂಪನ್ಮೂಲ ವೃತ್ತಿಪರರು ಮತ್ತು ಶಿಕ್ಷಣ ಸಂಸ್ಥೆಗಳ ನಡುವೆ ನಿಕಟ ಸಹಯೋಗ ಬಹಳ ಮುಖ್ಯ ಎಂದರು.**

**ಸಮಾವೇಶವನ್ನು ಉದ್ದೇಶಿಸಿ ಮಾತನಾಡಿದ ಪ್ರಸಾದ್ ಡಿ. ಖಾಂಡೇಕರ್, ಉದ್ದಿಮೆಗಳಾದ್ಯಂತ ಎಐ–ನಿರ್ದೇಶಿತ ಮಾಹಿತಿಯ ವೇಗಕ್ಕೆ ಸರಿಸಮನಾಗಿ ಶಿಕ್ಷಣ ಸಂಸ್ಥೆಗಳು ಪಠ್ಯಕ್ರಮ ಮತ್ತು ಬೋಧನಾ ವಿಧಾನಗಳನ್ನು ಮರುವಿನ್ಯಾಸಗೊಳಿಸಬೇಕಾದ ಒತ್ತಡ ಹೆಚ್ಚಾಗಿದೆ. ನಿರಂತರವಾಗಿ ಕೆಲಸ ಮಾಡಿದಾಗ ಮಾತ್ರ ಈ ಸವಾಲನ್ನು ಎದುರಿಸಬಹುದು ಎಂದು ಹೇಳಿದರು.**

## ಬಿಟ್ ಕಾಯಿನ್ ಬಹುಕೋಟಿ ಹಗರಣ ಕೇಸ್ ನಲಪಾಡ್‌ಗೆ ಮತ್ತೆ ಇಡಿ ಸಮನ್ಸ್

• ಉದಯವಾಹಿನಿ, ಬೆಂಗಳೂರು

ಬಿಟ್ ಕಾಯಿನ್ ಬಹುಕೋಟಿ ಹಗರಣ ಪ್ರಕರಣದಲ್ಲಿ ಕಾಂಗ್ರೆಸ್ ಯುವ ಮುಖಂಡ ಮೊಹಮ್ಮದ್ ನಲಪಾಡ್‌ಗೆ ಮತ್ತೆ ಸಂಕಷ್ಟ ಎದುರಾಗಿದೆ. ಮತ್ತೆ ವಿಚಾರಣೆಗೆ ಹಾಜರಾಗುವಂತೆ ಇಡಿ ಸಮನ್ಸ್ ನೀಡಿದ್ದು, ಜೂ.1ಸೋಮವಾರದಂದೇ ವಿಚಾರಣೆ ಹಾಜರಾಗುವಂತೆ ಸೂಚಿಸಿದೆ. ಶ್ರೀಕಿ, ನಲಪಾಡ್ ಮನೆ ಮೇಲೆ ದಾಳಿ ನಡೆಸಿದ್ದ ಇಡಿ ಪರಿಶೀಲನೆ ನಡೆಸಿತ್ತು. ಈ ಪ್ರಕರಣ ಸಂಬಂಧ ಈಗಾಗಲೇ ಇಡಿ ಅಧಿಕಾರಿಗಳು ಶ್ರೀಕಿ, ಸುನೇಶ್ ಹೆಗ್ಡೆ, ರಾಬಿನ್ ಖಂಡೇವಾಲ ಅವರನ್ನ ಬಂಧಿಸಿದೆ.

ಬಿಟ್ ಕಾಯಿನ್ ಕೇಸ್ ಸಂಬಂದ ಕೈ ನಾಯಕ ಮೊಹಮ್ಮದ್ ನಲಪಾಡ್ ಅವರಿಗೆ ಇಡಿ ಎರಡನೇ ಬಾರಿ ನೋಟಿಸ್ ನೀಡಿದೆ. ರಾಜಕೀಯ ಕಾರ್ಯಕ್ರಮ ಹಿನ್ನೆಲೆ ಮೊದಲ ನೋಟಿಸ್‌ಗೆ ನಲಪಾಡ್ ಹಾಜರಾಗಿರಲಿಲ್ಲ. ಕಾರಣ ತಿಳಿಸಿ ಇಡಿಗೆ ಮನವಿ ಮಾಡಿದ್ದರು.

ಇದೀಗ ಎರಡನೇ ಬಾರಿ ಇಡಿ ನೋಟಿಸ್ ಜಾರಿ ಮಾಡಿದ್ದುಮ ಸೋಮವಾರ ವಿಚಾರಣೆಗೆ ಹಾಜರಾಗುವಂತೆ ಸೂಚನೆ ನೀಡಿದೆ.

# ಮೈಸೂರು ಮಲ್ಲಿಗೆ ಅಂಕಣ: ನಾಲ್ವಡಿ-ಮರೆಯೋದುಂಟೇ ಮೈಸೂರು ದೊರೆಯಾ....

• ಉದಯವಾಹಿನಿ, ಚಿಕ್ಕಬಳ್ಳಾಪುರ

ಮರೆಯೋದುಂಟೆ ಮೈಸೂರು ದೊರೆಯಾ... ಶ್ರೀ ನಾಲ್ವಡಿ ಕೃಷ್ಣ ರಾಜ ಒಡೆಯಾ’ ...ಈಗ ಈ ಹಾಡನ್ನು ಕೇಳದ ಮೈಸೂರಿಗರೇ ಇಲ್ಲವೇನೋ.

ಹಾಗೆ ಹಾಡು ಮೈಸೂರಿನ ಜನರ ಮನೆ-ಮನದೊಳಗೆ ನೆಲೆ ನಿಂತುಬಿಟ್ಟಿದೆ. ಸಾಹಿತ್ಯ, ಕಲೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ಈ ಹಾಡಿಲ್ಲದೆ ಆರಂಭವಾಗುವುದಿಲ್ಲ. ಶಾಲೆ, ಕಾಲೇಜುಗಳಲ್ಲಿ, ರಂಗತರಬೇತಿ ಶಿಬಿರಗಳಲ್ಲಿ ಈ ಹಾಡಿನ ಮೂಲಕವೇ ಮಕ್ಕಳಿಗೆ ನಾಲ್ವಡಿಯವರ ಬದುಕು- ಆಡಳಿತ-ಕೊಡುಗೆಗಳ ಪರಿಚಯವನ್ನು ಮಾಡಿಕೊಡುವ ಪರಿಪಾಠವೂ ಉಂಟು. ಆಧುನಿಕ ಮೈಸೂರಿನ



ಉದಯವಾಹಿನಿ ಚಿತ್ರ

ಸಾಮಾಜಿಕ, ಶೈಕ್ಷಣಿಕ, ರಾಜಕೀಯ, ಸಾಂಸ್ಕೃತಿಕ ಅಭಿವೃದ್ಧಿಯ ಚರಿತ್ರೆಯನ್ನೂ, ನಾಲ್ವಡಿಯರ ಕೊಡುಗೆಗಳನ್ನೂ ಏಕಕಾಲದಲ್ಲಿ ಮುಕ್ತಕಂಠದಿಂದ ಶ್ಲಾಘಿಸುವ ಹಾಡನ್ನು ಬರೆದು, ಸಂಗೀತ ಸಂಯೋಜಿಸಿದ ಕೆ.ಆರ್.ನಗರದ ಹನಸೋಗೆ ಸೋಮಶೇಖರ್ ವೃತ್ತಿಯಲ್ಲಿ ಚಿತ್ರ ಕಲಾ ಶಿಕ್ಷಕರು. ಮೂಲತಃ ಚಿತ್ರಕಲಾವಿದರು. ಈ ಹಾಡಿನ ಕಾರಣಕ್ಕೆ ಅವರ ಹೆಸರಿನೊಂದಿಗೆ ಅವರ ಊರಾದ ಹನಸೋಗೆಯೂ ಹೆಚ್ಚು ಪ್ರಸಿದ್ಧಿ ಪಡೆದಿದೆ.

ನಾಲ್ವಡಿಯವರ ಸಾಧನೆ ಹಾಗೂ ಆ ಹಾಡಿನ ಶಕ್ತಿ ಎರಡೂ ಅದಕ್ಕೆ ಕಾರಣವಿರಬಹುದು. ಹಾಡಿದವರ ಮಧುರ ಕಂಠ, ಅಭಿಮಾನವೂ ಅದರಲ್ಲಿ ಸೇರಿದೆ. ಹಾಡು ತೇಲಿ ಬರುತ್ತಲೇ ಎದೆಯೊಳಗಿಳಿಸಿಕೊಂಡ ನಾಲ್ವಡಿಯವರ ಅಭಿಮಾನಿಗಳನ್ನು ಮರೆಯೋದುಂಟೆ ಸೋಮಶೇಖರ್ ಅವರೇ ಸಂದರ್ಶನವೊಂದರಲ್ಲಿ ಹೇಳಿರುವಂತೆ, ಅದು ಚಿಕ್ಕ ಚರ್ಮವಾದ್ಯವಾದ ದಮ್ಮಡಿಯನ್ನು ಹಿಡಿದುಕೊಂಡು ಅರ್ಧಗಂಟೆಯಲ್ಲಿ ಕಟ್ಟಿದ ಹಾಡು ಎಂಬುದನ್ನು ನಾವು ನೀವೆಲ್ಲರೂ ನಂಬಲೇಬೇಕು. ಈ ಹಾಡಿನ ಕಾರಣಕ್ಕೆ ಅವರ ಹೆಸರಿನೊಂದಿಗೆ ಅವರ ಊರಾದ ಹನಸೋಗೆಯೂ ಹೆಚ್ಚು ಪ್ರಸಿದ್ಧಿ ಪಡೆದಿದೆ.

ಎರಡು ದಶಕಗಳಿಗೂ ಹೆಚ್ಚು ಕಾಲದಿಂದ ವಿನೂತನ ಎನ್ನಿಸುವಂಥ ಭಾವತರಂಗಗಳನ್ನು ಅದು ಕೇಳುಗರೆದೆಯಲ್ಲಿ ಹೊಮ್ಮಿಸುತ್ತಲೇ ಇದೆ. ಹಾಡು ಹಳೆಯದಾದರೇನೂ ಭಾವ ನವನವೀನ’ ಎಂಬಂತೆ. ಇಂಥ ಹಾಡುಗಳು ಹೆಚ್ಚೇನಿಲ್ಲ.

# ಸಿಐಟಿಯುನಿಂದ ಕನಿಷ್ಠ ವೇತನಕ್ಕಾಗಿ ಪ್ರತಿಭಟನೆ





ಉದಯವಾಹಿನಿ ಚಿತ್ರ

• ಉದಯವಾಹಿನಿ, ಚಿಕ್ಕಬಳ್ಳಾಪುರ

ಮಾಸಿಕ ಸರಾಸರಿ ರೂ. 36 ಸಾವಿರ ಕನಿಷ್ಠ ವೇತನ ನಿಗದಿ, ಕಾರ್ಮಿಕ ಸಂಹಿತೆಗಳಿಗೆ ಕರ್ನಾಟಕ ತಿದ್ದುಪಡಿಗಳಿಗಾಗಿ ಹಾಗೂ ಖಾಯಂಯೇತರ ಕಾರ್ಮಿಕರ ಖಾಯಂಗೆ ಶಾಸನಕ್ಕಾಗಿ ಒತ್ತಾಯಿಸಿ ಜಿಲ್ಲಾಡಳಿತ ಭವನದ ಮುಂದೆ ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ (ಸಿಐಟಿಯು) ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದ ಸಿಐಟಿಯು ಜಿಲ್ಲಾಧ್ಯಕ್ಷ ಸಿದ್ದಗಂಗಪ್ಪ ,ಕರ್ನಾಟಕ ರಾಜ್ಯ ಸರ್ಕಾರವು ಕನಿಷ್ಠ ವೇತನವನ್ನು ಪರಿಷ್ಕರಿಸಿ, ಪ್ರತಿ ಉದ್ದಿಮೆಗೆ ಪ್ರತ್ಯೇಕವಾಗಿ ಕನಿಷ್ಠ ವೇತನ ನಿಗದಿ ಮಾಡದೇ ಬಹುತೇಕ ಉದ್ದಿಮೆಗಳಿಗೆ ಏಕರೂಪವಾಗಿ ಹಾಗೂ ಹಿಂದೆ ಇದ್ದ ನಾಲ್ಕು ವಲಯಕ್ಕೆ ಬದಲಾಗಿ ಮೂರು ವಲಯಗಳಾಗಿ ಮಾಡಿ ಮೇ 22ರಂದು ಹೊರಡಿಸಿರುವ ಕನಿಷ್ಠ ವೇತನದ ಅಂತಿಮ ಅಧಿಸೂಚನೆಯನ್ನು ಸಿಐಟಿಯು ಸ್ವಾಗತಿಸುತ್ತದೆ. ಆದರೆ ಇದರಲ್ಲಿರುವ ನ್ಯೂನ್ಯತೆಗಳನ್ನು ಸರಿಪಡಿಸಬೇಕೆಂದು ಆಗ್ರಹಿಸಿದರು. ಕಾರ್ಮಿಕರ ಜೀವನ ನಿರ್ವಹಣಾ ವೆಚ್ಚ ಮತ್ತು ಇವತ್ತಿನ ಬೆಲೆಗಳಿಗೆ ಅನುಗುಣವಾಗಿ ಸುಪ್ರೀಂ ಕೋರ್ಟ್ ಐತಿಹಾಸಿಕ ರೆಪ್ತಕೋಸ್ ಬ್ರೆಟ್ ಅಂಡ್ ಕಂ’ ಪ್ರಕರಣದಲ್ಲಿ ನಿಗದಿ ಪಡಿಸಿದ ಮಾನದಂಡಗಳನ್ನು ಆಧರಿಸಿ ರಾಜ್ಯದಲ್ಲಿ ಕನಿಷ್ಠ ವೇತನ ಪರಿಷ್ಕರಿಸ ಬೇಕೆಂಬುದು ಕರ್ನಾಟಕ ಹೈಕೋರ್ಟ್ ನಿರ್ದೇಶನ ಹಾಗೂ ಸಿಐಟಿಯು, ಕಾರ್ಮಿಕರಿಗೆ ಪ್ರಯೋಜನವಾಗಲಿದೆ ಎಂಬುದನ್ನು ಸಿಐಟಿಯು ಮನಗಾಣುತ್ತಲೇ ಹೆಚ್ಚಳ ಮಾಡಿರುವ ಕನಿಷ್ಠ ವೇತನವು ಸುಪ್ರೀಂ ಕೋರ್ಟ್ ನಿಗದಿಪಡಿಸಿದ ಮಾನದಂಡಗಳಿಗೆ ಪೂರಕವಾಗಿಲ್ಲ. ಇವತ್ತಿನ ಬೆಲೆಗಳು ಮತ್ತು ಜೀವನ ವೆಚ್ಚಕ್ಕೆ ಅನುಗುಣವಾಗಿ ಸರಾಸರಿ 36 ಸಾವಿರ ಕನಿಷ್ಠ ವೇತನ ನಿಗದಿ ಮಾಡಬೇಕೆಂದು ಒತ್ತಾಯಿಸಿದರು.

## ತಿದ್ದುಪಡಿಗಳನ್ನು ತರಬೇಕು

**ಸಿಐಟಿಯುಪ್ರಧಾನ ಕಾರ್ಯದರ್ಶಿ ಜಿ.ಎಂ.ಲಕ್ಷ್ಮೀದೇವಮ್ಮ ಮಾತನಾಡಿ,ಕೇಂದ್ರ ಸರ್ಕಾರವು 29 ಕಾರ್ಮಿಕ ಕಾನೂನುಗಳನ್ನು ರದ್ದುಪಡಿಸಿ ಮಾಡಿರುವ ನಾಲ್ಕು ಕಾರ್ಮಿಕ ಸಂಹಿತೆಗಳಿಗೆ ಕೇಂದ್ರ ನಿಯಮಗಳನ್ನು ರೂಪಿಸಿ ಮೇ 8ರಿಂದ ಜಾರಿಗೊಳಿಸಿದೆ. ಇದರಿಂದ ಕಾರ್ಮಿಕ ವರ್ಗವು ಸ್ವಾತಂತ್ರ್ಯ ಪೂರ್ವದಿಂದಲೂ ಹೋರಾಟಗಳಿಂದ ಪಡೆದಿರುವ ಮೂಲಭೂತ ಹಕ್ಕುಗಳು ಮೊಟಕುಗೊಳ್ಳಲಿದೆ ಎಂದರು. ಶ್ರಮದ ಶೋಷಣೆ ಹೆಚ್ಚಾಗಲಿದೆ.**



**ಕರ್ನಾಟಕದಲ್ಲಿ ಇರುವ ಕೈಗಾರಿಕಾ ಸಂಬಂಧಗಳಿಗೆ ದಕ್ಕೆಯಾಗಲಿದೆ. ಇದು ಕರ್ನಾಟಕದ ಅಭಿವೃದ್ಧಿಗೆ ಮಾರಕವಾಗಲಿದೆ. ಆದ್ದರಿಂದ ಕಾರ್ಮಿಕರನ್ನು ನವಗುಲಾಮಗಿರಿಗೆ ದೂಡುವ ಕೇಂದ್ರ ಸರ್ಕಾರದ ನಾಲ್ಕು ಸಂಹಿತೆಗಳನ್ನು ರಾಜ್ಯದಲ್ಲಿ ಜಾರಿಗೆ ತರಬಾರದು. ದೇಶದ ಸಂವಿಧಾನ ನೀಡಿರುವ ಅಧಿಕಾರವನ್ನು ಬಳಸಿ ರಾಜ್ಯ ಸರ್ಕಾರ ಈ ನಾಲ್ಕು ಸಂಹಿತೆಗ ಕಾರ್ಮಿಕರ ಪರವಾದ ಕರ್ನಾಟಕ ತಿದ್ದುಪಡಿಗಳನ್ನು ತರಬೇಕು. ನಂತರ ನಿಯಮಗಳನ್ನು ರೂಪಿಸಬೇಕೆಂದು ಆಗ್ರಹಿಸಿದರು.**

## ಕನಿಷ್ಠ ವೇತನ ಜಾರಿ

**ರಾಜ್ಯ ಸರ್ಕಾರ ಕನಿಷ್ಠ ವೇತನದ ಕರಡು ಅಧಿಸೂಚನೆ ಹೊರಡಿಸಿದ ದಿನಾಂಕವಾದ 2025 ಏಪ್ರಿಲ್ 11 ರಿಂದಲೇ ಪೂರ್ವಾನ್ವಯಿಸಿ ಕನಿಷ್ಠ ವೇತನ ಜಾರಿಗೆ ತರುವ ಬದಲಾಗಿ 2026 ಮೇ 22ರಂದು ಅಧಿಸೂಚನೆ ಹೊರಡಿಸಿದ ದಿನದಿಂದ ಜಾರಿಗೆ ತಂದಿರುವುದು ಬಹುಸಂಖ್ಯಾತ ಕಾರ್ಮಿಕರಿಗೆ ಒಂದು ವರ್ಗದ ಅರಿಯರ್ಸ್ ಸಿಗದಂತೆ ಮಾಡಿದೆ. ಕನಿಷ್ಠ ವೇತನವನ್ನು ಏಪ್ರಿಲ್ 2025ರಿಂದಲೇ ಜಾರಿಗೆ ಬರುವಂತೆ ತಿದ್ದುಪಡಿ ಮಾಡಿ ಅಧಿಸೂಚನೆ ಹೊರಡಿಸಬೇಕು.**

## ಕನಿಷ್ಠ ವೇತನ ಹೆಚ್ಚಳದಿಂದ ವಂಚಿತ

**ಗಾಮೆರ್ಂಟ್ಸ್, ಪ್ಲಾಂಟೇಷನ್, ಬೀಡಿ, ಅಗರಬತ್ತಿ, ಕೈಮಗ್ಗ ಸೇರಿ 19 ವಿಭಾಗದ ಉದ್ದಿಮೆಗಳನ್ನು ಹೊರಗಿಟ್ಟಿರುವ ರಾಜ್ಯ ಸರ್ಕಾರದ ಕ್ರಮದಿಂದ ಬಹುಸಂಖ್ಯಾತ ಮಹಿಳಾ ಕಾರ್ಮಿಕರು ಕನಿಷ್ಠ ವೇತನ ಹೆಚ್ಚಳದಿಂದ ವಂಚಿತರಾಗಲಿದ್ದಾರೆ. ಪ್ರಸ್ತುತ ಮೇ 22ರಂದು ಜಾರಿಗೆ ತಂದಿರುವ ಕನಿಷ್ಠ ವೇತನವನ್ನೆ ಈ 19 ಉದ್ದಿಮೆಗಳಿಗೂ ವಿಸ್ತರಿಸಿ ಕೂಡಲೇ ಅಧಿಸೂಚನೆ ಹೊರಡಿಸಬೇಕು. ಸ್ರೀಂ ನೌಕರರನ್ನು ಕನಿಷ್ಠ ವೇತನ ವ್ಯಾಪ್ತಿಗೆ ತರಬೇಕೆಂಬುದು ಸಿಐಟಿಯು ಒತ್ತಾಸೆಯಾಗಿದೆ ಎಂದರು.**

# ರಾಜಕೀಯ ದ್ವೇಷಕ್ಕಾಗಿ ಸಹಕಾರ ಸಂಘ ಮುಚ್ಚಿಸಲು ಯತ್ನ ಆರೋಪ

• ಉದಯವಾಹಿನಿ, ಮಳವಳ್ಳಿ

ರಾಜಕೀಯ ದ್ವೇಷಕ್ಕಾಗಿ ತಾಲ್ಲೂಕಿನ ವಡ್ಡರಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘವನ್ನು ನಾಶ ಮಾಡಲು ಮನ್ಮುಲ್ ನಿರ್ದೇಶಕ ಡಿ.ಕೃಷ್ಣಗೌಡ ಮುಂದಾಗಿದ್ದಾರೆ ಎಂದು ಕೆಎಂಎಫ್ ಮಾಜಿ ನಿರ್ದೇಶಕ ವಿ.ಎಂ.ವಿಶ್ವನಾಥ್ ಆರೋಪಿಸಿದರು.

ಪಟ್ಟಣದಲ್ಲಿ ಶನಿವಾರ ಅವರು ಮಾತನಾಡಿ, ರಾಜಕೀಯವಾಗಿ ನನ್ನನ್ನು ತುಳಿಯುವ ಹುನ್ನಾರದಿಂದ ಕೃಷ್ಣಗೌಡ ಆಡಳಿತಾಧಿಕಾರಿಯನ್ನು ಬಳಸಿಕೊಂಡು ನಮ್ಮ ಸಂಘವನ್ನು ಮುಚ್ಚಿಸಲು ಮುಂದಾಗಿದ್ದಾರೆ. ವಡ್ಡರಹಳ್ಳಿ ಸಂಘದಲ್ಲಿ ಯಾವುದೇ ಭ್ರಷ್ಟಾಚಾರ ಇಲ್ಲದಿದ್ದರೂತೊಂದರೆ ಕೊಟ್ಟು ಸಂಘವನ್ನು ಕಿತ್ತುಹಾಕಲು ಮುಂದಾಗಿದ್ದು, ತಾಕತ್ತು ಇದ್ದರೆ ನೇರವಾಗಿ ರಾಜಕೀಯವಾಗಿ ನನ್ನನ್ನು ಎದುರಿಸಲಿ, ಹಿಂಬಾಗಿಲು ರಾಜಕೀಯ ಬೇಡ ಎಂದು ಏಕವಚನದಲ್ಲಿ ವಾಗ್ದಾಳಿ ನಡೆಸಿದರು.

ರೈತರ ಅಭಿವೃದ್ಧಿಗಾಗಿ ರಚನೆಗೊಂಡಿರುವ ಸಂಘದಲ್ಲಿ ವಿನಾಕಾರಣ ಅಧಿಕಾರಿಗಳ ಮೂಲಕ ತೊಂದರೆ ನೀಡುತ್ತಿರುವುದು ಸರಿಯಲ್ಲ, ತಾಲ್ಲೂಕಿನಲ್ಲಿ ಇರುವ 150ಕ್ಕೂ ಹೆಚ್ಚು ಸಸಕಾರ ಸಂಘಗಳಲ್ಲಿ ಪಶು ಆಹಾರ ಸಿಗುತ್ತಿಲ್ಲ. ಅಲ್ಲದೇ ರೈತರಿಗೆ ಸರಿಯಾಗಿ ಹಣ ಪಾವತಿಯಾಗುತ್ತಿಲ್ಲ ಎಂದರು. ಹತ್ತು ವರ್ಷ ಮನ್ಮುಲ್ ಹಾಗೂ ಕೆಎಂಎಫ್ ನಿರ್ದೇಶಕನಾಗಿದ್ದೆ, ಈ ಅವಧಿಯಲ್ಲಿ ಶಾಸಕ ಪಿ.ಎಂ.ನರೇಂದ್ರಸ್ವಾಮಿ ಹಾಗೂ ಕೆ.ಅನ್ನದಾನಿ ಶಾಸಕರಾಗಿದ್ದರೂ ಆಡಳಿತದಲ್ಲಿ ಹಸ್ತಕ್ಷೇಪ ಮಾಡಿಲ್ಲ. ಆದರೆ ಶಾಸಕರ ಹೆಸರನ್ನು ದುರ್ಬಳಕೆ ಮಾಡಿಕೊಂಡು ಕೃಷ್ಣಗೌಡ ಹಾಲಿನ ವಾಹನಗಳಲ್ಲೂ ಲಂಚ ಪಡೆಯಲು ಮುಂದಾಗುತ್ತಿದ್ದಾರೆ.

ಮಾತು ಕೇಳದ ಅಧಿಕಾರಿಗಳನ್ನು ವರ್ಗಾವಣೆ ಮಾಡಿ, ಹಾಲು ಉತ್ಪಾದಕರ ಸಹಕಾರ ಸಂಘಗಳನ್ನು ಹಾಳು ಮಾಡುತ್ತಿದ್ದು, ಕೆಲಸ ಮಾಡಲು ಸಾಧ್ಯವಾಗದಿದ್ದರೆ ಅಧಿಕಾರ ಬಿಡಲಿ. ಇದೇ ಪರಿಸ್ಥಿತಿ ಮುಂದುವರಿದರೆ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಸಿದರು.

ಮುಖಂಡ ನಂಜುಂಡೇಗೌಡ ಮಾತನಾಡಿ, ಚುನಾವಣೆ ಫಲಿತಾಂಶ ಬದಲಾವಣೆ ಬಗ್ಗೆ ನ್ಯಾಯಾಲಯದಿಂದ ಶೀಘ್ರ ತೀರ್ಪು ಬರಲಿದೆ. ಜನರು ತಕ್ಕಪಾಠ ಕಲಿಸಲಿದ್ದಾರೆ ಎಂದರು.

ಮುಖಂಡರಾದ ಶಿವನಂಜು, ಪ್ರಭುಸ್ವಾಮಿ, ಮಹದೇವು ಇದ್ದರು.

## ಗ್ರಾಮಗಳಿಗೆ ಎಸಿ ಭೇಟಿ: ಮನವಿ ಸ್ವೀಕಾರ

• ಉದಯವಾಹಿನಿ, ಕೆಆರ್ ಪೇಟೆ

ತಾಲ್ಲೂಕಿನ ಅಕ್ಕಿಹೆಬ್ಬಾಳು ಹೋಬಳಿಯ ಜೈನಹಳ್ಳಿ, ಐಪನಹಳ್ಳಿ ಮತ್ತು ಆಲಂಬಾಡಿ ಕಾವಲುಗಳಿಗೆ ಭೇಟಿ ನೀಡಿದ ಪಾಂಡವಪುರ ಉಪ ವಿಭಾಗಾಧಿಕಾರಿ ಡಾ.ಕೆ.ಆರ್.ಶ್ರೀನಿವಾಸ್ ಜನರಿಂದ ಕುಂದು ಕೊರತೆಗಳನ್ನು ಆಲಿಸಿದರು. ಪೌತಿ ಖಾತೆಗೆ ಸಂಬಂಧಿಸಿದ ಅರ್ಜಿಗಳನ್ನು ಸಮರೋಪಾದಿಯಲ್ಲಿ ತಾಲ್ಲೂಕು ಕಚೇರಿಯಲ್ಲಿ ವಿಲೇ ಮಾಡಲಾಗುತ್ತಿದೆ.

ಲಂಚಕ್ಕೆ ಬೇಡಿಕೆಯಿಟ್ಟು ಅನಗತ್ಯ ಕಿರುಕುಳ ನೀಡಿದರೆ ನನ್ನ ಗಮನಕ್ಕೆ ತನ್ನಿ ಎಂದು ಮನವಿ ಮಾಡಿದರು.

ಪೌತಿ ಖಾತೆ ಮಾಡಿಸುವ ಕ್ರಮಗಳ ಮಾಹಿತಿ ನೀಡಿ ಪೌತಿ ಖಾತೆ ಬಗ್ಗೆ ಅರಿವು ಮೂಡಿಸಿದರು.

ಸ್ಮಶಾನ ಒತ್ತುವರಿ ಜಾಗದ ಬಗ್ಗೆ ರೈತರ ದೂರಿಗೆ, ಉಪ ವಿಭಾಗಾಧಿಕಾರಿ ಸ್ಮಶಾನ ಒತ್ತುವರಿ ತೆರವುಗೊಳಿಸುವ ಬಗ್ಗೆ ತಕ್ಷಣವೇ ಅಗತ್ಯ ಕ್ರಮ ವಹಿಸುವುದಾಗಿ ಭರವಸೆ ನೀಡಿದರು.

## ಕಾಮಗಾರಿ ಶೀಘ್ರ ಮುಗಿಸಲು ತಾಲ್ಲೂಕು ಆಡಳಿತಾಧಿಕಾರಿ ಎಸ್.ಧನುಷ್ ಸೂಚನೆ

• ಉದಯವಾಹಿನಿ, ಮಳವಳ್ಳಿ

ತಾಲ್ಲೂಕಿನ ವಿವಿಧೆಡೆ ಪ್ರಗತಿಯಲ್ಲಿ ಇರುವ ಅಭಿವೃದ್ಧಿ ಕಾಮಗಾರಿಗಳನ್ನು ತ್ವರಿತಗತಿಯಲ್ಲಿ ಮುಗಿಸುವಂತೆ ತಾಲ್ಲೂಕು ಪಂಚಾಯಿತಿ ಆಡಳಿತಾಧಿಕಾರಿ ಎಸ್.ಧನುಷ್ ಸೂಚನೆ ನೀಡಿದರು.

ಪಟ್ಟಣದಲ್ಲಿ ನಡೆದ ತಾಲ್ಲೂಕು ಪಂಚಾಯಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಮೇ ತಿಂಗಳು ಮುಗಿಯುತ್ತಿದ್ದು, ಯಾವುದೇ ಕೆಲಸ ಬಾಕಿ ಉಳಿಯಬಾರದು, ವಿವಿಧ ಇಲಾಖೆಗಳಿಂದ ಬಿಡುಗಡೆಯಾಗಿರುವ ಅನುದಾನ ವಾಪಸ್ ಹೋಗದಂತೆ ಕೆಲಸ ಮಾಡಬೇಕು. ಜನರಿಗೆ ಕುಡಿಯುವ ನೀರು, ರಸ್ತೆ, ಸ್ವಚ್ಛತೆ, ಮೂಲ ಸೌಕರ್ಯಗಳ ಕೊರತೆ ಆದಂತೆ ಎಚ್ಚರ ವಹಿಸಲು ಸೂಚನೆ ನೀಡಿದರು.


ಉದಯವಾಹಿನಿ ಚಿತ್ರ

ಜನರಿಗೆ ಶುದ್ಧ ಕುಡಿಯುವ ನೀರಿಗಾಗಿ ನಿಂತಿರುವ ಶುದ್ಧ ಕುಡಿಯುವ ನೀರಿನ ಘಟಕಗಳ ದುರಸ್ತಿ ಪೂರ್ಣಗೊಳಿಸಬೇಕು. ಹಸ್ತಾಂತರ ಮಾಡಿರುವ ಘಟಕಗಳ ನಿರ್ವಹಣೆಯನ್ನು ಗ್ರಾಮ ಪಂಚಾಯಿತಿ ಮಾಡಬೇಕು. ನರೇಗಾ ಅನುದಾನದ ಕಾಯಗಾರಿಯನ್ನು ಶೀಘ್ರ ಪೂರ್ಣಗೊಳಿಸಬೇಕು ಎಂದು ಹೇಳಿದರು.

ಬಾಡಿಗೆ ಕಟ್ಟಡದಲ್ಲಿ ಇರುವ ಅಂಗನವಾಡಿ ಕೇಂದ್ರಗಳಿಗೆ ಸ್ವಂತ ಕಟ್ಟಡ ನಿರ್ಮಿಸಲು ಬೇಕಾದ ಕ್ರಮ ವಹಿಸಿ, ಸರ್ಕಾರಿ ಜಾಗಗಳನ್ನು ಗುರುತು ಮಾಡಬೇಕು. ಲಭ್ಯವಿರುವ ಅನುದಾನದೊಂದಿಗೆ ಕಟ್ಟಡ ನಿರ್ಮಾಣಕ್ಕೆ ಸೂಚನೆ ನೀಡಿದ ಅವರು ಕೂನ್ನಾಪುರದಲ್ಲಿ ಪೂರ್ಣಗೊಂಡಿರುವ ಅಂಗನವಾಡಿ ಕೇಂದ್ರ ಉದ್ಘಾಟನೆಗೆ ಇರುವ ಕಾನೂನು ತೊಡಕು ನಿವಾರಿಸಬೇಕು ಎಂದರು.

ತೋಟಗಾರಿಕೆ ಮತ್ತು ಕೃಷಿ ಇಲಾಖೆಯಿಂದ ರೈತರಿಗೆ ಅಗತ್ಯ ಇರುವ ಬಿತ್ತನೆ ಬೀಜ, ರಸಗೊಬ್ಬರ ಪೂರೈಕೆಗೆ ಕ್ರಮ ವಹಿಸಬೇಕು. ಜೆಜೆಎಂ ಯೋಜನೆಯಡಿ ಮನೆಗಳಿಗೆ ನೀರು ತಪ್ಪದಂತೆ ಜಾಗೃತಿ ವಹಿಸಬೇಕು ಎಂದರು.

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಸಹಾಯಕ ನಿರ್ದೇಶಕ ರಂಗಸ್ವಾಮಿ ಮಾತನಾಡಿ, ಕುಡಿಯುವ ನೀರಿಗೆ ತೊಂದರೆಯಾಗದಂತೆ 36 ಗ್ರಾಮಗಳಲ್ಲಿ ಖಾಸಗಿ ಬೋರ್ ವೆಲ್‌ಗಳಿಂದ ನೀರು ಪಡೆಯಲು ಗುರುತಿಸಲಾಗಿದೆ. ನಾಲ್ಕು ಗ್ರಾಮಗಳಲ್ಲಿ ಖಾಸಗಿಯಾಗಿ ನೀರು ಪಡೆಯಲಾಗುತ್ತಿದೆ.

# ಹುಲಿ ಪತ್ತೆ ಕಾರ್ಯಚರಣೆ ಆರಂಭ : ಕ್ಯಾಮರಾ ಅಳವಡಿಸಿ ನಿಗಾವಹಿಸಿರೋ ಅಧಿಕಾರಿಗಳು

• ಉದಯವಾಹಿನಿ ,ಗುಂಡ್ಲುಪೇಟೆ

ತಾಲ್ಲೂಕಿನ ಕಳ್ಳೀಪುರ ಗ್ರಾಮದ ರೈತರ ಜಮೀನಿನಲ್ಲಿ ಹುಲಿ ಪತ್ತೆಯಾದ ಹಿನ್ನೆಲೆ ಅರಣ್ಯ ಇಲಾಖೆ ಸಿಬ್ಬಂದಿ ಕ್ಯಾಮರಾ ಟ್ರ್ಯಾಪಿಂಗ್ ಮೂಲಕ ಕಾರ್ಯಚರಣೆಯಲ್ಲಿ ತೊಡಗಿದ್ದು ಕೂಂಬಿಂಗ್ ಆರಂಭಿಸಿದ್ದಾರೆ. ಬಂಡೀಪುರ ಹುಲಿ ಸಂರಕ್ಷಿತಾ ಪ್ರದೇಶದ ಗೋಪಾಲಸ್ವಾಮಿ ಬೆಟ್ಟ ವಲಯಕ್ಕೆ ಸೇರಿದ ಕಳ್ಳೀಪುರ ಗ್ರಾಮದ ರೈತರೊಬ್ಬರ ಜಮೀನಿನಲ್ಲಿ ಹಾಡಹಗಲೇ ಕಾಣಿಸಿಕೊಂಡಿದ್ದ ಹುಲಿ ಸ್ಥಳೀಯರಲ್ಲಿ ಆತಂಕ ಸೃಷ್ಟಿಸಿತ್ತು ವ್ಯಾಘ್ರ ಬಾಳೆತೋಟದಲ್ಲಿ ಅಡಗಿರುವ ಕುರಿತು ಅರಣ್ಯ ಇಲಾಖೆ ಅಧಿಕಾರಿಗಳಿಗೆ ಮಾಹಿತಿ ನೀಡಿದ ಬೆನ್ನಲ್ಲೇ ಡ್ರೋಣ್ ಕ್ಯಾಮರಾ ಕಾರ್ಯಚರಣೆಯಲ್ಲಿ ಬಾಳೆ ತೋಟದಲ್ಲಿ ಸೆರೆಸಿಕ್ಕ ಹುಲಿ ಕೆಲವೇ ಸಮಯದಲ್ಲಿ ಅಲ್ಲಿಂದ ಕಾಲ್ಕಿತ್ತಿತ್ತು ಈ ವೇಳೆ ಇಲಾಖೆ ಅಧಿಕಾರಿಗಳು ರೈತರ ನಡುವೆ ಬಾರಿ ವಾಗ್ವಾದವೇ ನಡೆದ ಹಿನ್ನೆಲೆ ಅರಣ್ಯ ಪ್ರದೇಶದ


ಉದಯವಾಹಿನಿ ಚಿತ್ರ

ನಿಜಗುಂಡಿ ಹಳ್ಳ ಸೇರಿದಂತೆ ರೈತರ ಜಮೀನಿನ ಕೃಷಿ ಹೊಂದ ಹಾಗೂ ಮೂರ್ನಾಲ್ಕು ಭಾಗಗಳಲ್ಲಿ ಕ್ಯಾಮರಾ ಅಳವಡಿಸಿರುವ ಸಿಬ್ಬಂದಿ ಹುಲಿಯ ಚಲನವಲನದ ಮೇಲೆ ನಿಗಾಯಿರಿಸಿದ್ದಾರೆ. ನಿರ್ದಿಷ್ಟ ಸ್ಥಳದಲ್ಲಿ ಬೋನ್ ಇರಿಸಿರುವ ಅಧಿಕಾರಿಗಳು ವ್ಯಾಘ್ರನನ್ನ ಖೆಡ್ಡಾಗೆ ಕೆಡವಲು ಪ್ರಯತ್ನಕ್ಕೆ ಮುಂದಾಗಿದ್ದಾರೆ. ಕೂಂಬಿಂಗ್ ಕಾರ್ಯಚರಣೆಯಲ್ಲಿ ಡಿ ಆರ್ ಎಫ್ ಓ ಶ್ರೀಕಾಂತ್ ಹಾಗೂ ಬೀಟ್ ಪಾರೆಸ್ಟರ್ ಸೇರಿದಂತೆ 15 ಮಂದಿ ಕಾರ್ಯಚರಣೆಯಲ್ಲಿ ತಲ್ಲೀಣರಾಗಿದ್ದಾರೆ. ಅಧಿಕಾರಿಗಳ ಪ್ರಕಾರ ಹುಲಿ ನೀರು ಕುಡಿಯಲು ರೈತರ ಜಮೀನಿನ ಕೃಷಿ ಹೊಂದದ ಬಳಿ ಬರುವ ಸಾಧ್ಯತೆಯಿದೆ ಹಾಗಾಗಿ ಕೂಂಬಿಂಗ್ ಕಾರ್ಯಚರಣೆ ಆರಂಭಿಸಿದ್ದು ರಾತ್ರಿ ವೇಳೆಯಲ್ಲೂ ಸಹ ನಿಗಾವಹಿಸಲಾಗುತ್ತದೆ ಹುಲಿ ಸೆರೆಗೆ ಆನೆಗಳ ಬಳಕೆಯ ಕುರಿತು ಮೇಲಾಧಿಕಾರಿಗಳು ತೀರ್ಮಾನಿಸಲಿದ್ದಾರೆ, ಪ್ರಸ್ತುತವಾಗಿ ರೈತರ ಜಮೀನಿನಲ್ಲಿ ಕಾಣಿಸಿಕೊಂಡಿರುವ ಹುಲಿ ಪತ್ತೆಗೆ ಸ್ಥಳೀಯ ರೈತರು ಸಹಕಾರ ನೀಡಬೇಕು ಎಂದು ಮನವಿ ಮಾಡಿದ್ದಾರೆ.

## ಹೆಜ್ಜೆ ಗುರುತು ಪತ್ತೆ

**ಜಮೀನಿನಲ್ಲಿ ಹುಲಿ ಹೆಜ್ಜೆ ಗುರುತುಗಳು ಪತ್ತೆಯಾಗಿದ್ದು ರೈತರು ತೀವ್ರ ಆತಂಕಕ್ಕೆ ಒಳಗಾಗಿದ್ದಾರೆ, ಹಾಡಹಗಲೇ ಜಮೀನಿನಲ್ಲಿ ಸಂಚರಿಸಿರುವುದರಿಂದ ನಿತ್ಯ ಕೆಲಸ ಕಾರ್ಯಗಳಿಗೆ ತೆರಳಲು ಹಿಂದೇಟು ಹಾಕುತ್ತಿದ್ದಾರೆ ಅರಣ್ಯ ಇಲಾಖೆ ಅಧಿಕಾರಿಗಳು ಭೇಟಿ ನೀಡಿ ಕೂಂಬಿಂಗ್ ಕಾರ್ಯಚರಣೆ ಆರಂಭಿಸಿರುವುದು ಸಮಾಧಾನಕರ ಸಂಗತಿಯಾದರೂ ಆನೆಗಳ ಸಹಾಯದಿಂದ ಕಾರ್ಯಚರಣೆ ನಡೆಸಿ ಹುಲಿ ಬಂಧನಕ್ಕೆ ಮುಂದಾಗುವುದೇ ಸೂಕ್ತ ಎಂದು ಸ್ಥಳೀಯ ರೈತರು ಒತ್ತಾಯಿಸಿದ್ದಾರೆ.**

# ಪರಿಶಿಷ್ಟರ ಹಿತರಕ್ಷಣಾ ಸಭೆ

• ಉದಯವಾಹಿನಿ, ತಿಪಟೂರು

ನಗರದ ಕಲ್ಪತರು ವಿಜ್ಞಾನ ಕಾಲೇಜು ಸಭಾಂಗಣದಲ್ಲಿ ತಾಲ್ಲೂಕು ಪರಿಶಿಷ್ಟ ಜಾತಿ ಹಾಗೂ ವರ್ಗಗಳ ಹಿತರಕ್ಷಣಾ ಸಭೆ ನಡೆಯಿತು.

ಹಲವು ವರ್ಷಗಳಿಂದ ಬಿ.ಆರ್.ಅಂಬೇಡ್ಕರ್ ಪ್ರತಿಮೆ ನಿರ್ಮಾಣಕ್ಕೆ ಮನವಿ ಸಲ್ಲಿಸುತ್ತಿದ್ದರೂ ಸ್ಪಂದಿಸಿಲ್ಲ. ರಾಜ್ಯದ ವಿವಿಧ ಭಾಗಗಳಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ದಾರ್ಶನಿಕರ ಪುತ್ಥಳಿಗಳನ್ನು ಸ್ಥಾಪನೆ ಮಾಡಲಾಗುತ್ತಿದೆ. ಆದರೆ ತಿಪಟೂರಿನಲ್ಲಿ ಮಾತ್ರ ವಿಳಂಬವಾಗುತ್ತಿದೆ. ತಾಲ್ಲೂಕು ಆಡಳಿತ ಕಚೇರಿ ಮುಂದೆ ಆಂಜನೇಯ ದೇವಾಲಯ ನಿರ್ಮಾಣಕ್ಕೆ ಅವಕಾಶ ನೀಡಲಾಗಿದೆ. ಆದರೆ ಅಂಬೇಡ್ಕರ್ ಪ್ರತಿಮೆ ನಿರ್ಮಾಣಕ್ಕೆ ನಿರ್ಲಕ್ಷ್ಯ ತೋರಲಾಗುತ್ತಿದೆ ಎಂದು ಸಭೆಯಲ್ಲಿ ದಲಿತ ಮುಖಂಡರು ಆರೋಪಿಸಿದರು.

ಶಾಸಕ ಕೆ.ಷಡಕ್ಷರಿ ಪ್ರತಿಕ್ರಿಯಿಸಿ, ತಾಲ್ಲೂಕು ಆಡಳಿತ ಸೌಧ ಕಚೇರಿ ಮುಂಭಾಗ ಅಂಬೇಡ್ಕರ್ ಪ್ರತಿಮೆ ನಿರ್ಮಾಣಕ್ಕೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಪ್ರತಿಭಟನೆ ನಡೆಸಿದ ಹಿನ್ನೆಲೆಯಲ್ಲಿ ಹಳೆಪಾಳ್ಯ ಗ್ರಾಮದ ಮಂಜುಳ ಬಸವರಾಜ್ ವಿರುದ್ಧ 'ರೌಡಿಶೀಟರ್' ಪ್ರಕರಣ ದಾಖಲಿಸಲಾಗಿದೆ. ಅವರ ಹೆಸರನ್ನು ರೌಡಿಶೀಟರ್ ಪಟ್ಟಿಯಿಂದ ತೆಗೆದುಹಾಕಬೇಕು. ಪೊಲೀಸ್ ಅಧಿಕಾರಿಗಳು ತಪಾಸಣೆ ಹೆಸರಿನಲ್ಲಿ ದಲಿತರ ಮೇಲೆ ದೌರ್ಜನ್ಯ ನಡೆಸುತ್ತಿರುವುದು ಖಂಡನೀಯ. ಇದನ್ನು ಪರಿಶೀಲಿಸಿ ನಿರಪರಾಧಿಗಳಿಗೆ ನ್ಯಾಯ ಒದಗಿಸಬೇಕು ಎಂದು ಆಗ್ರಹಿಸಿದರು. ದಲಿತರ ಕುಂದುಕೊರತೆಗಳ ಬಗ್ಗೆ ನಿಗಾ ವಹಿಸಬೇಕಾದ ಸಮಾಜ ಕಲ್ಯಾಣ ಇಲಾಖೆ ಕೇವಲ ಹಾಸ್ಟೆಲ್ ಹಾಗೂ ಕಚೇರಿಗಳ ಬಿಲ್‌ಗಳಿಗೆ ಸೀಮಿತವಾಗಿದ್ದು, ದಲಿತರ ಮೇಲಿನ ದೌರ್ಜನ್ಯ ಪ್ರಕರಣಗಳಲ್ಲಿ ಗ್ರಾಮಗಳಲ್ಲಿ


ಉದಯವಾಹಿನಿ ಚಿತ್ರ

> ದಲಿತ ಸಮುದಾಯದವರಿಗೆ ವಸತಿ ಮತ್ತು ನಿವೇಶನಗಳನ್ನು ನೀಡುವ ಉದ್ದೇಶದಿಂದ ತಕ್ಷಣವೇ ಜಾಗ ಗುರುತಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಸ್ಥಳ ಪರಿಶೀಲನೆ ನಂತರ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದರು. ಪೆದ್ದಿಹಳ್ಳಿ ಕರಿಯಮ್ಮ ದೇವಿ ಜಾತ್ರಾ ಮೈದಾನ ಒತ್ತುವರಿ ತೆರವು, ಪ್ರತಿ ಹೋಬಳಿಯಲ್ಲೂ ಅಂಬೇಡ್ಕರ್ ಭವನ, ಬಾಬು ಜಗಜೀವನರಾಂ ಭವನ ನಿರ್ಮಾಣಕ್ಕೆ ಸಭೆಯಲ್ಲಿ ಒತ್ತಾಯಿಸಲಾಯಿತು. **ಕೆ.ಷಡಕ್ಷರಿ ಶಾಸಕ**

ಶಾಂತಿ ಸಭೆಗಳನ್ನು ನಡೆಸಿ ಸೌಹಾರ್ದ ವಾತಾವರಣ ನಿರ್ಮಿಸುವ ಕೆಲಸ ಮಾಡುತ್ತಿಲ್ಲ ಎಂದು ದಲಿತ ಮುಖಂಡರು ಆಕ್ರೋಶ ವ್ಯಕ್ತಪಡಿಸಿದರು.

ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಚಾಲಕ ನಾಗತಿಹಳ್ಳಿ ಕೃಷ್ಣಮೂರ್ತಿ ಮಾತನಾಡಿ, ಸಾರ್ವಜನಿಕ ಸ್ಮಶಾನಕ್ಕಾಗಿ ಗುರುತಿಸಿರುವ ಜಾಗಗಳನ್ನು ಅನಧಿಕೃತವಾಗಿ ಒತ್ತುವರಿ ಮಾಡಲಾಗುತ್ತಿದ್ದು, ತಾಲ್ಲೂಕು ಆಡಳಿತ ಒತ್ತುವರಿ ತೆರವುಗೊಳಿಸಿ ತಂತಿಬೇಲಿ ನಿರ್ಮಿಸಬೇಕು ಎಂದು ಆಗ್ರಹಿಸಿದರು.

ಸ್ಮಶಾನ ಜಾಗ ಗುರುತಿಸಿದ್ದರೂ, ಪಂಚಾಯಿತಿ ಪಿಡಿಒಗಳು ಯಾವುದೇ ಕಾಮಗಾರಿ ಕೈಗೊಳ್ಳುತ್ತಿಲ್ಲ ಎಂದು ಸಭೆಯಲ್ಲಿ ಆಕ್ಷೇಪ ವ್ಯಕ್ತವಾಯಿತು. ಮತ್ತಿಘಟ್ಟ ಶಿವಕುಮಾರ್ ಮಾತನಾಡಿ, ಪರಿಶಿಷ್ಟರ ಮೀಸಲು ಹಣ ದುರುಪಯೋಗವಾಗುತ್ತಿದ್ದು, ಶಿಕ್ಷಣ, ಆರೋಗ್ಯ ಮತ್ತು ಅಭಿವೃದ್ಧಿ ಕಾರ್ಯಗಳಿಗೆ ಬಳಸಬೇಕಾದ ಹಣವನ್ನು ಬೇರೆ ಕಾರ್ಯಗಳಿಗೆ ಬಳಸುವುದು ಸರಿಯಲ್ಲ ಎಂದು ಹೇಳಿದರು.

ವಸತಿ ಹಾಗೂ ನಿವೇಶನ ರಹಿತರಿಗೆ ನಿವೇಶನ ನೀಡಲು ಮತ್ತು ಬಗರ್ ಹುಕುಂ ಸಾಗುವಳಿ ಚೀಟಿ ವಿತರಣೆಗೆ ತುರ್ತು ಕ್ರಮ ಕೈಗೊಳ್ಳಬೇಕು ಎಂದು ಸಭೆಯಲ್ಲಿ ಒತ್ತಾಯಿಸಲಾಯಿತು. ಮತ್ತಿಹಳ್ಳಿ, ಬುರುಡೆಘಟ್ಟ ಪ್ರಭುಸ್ವಾಮಿ, ಮಧುಸೂಧನ್, ಶಶಿಧರ್, ಲಕ್ಷ್ಮಿ, ಬಿಳಿಗೆರೆ ಚಂದ್ರಶೇಖರ್, ಟಿ.ಕೆ.ಕುಮಾರ್, ಹರೀಶ್ ಪಾಲ್ಗೊಂಡಿದ್ದರು.

## ಮಿನಿ ನ್ಯೂಸ್

### ಮೈಸೂರು ಹೆಮ್ಮೆಯ ತಾಯಿ ಮಗನಿಗೆ ಗೌರವ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಮೈಸೂರು

ದಟ್ಟಗಳ್ಳಿಯ ಸಾ ರಾ ಕನ್ವೆನ್ಷನ್ ಹಾಲ್‌ನಲ್ಲಿ ಮೂಗೂರು ಕರ್ನಾಟಕ ಬ್ರಾಹ್ಮಣ ಸಂಘ ಹಾಗೂ ರಾಜೀವ್ ಸ್ನೇಹ ಬಳಗ ಏರ್ಪಡಿಸಿದ್ದ ಸಮುದಾಯ ಸಮಾಗಮ ಹಾಗೂ ಸಾಮೂಹಿಕ ಸತ್ಯನಾರಾಯಣ ಪೂಜಾ ಕಾರ್ಯಕ್ರಮದಲ್ಲಿ ಕಲಿಯುಗ ಶ್ರವಣಕುಮಾರ ಕೃಷ್ಣಕುಮಾರ್ ಹಾಗೂ ಮಾತೃಶ್ರೀ ಚುಡಾರತ್ನಮ್ಮನವರನ್ನು ಹಲವು ಸಾಧಕರೊಂದಿಗೆ ಸನ್ಮಾನಿಸಲಾಯಿತು.

### ಬಹುಬೆಳೆ ಪದ್ಧತಿ ಹಾದಿ ತುಳಿದ ಕೃಷಿಕ

• ಉದಯವಾಹಿನಿ, ಹುಣಸೂರು

ಕೃಷಿ ಕ್ಷೇತ್ರದಲ್ಲಿ ಬಹುಬೆಳೆ ಪದ್ಧತಿಯ ಹಾದಿ ತುಳಿಯುವ ಮೂಲಕ ಕರ್ಣಕುಪ್ಪೆಯ ಬಿ.ಎ ಪದವೀಧರ ಅಶೋಕ್ ಕುಮಾರ್ ಮಾದರಿ ಪ್ರಗತಿಪರ ರೈತನಾಗಿ ಆದರ್ಶವಾಗಿದ್ದಾರೆ. ಕಳೆದ 20 ವರ್ಷದಿಂದ ತಂದೆಯೊಂದಿಗೆ 3 ಎಕರೆ ಭೂಮಿಯಲ್ಲಿ ಕೃಷಿ ಬೇಸಾಯ ಆರಂಭಿಸಿ ವಿವಿಧ ಬೆಳೆ ಬೆಳೆಯುತ್ತಿದ್ದಾರೆ. ಕೃಷಿಯಲ್ಲಿ ವಾರ್ಷಿಕ ಆದಾಯ 8 ರಿಂದ 10ಲಕ್ಷ ಪಡೆದು ಆರ್ಥಿಕ ಸದೃಢತೆ ಹೊಂದಿದ್ದಾರೆ. ಮೂರು ಎಕರೆ ಪ್ರದೇಶದಲ್ಲಿ ತರಕಾರಿ, ವಾಣಿಜ್ಯ ಬೆಳೆಯಾಗಿ ಬಾಳೆ ಬೇಸಾಯ ಮಾಡುತ್ತಿದ್ದಾರೆ. ಕಳೆದ ಎರಡು ವರ್ಷದಿಂದ ಹನಿ ನೀರಾವರಿ ಪದ್ಧತಿಯಲ್ಲಿ ಏಲಕ್ಕಿ ಬಾಳೆ ಬೆಳೆದಿದ್ದರು. ಈ ಸಾಲಿನಲ್ಲಿ ಅಧಿಕ ಲಾಭ ಸಿಗುವ ಪಚ್ಚ ಬಾಳೆ ಬೇಸಾಯ ಮಾಡಿದ್ದಾರೆ. ಕೊಳವೆ ಬಾವಿ ಹೊಂದಿದ್ದು, ಕಾಯಂ ಬಾಳೆ ಬೇಸಾಯ ಮಾಡಿದ್ದಾರೆ. ಉಳಿದ ಪ್ರದೇಶದಲ್ಲಿ ಜೀವನೋಪಾಯಕ್ಕೆ ತರಕಾರಿ ಬೇಸಾಯ ಮಾಡಿದ್ದು, ಇದರೊಂದಿಗೆ ತೆಂಗು, ಸೀಬೆ, ಬೆಣ್ಣೆ ಹಣ್ಣಿನ ಮರ ಬೆಳೆಸಿದ್ದಾರೆ. ತೋಟದಲ್ಲಿ ಜೇನು ಸಾಕಾಣಿಕೆ ಪೆಟ್ಟಿಗೆ ಇಟ್ಟಿದ್ದಾರೆ. ಬೆಳೆಯುವ ತರಕಾರಿ ಹುಣಸೂರು ಎಪಿಎಂಸಿ ಮಾರುಕಟ್ಟೆಯಲ್ಲಿ ಮಾರಾಟ ಮಾಡುವರು. ಕಳೆದ ಆರು ತಿಂಗಳಿನಿಂದ ನೇಮಕಾತಿ ಪ್ರಕ್ರಿಯೆ ಆರಂಭಿಸಿಲ್ಲ ಗ್ರಾಮಸ್ಥರು ಆರೋಪಿಸಿದ್ದಾರೆ. ನೇಮಕಾತಿಯಲ್ಲಿ ನಮ್ಮ ಗ್ರಾಮದ ಅರ್ಹ ಅಭ್ಯರ್ಥಿಗಳಿಗೆ ಮೊದಲ ಆದ್ಯತೆ ನೀಡಬೇಕೆಂಬುದು ಸಾಕರಸನಹಳ್ಳಿ ಗ್ರಾಮಸ್ಥರ ಆಗ್ರಹವಾಗಿದೆ.


### ಉಚಿತ ಆರೋಗ್ಯ ಶಿಬಿರ ಇಂದು

• ಉದಯವಾಹಿನಿ, ಮದ್ದೂರು

ಸಚಿವ ಎನ್.ಚಲುವರಾಯ ಸ್ವಾಮಿ ಅವರ ಜನ್ಮದಿನದ ಅಂಗವಾಗಿ ಕೊಪ್ಪ 1 ಮತ್ತು 2ನೇ ವೃತ್ತದ ಅವರ ಅಭಿಮಾನಿ ಬಳಗ ಜೂನ್ 1 ರಂದು ಕೊಪ್ಪ ಗ್ರಾಮದ ಶ್ರೀಪಟ್ಟಲದಮ್ಮ ದೇವಸ್ಥಾನ ಹಾಗೂ ಯಂಬಾರ್ಜಿಯರ್ ಮಠದ ಆವರಣದಲ್ಲಿ ಸಮಾಜಮುಖಿ ಕಾರ್ಯಕ್ರಮ ಹಮ್ಮಿಕೊಂಡಿದೆ ಎಂದು ನಾಗಮಂಗಲ ಗ್ರಾಮಾಂತರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆ.ಎನ್.ದಿವಾಕರ್ ತಿಳಿಸಿದರು.

ಆದಿಚುಂಚನಗಿರಿ ವೈದ್ಯಕೀಯ ಆಸ್ಪತ್ರೆಯ ತಜ್ಞ ವೈದ್ಯ ತಂಡ ಆಯೋಜಿಸಿರುವ ಉಚಿತ ಆರೋಗ್ಯ ಶಿಬಿರದ ಉದ್ಘಾಟನೆಯನ್ನು ಮಠದ ಕಿರಿಯ ಸ್ವಾಮಿಜಿ ಸಕ್ಕೀರ್ತಿನಾಥ ಸ್ವಾಮೀಜಿ ನೆರವೇರಿಸಲಿದ್ದು, ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳೀಗೌಡ, ಡಿ. ಸಿ. ಸಿ ಬ್ಯಾಂಕ್ ಅಧ್ಯಕ್ಷ ಸಚ್ಚಿನ್ ಚಲುವರಾಯಸ್ವಾಮಿ ಭಾಗವಹಿಸುವರು ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಆರೋಗ್ಯ ಇಲಾಖೆಯ ಶುಶ್ರೂಷಕಿಯರು, ಆಶಾ ಕಾರ್ಯಕರ್ತೆಯರು, ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರಿಗೆ ಅಭಿನಂದನೆ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು. ಸಂಜೆ 7ಗಂಟೆಗೆ ಚಂದ್ರಪ್ರಭ ಮತ್ತು ವಿನೋದ್ ಗೊಬ್ರಗಾಲ ಅವರಿಂದ ಮನೋರಂಜನೆ ನಡೆಯಲಿದೆ ಎಂದರು.

### ನಿವೇಶನಕ್ಕೆ ಅರ್ಜಿ: ಅವಧಿ ವಿಸ್ತರಿಸಿ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಮದ್ದೂರು

ತಾಲ್ಲೂಕು ವ್ಯಾಪ್ತಿಯಲ್ಲಿರುವ ನಿವೇಶನ ರಹಿತ ದಲಿತರಿಗೆ ಅರ್ಜಿ ಸಲ್ಲಿಸಲು ಅವಧಿಯನ್ನು ವಿಸ್ತರಿಸಬೇಕು ಹಾಗೂ ಪ್ರತಿಯೊಬ್ಬರಿಗೂ ನಿವೇಶನ ನೀಡಬೇಕೆಂದು ಒತ್ತಾಯಿಸಿ ದಲಿತ ಹಕ್ಕುಗಳ ಸಮಿತಿ ಸದಸ್ಯರು ನಗರದ ತಾಲ್ಲೂಕು ಪಂಚಾಯಿತಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಸಮಿತಿಯ ಜಿಲ್ಲಾಧ್ಯಕ್ಷ ಆರ್.ಕೃಷ್ಣ ಮಾತನಾಡಿ, ನಿವೇಶನ ರಹಿತರು 2025 ರಲ್ಲಿ ವಿವಿಧ ಪಂಚಾಯಿತಿಗಳಿಗೆ ಅರ್ಜಿ ಸಲ್ಲಿಸಿದ್ದರು. ಪಟ್ಟಿಗೆ ಸೇರಿಸಲು ಹಾಗೂ ನಿವೇಶನ ರಹಿತರಿಗೆ ಅರ್ಜಿ ಸಲ್ಲಿಸಲು ಇದೇ ಮೇ 30 ವರೆಗೆ ಗಡುವು ನೀಡಲಾಗಿತ್ತು. ಕೆಲವರು ಅರ್ಜಿ ಸಲ್ಲಿಸದ ಕಾರಣ ದಿನಾಂಕ ವಿಸ್ತರಿಸಬೇಕೆಂದು ರಾಜ್ಯ ಸರ್ಕಾರವನ್ನು ಒತ್ತಾಯಿಸಿದರು. ಒಂದು ಕೋಟಿಗೂ ಹೆಚ್ಚು ದಲಿತರನ್ನು ಬರಿ ಮತದಾನಕ್ಕೆ ಬಳಸಿಕೊಳ್ಳಲಾಗುತ್ತಿದೆ, ಅಭಿವೃದ್ಧಿಗೆ ಬರುತ್ತಿರುವ ಅನುದಾನಗಳು ಸಮರ್ಪಕ ಬಳಕೆಯಾಗುತ್ತಿಲ್ಲ ಎಂದರು.

ಆತಗೂರು, ಹೆಮ್ಮನಹಳ್ಳಿ, ಸೋಮನಹಳ್ಳಿ ಹಾಗೂ ಸಾದೊಳಲು ಗ್ರಾಮ ಪಂಚಾಯತಿಗಳಲ್ಲಿ 2025 ರ ನವೆಂಬರ್ 17, ರಂದು ಅರ್ಜಿಗಳನ್ನು ಸಲ್ಲಿಸಲಾಗಿದೆ. ಪಂಚಾಯಿತಿಗಳು ನಿವೇಶನ ರಹಿತರಿಗೆ ನಿವೇಶನ ನೀಡಲು ಖಾಲಿ ಜಾಗ ಗುರುತಿಸಿಲ್ಲ ಆರೋಪಿಸಿದರು.

ಸೋಮನಹಳ್ಳಿಯ ಮಲ್ಲಯ್ಯನಗರದ ಕೆ.ಡಿ.ಬಿ. ಜಾಗದಲ್ಲಿ 3 ಎಕರೆ, ಆತಗೂರು ಗ್ರಾಮ ಪಂಚಾಯಿತಿಯ ಆಲಂಶೆಟ್ಟಹಳ್ಳಿಯಲ್ಲಿ 1.20 ಎಕರೆ ಸರ್ಕಾರಿ ಜಾಗ ಇದೆ.

ಉಳಿದ ಪಂಚಾಯ್ತಿಗಳಲ್ಲಿಯೂ ಜಾಗಗಳನ್ನು ಗುರುತಿಸಲು ಸಮಿತಿ ಒತ್ತಾಯಿಸುತ್ತದೆ ಎಂದು ವಿವರಿಸಿದ ಮನವಿಪತ್ರವನ್ನು ತಾ.ಪಂ ವ್ಯವಸ್ಥಾಪಕ ಮುನೇಂದ್ರಕುಮಾರ್ ಅವರಿಗೆ ಸಲ್ಲಿಸಲಾಯಿತು. ಸಮಿತಿ ಜಿಲ್ಲಾ ಕಾರ್ಯದರ್ಶಿ ಅಂಬೂಜಿ, ಖಜಾಂಚಿ ಎಂ.ವಿಜೇಂದ್ರಕುಮಾರ್, ಉಪಾಧ್ಯಕ್ಷರಾದ ಕೆ.ಶಿವಲಿಂಗಯ್ಯ, ವೆಂಕಟೇಶ್, ಸಹ ಕಾರ್ಯದರ್ಶಿ ಜಯರಾಮಯ್ಯ, ಸಮಿತಿ ಸದಸ್ಯರಾದ ರೇಣುಕಮ್ಮ, ಕೆ.ಬೋರಯ್ಯ, ಟಿ.ಎಲ್.ಮಹೇಶ್ ಹಾಜರಿದ್ದರು.

ಅಂತರಾಳದಿಂದ... EDITORIAL

# ಬಂಗಾಳದ ರೈತರ ಗೋಳು



ಪಶ್ಚಿಮಬಂಗಾಳದಲ್ಲಿ ಕೇಸರಿ ಯುಗ ಆರಂಭವಾಗಿದೆ ಎನ್ನುವುದನ್ನು ಸ್ಪಷ್ಟ ಪಡಿಸುವ ಉದ್ದೇಶದಿಂದ ನೂತನ ಮುಖ್ಯಮಂತ್ರಿ ಸುವೇಂದು ಅಧಿಕಾರಿ ನೇತೃತ್ವದ ಹೊಸ ಬಿಜೆಪಿ ಸರಕಾರವು 'ಪ್ರಾಣಿ ಹತ್ಯೆ ನಿಯಂತ್ರಣ ಕಾಯ್ದೆ'ಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವ ಕೊಡುಗೆಯನ್ನು ಪಶ್ಚಿಮಬಂಗಾಳಕ್ಕೆ ನೀಡಿದೆ. ಈ ಕೊಡುಗೆಯನ್ನು ಯಾವ ಕೈಯಲ್ಲಿ ಸ್ವೀಕರಿಸಬೇಕು ಎನ್ನುವ ಗೊಂದಲದಲ್ಲಿದ್ದಾರೆ ಪಶ್ಚಿಮಬಂಗಾಳದ ರೈತರು. ಮೇಲ್ನೋಟಕ್ಕೆ ಜಾನುವಾರು ಹತ್ಯೆ ನಿಷೇಧ ಕಾಯ್ದೆ ಯಾಗಿದ್ದರೂ, ವಾಸ್ತವದಲ್ಲಿ ರೈತರು ತಮ್ಮ ಜಾನುವಾರುಗಳನ್ನು ಯಾರಿಗೆ ಮಾರಬೇಕು, ಮಾರಬಾರದು ಎನ್ನುವ ಅವರ ಹಕ್ಕನ್ನು ಕಿತ್ತುಕೊಳ್ಳುವ ಕಾಯ್ದೆ ಇದಾಗಿದೆ. ಪ್ರಾಣಿ ಹತ್ಯೆ ನಿಯಂತ್ರಣ ಕಾಯ್ದೆಯ ಹೆಸರಿನಲ್ಲಿ ಜಾನುವಾರು ಮಾರಾಟಕ್ಕೆ ಸಂಬಂಧಿಸಿ ಸರಕಾರವು ಹಲವು ಕಠಿಣ ನಿಬಂಧನೆಗಳನ್ನು ಮಾಡಿದ್ದು, ಇದು ನೇರವಾಗಿ ತಾವು ಸಾಕಿದ ಸಾವಿರಾರು ರೂಪಾಯಿ ಬೆಲೆಬಾಳುವ ಜಾನುವಾರುಗಳನ್ನು ವ್ಯಾಪಾರಿಗಳಿಗೆ ಮಾರಾಟ ಮಾಡದಂತೆ ರೈತರ ಕೈಗಳನ್ನು ಕಟ್ಟಿ ಹಾಕಿದೆ. ಈ ಕಾನೂನನ್ನು ದುರ್ಬಳಕೆ ಮಾಡಿ ಒಂದು ನಿರ್ದಿಷ್ಟ ಸಮುದಾಯದ ಮೇಲೆ ದಾಳಿ ನಡೆಸಲು ಸಂಘಪರಿವಾರದೊಳಗಿನ ನಕಲಿ ಗೋರಕ್ಷಕರು ಸಿದ್ಧತೆ ನಡೆಸುತ್ತಿದ್ದಂತೆಯೇ, ಪಶ್ಚಿಮಬಂಗಾಳದ ಮುಸ್ಲಿಮರು ರೈತರಿಂದ ಗೋವುಗಳನ್ನು ಖರೀದಿಸುವುದಕ್ಕೆ ಸ್ಪಷ್ಟವಾಗಿ ನಿರಾಕರಿಸಿದ್ದಾರೆ. ಇದೀಗ ಪಶ್ಚಿಮಬಂಗಾಳದಲ್ಲಿ ಪರಿಸ್ಥಿತಿ ತಿರುವು ಮುರುವಾಗಿದೆ. ಮುಸ್ಲಿಮರು ಗೋವುಗಳನ್ನು ಖರೀದಿ ಮಾಡಲು ನಿರಾಕರಿಸುತ್ತಿದ್ದರೆ ಅಲ್ಲಿನ ರೈತರು ಜಾನುವಾರುಗಳನ್ನು ಕೊಂಡುಕೊಳ್ಳಿ ಎಂದು ವ್ಯಾಪಾರಿಗಳಲ್ಲಿ ದೀನವಾಗಿ ಕೇಳಿಕೊಳ್ಳುತ್ತಿದ್ದಾರೆ. ಇದರ ಬೆನ್ನಿಗೇ, ಜಮೀಯತ್ ಉಲೇಮಾ ಎ ಹಿಂದ್, ಗೋವನ್ನು ರಾಷ್ಟ್ರೀಯ ಪ್ರಾಣಿಯಾಗಿ ಘೋಷಿಸಿ ಅವುಗಳನ್ನು ರಕ್ಷಿಸಿ ಎಂದು ಕರೆ ನೀಡಿದೆ. ಸರಕಾರದ ನೀತಿಯಿಂದಾಗಿ ತಮ್ಮ ಜಾನುವಾರುಗಳನ್ನು ಮಾರಾಟ ಮಾಡಲಾಗದ ನೂರಾರು ರೈತರು ಸರಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. 20ನೇ ಜಾನುವಾರು ಗಣತಿಯ ಪ್ರಕಾರ ಪಶ್ಚಿಮಬಂಗಾಳ ಅತಿ ಹೆಚ್ಚು ಗೋವುಗಳನ್ನು ಹೊಂದಿರುವ ರಾಜ್ಯವಾಗಿದೆ. ಇಲ್ಲಿ 1.90 ಕೋಟಿಗೂ ಅಧಿಕ ಗೋವುಗಳಿವೆ ಎಂದು ಅಂದಾಜಿಸಲಾಗಿದೆ. ಈಬಾರಿ ನೂರಾರು ರೈತರು ಜಾನುವಾರು ಸಂತೆಗೆ ಗೋವುಗಳನ್ನು ಕೊಂಡೊಯ್ದಿದ್ದಾರಾದರೂ ಅವುಗಳನ್ನು ಖರೀದಿ ಮಾಡುವವರಿಲ್ಲದೆ ಅವರು ನಿರಾಶರಾಗಿ ಮರಳಿದ್ದಾರೆ. ನೀವು ನಮಗೆ ಗೋವುಗಳನ್ನು ಮಾರಿ ಹಣ ಸಂಪಾದಿಸುತ್ತೀರಿ. ಆದರೆ ಖರೀದಿ ಮಾಡಿದ ನಾವು ಬಳಿಕ ಜೈಲು ಸೇರಬೇಕಾಗುತ್ತದೆ ಅಥವಾ ನಕಲಿ ಗೋರಕ್ಷಕರಿಂದ ಹಲ್ಲೆಗೊಳಗಾಗಬೇಕಾಗುತ್ತದೆ ಎನ್ನುವುದು ಸ್ಥಳೀಯ ಮುಸ್ಲಿಮ್ ವ್ಯಾಪಾರಿಗಳ ಆಕ್ಷೇಪ. ವಿಪರ್ಯಾಸವೆಂದರೆ, ಗೋಸಾಕಣೆಯನ್ನು ನೆಚ್ಚಿಕೊಂಡಿರುವ ಘೋಷ್ ಸಮುದಾಯವು ಈ ಬಾರಿ ಬಿಜೆಪಿಯನ್ನು ಬೆಂಬಲಿಸಿತ್ತು. ಇದೀಗ ಅದೇ ಬಿಜೆಪಿ ಸರಕಾರ ಮಾಡಿರುವ ಕಠಿಣ ನಿಬಂಧನೆಯಿಂದಾಗಿ ಘೋಷ್ ಸಮುದಾಯ ಕಂಗಾಲಾಗಿದೆ. ಘೋಷ್ ಸಮುದಾಯದ ರೈತರು ಗೋಸಾಕಣೆಗಾಗಿ ಲಕ್ಷಾಂತರ ರೂಪಾಯಿಯನ್ನು ಬ್ಯಾಂಕ್‌ಗಳಿಂದ ಸಾಲ ಮಾಡಿ ಹೂಡಿಕೆ ಮಾಡುತ್ತಾರೆ. ಬಕ್ರೀದ್ ಸಮಯದಲ್ಲಿ ಮಾರುಕಟ್ಟೆಯಲ್ಲಿ ಅನುಪಯುಕ್ತ ಗೋವುಗಳನ್ನು ಮಾರಿ ಅದರಿಂದ ಸಿಗುವ ಹಣವನ್ನು ಸಾಲದ ಕಂತುಗಳನ್ನು ಕಟ್ಟುವುದಕ್ಕೂ ಅವರು ಬಳಸುತ್ತಾರೆ. ಇದೀಗ ಈ ಸಾಲದ ಕಂತುಗಳನ್ನು ಹೇಗೆ ಕಟ್ಟಬೇಕು ಎನ್ನುವ ದಾರಿ ತಿಳಿಯದೆ ಸರಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. ಒಂದು ರೀತಿಯಲ್ಲಿ ಇದು ಭಾರತದ ಎಲ್ಲಾ ರೈತರ ಗೋಳೂ ಹೌದು. ಅನುಪಯುಕ್ತ ಗೋವುಗಳನ್ನು ಮಾರಿ ಅದರಿಂದ ಲಾಭಮಾಡಿಕೊಳ್ಳುತ್ತಿದ್ದ ರೈತರೆಲ್ಲರೂ ಗೋಹತ್ಯೆ ನಿಷೇಧ ಕಾನೂನಿನಿಂದಾಗಿ ತಮ್ಮ ಗೋವುಗಳನ್ನು ಮಾರಾಟ ಮಾಡಲಾಗದ ಸ್ಥಿತಿಯಲ್ಲಿದ್ದಾರೆ.

ಇದು ಒಟ್ಟು ಹೈನೋದ್ಯಮಗಳ ಮೇಲೆ ಪರಿಣಾಮ ಬೀರುತ್ತಿದೆ. ಇದೇ ಸಂದರ್ಭದಲ್ಲಿ ಲಾಭಕ್ಕೆ ಮಾರುತ್ತಿದ್ದ ಗೋವುಗಳನ್ನು ಗೋಶಾಲೆಗಳಿಗೆ ಉಚಿತವಾಗಿ ನೀಡಬೇಕು. ಇಲ್ಲಿ ಗೋಶಾಲೆಗಳ ಹೆಸರಿನಲ್ಲೂ ಬೃಹತ್ ಅಕ್ರಮಗಳು ನಡೆಯುತ್ತಿವೆ. ಭಾರತದಲ್ಲಿ ಪಶುಸಂಗೋಪನೆ ಮತ್ತು ಹೈನುಗಾರಿಕಾ ಇಲಾಖೆಯಡಿ ಒಟ್ಟು 7,676 ಅಧಿಕೃತ ನೋಂದಾಯಿತ ಗೋಶಾಲೆಗಳಿವೆ. ಸುಮಾರು 5,500 ಗೋಶಾಲೆಗಳು ರಾಜ್ಯ ಮತ್ತು ಕೇಂದ್ರ ಸರಕಾರದ ಯೋಜನೆಗಳಡಿ ಅನುದಾನಗಳನ್ನು ಪಡೆಯುತ್ತಿವೆ. ದೇಶದಲ್ಲೇ ಅತಿ ಹೆಚ್ಚು ಗೋಶಾಲೆಗಳಿರುವುದು ಬಡತನ, ಅಪೌಷ್ಟಿಕತೆಗಳಿಗೆ ಕುಖ್ಯಾತವಾಗಿರುವ ಉತ್ತರ ಪ್ರದೇಶದಲ್ಲಿ. ಇಲ್ಲಿ, 6,000 ಗೋಶಾಲೆಗಳಿವೆ.

### ಯೋಜನೆಗಳ ಪ್ರಣಾಳಿಕೆ

**ಎರಡನೇ ಸ್ಥಾನದಲ್ಲಿ ಉತ್ತರ ಪ್ರದೇಶ ಮತ್ತು ಮೂರನೇ ಸ್ಥಾನದಲ್ಲಿ ಮಧ್ಯಪ್ರದೇಶವಿದೆ. ಪಶ್ಚಿಮಬಂಗಾಳದಲ್ಲಿ ಘೋಷ್ ಸಮುದಾಯ ಗೋಸಾಕಣೆಯನ್ನೇ ನೆಚ್ಚಿಕೊಂಡಿವೆ. ಅವರು ಇದಕ್ಕಾಗಿ ಕೋಟ್ಯಂತರ ರೂಪಾಯಿಯನ್ನು ಹೂಡಿಕೆ ಮಾಡುತ್ತಾರೆ. ಅನುಪಯುಕ್ತ ಗೋವುಗಳನ್ನು ಜಾನುವಾರು ಸಂತೆಗಳಲ್ಲಿ ಮಾರಿ, ಇತರ ಗೋವುಗಳ ಆಹಾರ ವೆಚ್ಚಗಳನ್ನು ಅವರು ಭರಿಸುತ್ತಾರೆ. ಒಂದು ಗೋವು ಏಳರಿಂದ ಎಂಟು ವರ್ಷಗಳವರೆಗೆ ಹಾಲು ನೀಡುತ್ತದೆ. ಹಾಲು ನೀಡುವುದನ್ನು ನಿಲ್ಲಿಸಿದ ಗೋವವನ್ನು 14 ವರ್ಷದವರೆಗೆ ಸಾಕುವುದರಿಂದ ರೈತರಿಗೆ ಸುಮಾರು 7.5 ಲಕ್ಷ ರೂ.ಗಿಂತ ಹೆಚ್ಚು ವೆಚ್ಚವಾಗುತ್ತದೆ ಎನ್ನುವುದು ಪ.ಬಂಗಾಳದ ರೈತರ ಅಳಲು.**

# ರಾಮಾಯಣ



ತನ್ನ ಕುರುಹಾಗಿ ಜನಕಜೆಯು ಹನುಮನಿಗೆ ತನ್ನ ಶಿರೋರತ್ನವನ್ನಿತ್ತು ಅವನನ್ನು ಬೀಳ್ಕೊಟ್ಟದ್ದು

• ಹಿಂದಿನ ಸಂಚಿಕೆಯಿಂದ **121ನೆಯ ಅಧ್ಯಾಯ**

ದಶಕಂಠನು ಚಾರಿತ್ರ್ಯವಿಲ್ಲದವನು, ಯಾರು ತಿಳಿಹೇಳಿದರೂ ಕೇಳದವನು, ಹದಿನಾಲ್ಕು ಸಾವಿರ ವೀರರೊಡನೆ ಎದುರಾದ ತ್ರಿಶಿರ ಮುಂತಾದವರನ್ನು ರಾಮನು ತಾನೊಬ್ಬನೇ ಕೊಂದುದನ್ನೂ ಮನಸ್ಸಿಗೆ ತಂದುಕೊಳ್ಳದೆ ಉನ್ಮತ್ತನಾಗಿದ್ದಾನೆ. ಇದನ್ನೆಲ್ಲ ತಿಳಿದು ಭಾಸ್ಕರಸಮಾನನಾದ ರಾಮನು ನನ್ನನ್ನು ಕರೆದೊಯ್ಯಲು ಹೇಳು' ಎಂದು ಕಂಬನಿ ಮಿಡಿಯುವ ಜಾನಕಿಯನ್ನು ನೋಡಿ, ಮರುಕಗೊಂಡ ಮರುತಸುತನು, ರಾಮನ ಬಳಿ ಹೋಗಿ ನಿನ್ನ ಪರಿಸ್ಥಿತಿಯನ್ನೆಲ್ಲ ವಿವರಿಸುತ್ತೇನೆ ಆತನು ಬೇಗ ಬಂದು ನಿನ್ನನ್ನು ಪಾರುಮಾಡುತ್ತಾನೆ, ಇದು ನಿಜ. ಈ ದುರುಳನ ಮಾತಿನಿಂದ ಕುದಿಯುವುದೇತಕ್ಕೆ ನನ್ನ ಭುಜದ ಮೇಲೆ ಕೂತರೆ ಸಮುದ್ರವನ್ನು ದಾಟಿ ಒಂದು ಕ್ಷಣದಲ್ಲಿ ನಿನ್ನನ್ನು ಒಯ್ದು ಶ್ರೀರಾಮನಿಗೊಪಿಸುತ್ತೇನೆ. ಆಗೇನಾದರೂ ಕೋಪಗೊಂಡು ದೇವದೈತ್ಯಾದಿಗಳು ಬಂದು ಕೆಣಕಿದರೆ ಯಾರೊಬ್ಬರನ್ನು ಹಿಂದಿರುಗಿ ಹೋಗಲಾರ, ಎಷ್ಟೇ ಜನರಾದರೂ ತರಿದು ಹಾಕುವ ಸಾಹಸ ನನಗಿದೆ, ತಾಯಿ. ಸಿದ್ಧಿಗಾಗಿ ತಪಸ್ಸು ಮಾಡುವ ಯೋಗಿಯ ರೀತಿಯಲ್ಲಿರುವ ರಾಘವಚಂದನಿದ್ದ ಕಡೆಗೆ ರೋಹಿಣಿಯಂತೆ ಕಂಗೊಳಿಸುವ ನಿನ್ನ ಚರಣಗಳನ್ನು ಒಯ್ದು ಅರ್ಪಿಸುತ್ತೇನೆ ಎಂದು ಶ್ರದ್ಧೆಯಿಂದ ನುಡಿದ ಪ್ಲವಗಪತಿಯ ಪರಾಕ್ರಮವನ್ನು ನೋಡಿ ಧರಣಿಜಾತೆಯು ನಸುನಗುತ್ತ, ವಿಪುಲ ದೈತ್ಯಸೈನ್ಯವನ್ನು ಗೆದ್ದು ಸಮುದ್ರವನ್ನು ದಾಟಿ ಶ್ರೀರಾಮನಿಗೆ ನನ್ನನ್ನು ಒಪ್ಪಿಸುತ್ತೇನೆಂಬ ನಿನ್ನ ಮಾತು ಅತಿರೇಕವೆನ್ನಿಸುತ್ತಿದೆ ಈ ಮಾತಿನಿಂದ ನಿನ್ನ ಕಪಿತನ ಪ್ರಕಟವಾಯಿತು ಎಂದಳು. ತನ್ನ ಸಾಹಸದ ಬಗ್ಗೆ ಸಂಶಯ ತಾಳಿ, ತನ್ನನ್ನು ಹುಲುಕಪಿಯೆಂದು ತಿಳಿದಳೆಂದು ಬಗೆದ ಹನುಮನು, ನನ್ನ ಬಲಪರಾಕ್ರಮಗಳನ್ನು ನೋಡಿ, ಆನಂತರ ದಯೆ ತೋರು' ಎಂದು ಹೇಳಿ, ಶುಕ್ಲಪಕ್ಷದ ಚಂದ್ರನ ಕಾಂತಿ ಬೆಳೆಯುವಂತೆ ತನ್ನ ದೇಹವನ್ನು ಹಿಗ್ಗಲಿಸತೊಡಗಿದ ಅವನ ತಲೆ ಆಗಸದೆತ್ತರ ಬೆಳೆಯಿತು, ದೇಹವು ಕನಕಾಚಲದಂತೆ ವಿಸ್ತರಿಸಿತು. ಸದೃಶವಾದ ವೀರರೌದ್ರಗಳಿಗೆ ಕೋಡುಗಳು ಮೂಡಿದಂತೆ ಭೀಕರ ದಾಡೆಗಳಿಂದ ಕೂಡಿ, ಅಸಮಾನವೆನಿಸುವ ನೀಲಿಯ ಕಂಠ, ತಲೆ, ಕಾಂತಿಯುಕ್ತವಾದ ಮುಖವನ್ನು ಹೊಂದಿ ಮಂದರಪರ್ವತದಂತೆ ಮಾರುತಿಯು ಸೀತೆಗೆ ಮನರಂಜನೆಯುಂಟುಮಾಡುತ್ತ ಹೀಗೆಂದ ಈ ಬೆಟ್ಟ ಈ ವನ, ಈ ದೈತ್ಯಪಡೆ, ಈ ಸಮುದ್ರ - ಇವೆಲ್ಲವನ್ನೂ ಎತ್ತಿಕೊಂಡು ರುದ್ರನೇ ಅಡ್ಡಿಬಂದರೂ ಸೊಳ್ಳೆಯ ಆಕಾರದಲ್ಲಿ ಆಗಸದಲ್ಲಿ ಹಾರಿಹೋಗುತ್ತೇನೆ ಶಂಕೆಯನ್ನು ಬಿಟ್ಟು, ಶೋಕಮೋಹಗಳನ್ನು ತೊರೆದು ಬಾರಮ್ಮ ಎಂದು ಹೇಳುವ ಕಪಿಯನ್ನು ನೋಡಿ ವಿಸ್ಮಯದಿಂದ ಕೂಡಿದರೂ ನಗುತ್ತ ಸೀತೆಯು, ''ಹನುಮನೇ ಕೇಳು, ಗಾಳಿಯ ವೇಗವನ್ನೇ ಸಾಮಾನ್ಯವೆನ್ನಿಸುವ ವೇಗ, ಶಿವನ ಬಲ, ಬೃಹಸ್ಪತಿಯನ್ನು ಮೀರಿಸುವ ಬುದ್ಧಿಬಲದಿಂದ ಕೂಡಿದ ನೀನು ಅಸಮಾನ ವಿಕ್ರಮಶಾಲಿಯೆಂಬುದು ತಿಳಿದಿದೆ, ನಿನಗೆ ಖೂಳ ರಾಕ್ಷಸರ ಭಯವಿಲ್ಲ, ರುದ್ರನೂ ನಿನಗೆ ಅಡ್ಡಬರಲಾರ, ನೀನು ಕಾರ್ಯಸಾಧಿಸುವ ಬಗ್ಗೆ ನನಗೆ ಸಂದೇಹವಿಲ್ಲ. ಆದರೆ ಒಂದು ವಿಷಯವನ್ನು ತಿಳಿಸುತ್ತೇನೆ, ಕೇಳು ನೀನು ನನ್ನನ್ನು ಹೊತ್ತು ಗಾಳಿಯ ವೇಗದಿಂದ ನೂರು ಯೋಜನದಗಲದ ಸಮುದ್ರದ ಮೇಲೆ ಹಾರುತ್ತಿದ್ದರೆ ನಾನು ಹೇಗಿರಲಿ ವೇಗಕ್ಕೆ ಹೆದರಿ ನಾನು ಸಮುದ್ರವನ್ನೇ ನೋಡುತ್ತ ಕೆಳಕ್ಕೆ ಬಿದ್ದರೆ ನಿನ್ನ ಸಾಹಸವೆಲ್ಲ ವ್ಯರ್ಥವಾಗಿಬಿಡುತ್ತದೆ. ಆಮೇಲೆ ನಿನ್ನ ಯಜಮಾನನಿಗೆ ಏನು ಉತ್ತರ ಕೊಡುತ್ತೀಯೆ? ಇದನ್ನೆಲ್ಲ ಯೋಚಿಸದೆ ಹೇಳುತ್ತಿದ್ದೀಯೆ. ನಾನು ಭಯದಿಂದ ಬಾಯಿಬಿಟ್ಟರೆ ರಕ್ಕಸರು ನಿನ್ನ ಮೇಲೆರಗದೇ ಇರರು ನೀನು ಹೊಡೆದಾಡಲು ತೊಡಗಿದರೆ ನಾನು ಕೆಳಗೆ ಉರುಳದೆ ಉಳಿಯುತ್ತೇನೆಯೇ? ಹೋರಾಟದಲ್ಲಿ ಜಯ ಯಾರಿಗೆ ದೊರಕುವುದೋ ಹೇಗೆ ಹೇಳುವುದು? ಸಿಕ್ಕಿಬಿದ್ದರೆ ನನ್ನನ್ನು ಉಳಿಸುತ್ತಾರೆಯೇ? ಆದ್ದರಿಂದ ನೀನು ಬೇಗ ವಾಪಸ್ಸು ಹೋಗಿ ನನ್ನ ವಿಚಾರವನ್ನೆಲ್ಲ ರಾಘವನಿಗೆ ತಿಳಿಸಿ ಬೇಗ ಬಂದು ನನ್ನನ್ನು ಕರೆದೊಯ್ಯುವಂತೆ ಮಾಡುವುದೇ ಲೇಸು. ವಿವೇಕಶಾಲಿಗಳು ಮೆಚ್ಚುವಂತಹ ರೀತಿಯಲ್ಲಿ ಯೋಚಿಸಿ ಅದರಂತೆ ಮಾಡು. ನೀನು ಕ್ರೂರ ರಕ್ಕಸರನ್ನು ಗಣಿಸುವವ

ಮುಂದುವರೆಯುವುದು




ಅಂತರಂಗದ ಮಾತು

ಡಾ.ಸುಧಾಕರ.ಜಿ. ಲಕ್ಕವಳ್ಳಿ
ಲೇಖಕರು
ಸಾಮಾಜಿಕ ಚಿಂತಕರು

# ತೊಡೆ,ತೋಳು ತಟ್ಟಿದರೆ ಎದುರಾಳಿ ತತ್ತರ!

**ವಿಜ್ಞಾನದ ಕಣ್ಣಲ್ಲಿ ಇದು ದೇಹದ ಅಲಾರಂ. ಮೈಗೆ ಬಿದ್ದ ಪೆಟ್ಟು ಮೆದುಳಿಗೆ ಸಿಡಿಲಿನ ಸಂದೇಶ ರವಾನಿಸಿ, ಅಡ್ರಿನಾಲಿನ್ ಉಕ್ಕಿಸುತ್ತದೆ. ರಕ್ತ ಸ್ನಾಯುಗಳತ್ತ ನುಗ್ಗಿ, ಮೈ ಕಾದ ಕಬ್ಬಿಣವಾಗುತ್ತದೆ. ಕಲ್ಲಿನಂಥ ತೊಡೆ, ತೋಳುಗಳಿಂದ ಹೊಮ್ಮುವ ಗುಡುಗಿನಂಥ ನಾದ ಪೈಲ್ವಾನನ ವರ್ಷಗಳ ತಪಸ್ಸು, ಬ್ರಹ್ಮಚರ್ಯದ ಸಾಕ್ಷಿ. ತನ್ನ ಮೈಗೆ ತಾನೇ ಪೆಟ್ಟು ಕೊಟ್ಟು ನೋವಿನ ಹದ ತಿಳಿಯುವ ಈ ಕ್ರಿಯೆ ಎಂಡೋರ್ಫಿನ್ ಸುರಿಸಿ, ಕಣದ ಏಟುಗಳನ್ನು ಮರೆಸುತ್ತದೆ.**



ಮಣ್ಣಿನ ಮಗನೆಂದರೆ ರೈತ ಮಾತ್ರವಲ್ಲ, ಮೈಗೆ ಮಣ್ಣು ಮೆತ್ತಿ ಪೌರುಷ ಮೆರೆಯುವ ಮಲ್ಲನೂ ಹೌದು. ಜಾತ್ರೆಯ ಕಣವಿರಲಿ, ನಗರದ ಅಖಾಡವಿರಲಿ, ಪೈಲ್ವಾನ ರಣಕ್ಕೆ ಇಳಿಯುವ ಮುನ್ನ ಹೊಡೆಯುವ ಶೆಡ್ಡು ಇಡೀ ಪರಿಸರವನ್ನೇ ನಿಶ್ಯಬ್ದಗೊಳಿಸುತ್ತದೆ. ಕೆಂಪೇರಿದ ಕಣ್ಣು, ಭುಜ ಉಜ್ಜಿ, ಕಲ್ಲಿನಂಥ ತೊಡೆಗೆ, ತೋಳಿಗೆ ಅಂಗೈ ಅಪ್ಪಳಿಸಿದಾಗ ಮೂಡುವ ಆ ಸದ್ದು ಕೇವಲ ಧ್ವನಿಯಲ್ಲ ಅದು ಸ್ನಾಯುಗಳ ಘರ್ಜನೆ, ಪರಂಪರೆಯ ಪ್ರತಿಧ್ವನಿ. ಕುಸ್ತಿ ಮೈದಾಟಕ್ಕಿಂತ ಮೊದಲು ಮನದಾಟ. ತೊಡೆ, ತೋಳು ತಟ್ಟುವುದು(ಶೆಡ್ಡು) ಎದುರಾಳಿಯ ಎದೆಯಲ್ಲಿ ನಡುಕ ಹುಟ್ಟಿಸುವ ಮನೋಯುದ್ಧ. ಕಣಕ್ಕೆ ಸಿದ್ಧ, ಧೈರ್ಯವಿದ್ದರೆ ಬಾ ಎಂಬ ಸವಾಲು ಆ ಒಂದೇ ಏಟಿನಲ್ಲಿದೆ. ಪ್ರೇಕ್ಷಕರಿಗೆ ರೋಮಾಂಚನ, ಗುರುಪರಂಪರೆಗೆ ನಮನ. ಭೀಮ-ದುರ್ಯೋಧನರ ಕಾಲದ ಪ್ರತಿಧ್ವನಿ ಇಂದಿಗೂ ಅಖಾಡದಲ್ಲಿ ಜೀವಂತ. ಜಿಮ್ ಯುಗದಲ್ಲೂ ಈ ಹೂಂಕಾರ ಮರೆಯಾಗಿಲ್ಲ.

ಇದು ವಿಜ್ಞಾನ-ಸಂಪ್ರದಾಯದ ಸಂಗಮ, ಮಣ್ಣಿನ ಗುಣದ ಜೈಕಾರ. ಮಲ್ಲ ತೊಡೆ, ತೋಳು ತಟ್ಟಿ ನಿಂತಾಗ ಅಲ್ಲಿ ಇತಿಹಾಸ ಎದ್ದು ನಿಲ್ಲುತ್ತದೆ.

### ನೀತಿ ಶಿಕ್ಷಣ

ಕಾರಣ ಮಕ್ಕಳು ಮಾನಸಿಕ ಸಮತೋಲನವನ್ನ ಕಾಪಾಡಿಕೊಳ್ಳಲು ಸಂಸ್ಕಾರ, ಶಿಸ್ತು, ಸಮಯಪಾಲನೆ ಹಾಗೂ ಮಾನವೀಯತೆಯ ಗುಣಗಳನ್ನು ಕಲಿಯಲು ನೀತಿ ಶಿಕ್ಷಣ ಬೇಕು. ಶಿಕ್ಷಣದ ಇತರೆ ಪಠ್ಯಪುಸ್ತಕಗಳ ಜೊತೆಗೆ ಒಂದು ಅಧ್ಯಯನ ವಿಷಯವಾಗಿ ಒಂದು ನೀತಿ ಶಿಕ್ಷಣ ಕಡ್ಡಾಯವಾಗಿ ಜಾರಿಗೆ ತರುವುದು ಅತ್ಯಂತ ಸೂಕ್ತ. ಇದರಿಂದ ಮಕ್ಕಳಲ್ಲಿ ಮಾನವ ಸಂಬಂಧ, ಪ್ರಾಣಿ ಪಕ್ಷಿಗಳ ಸಂಬಂಧ ಹಾಗೂ ಪ್ರಕೃತಿಯ ಸಂಬಂಧ ಈ ಬಗ್ಗೆ ಅರಿವು ಮೂಡುತ್ತದೆ. ಮಕ್ಕಳಲ್ಲಿ ಕುಟುಂಬದೊಂದಿಗೆ ಸಂಬಂಧ, ಸಮಾಜದೊಂದಿಗೆ ಸಂಬಂಧ ಹಾಗೂ ರಾಷ್ಟ್ರ ಸಂಬಂಧದ ಬಗ್ಗೆ ತಿಳುವಳಿಕೆ ಬಂದು ರಾಷ್ಟ್ರಪ್ರೇಮಿಗಳಾಗುತ್ತಾರೆ. ಆಗ ರಾಷ್ಟ್ರ ಕಾಲ ದೇಶ ಜಾತಿ ಧರ್ಮ ಮೀರಿ ಎಲ್ಲರೂ ಮನುಷ್ಯರಾಗಿ ಒಂದಾಗಿ ಬಾಳಲು ಸಹಕಾರಿಯಾಗುತ್ತದೆ. ಈ ರೀತಿ ನೀತಿ ಶಿಕ್ಷಣ ಇದ್ದಾಗ ಮಕ್ಕಳಲ್ಲಿ ಘರ್ಷಣೆ, ಪ್ರತೀಕಾರ, ಆತ್ಮಹತ್ಯೆ ಸುಳಿದಾಡುವುದಿಲ್ಲ.



ಕಲಾ ಸಾಹಿತ್ಯ

ಕೃಷ್ಣಪ್ಪ
ಲೇಖಕರು
ಪ್ರಗತಿ ಪರ ಚಿಂತಕ ಹಾಗೂ ವಿಮರ್ಶಕರು

# ಪೋಷಕರ ಹಾಗೂ ಮಕ್ಕಳ ಪರವಾಗಿ ಶಿಕ್ಷಣದಲ್ಲಿ ನೀತಿ ಶಿಕ್ಷಣ ಮತ್ತು ದೈಹಿಕ ಶಿಕ್ಷಣ ಕಡ್ಡಾಯವಾಗಿ ಜಾರಿಗೆ ತರುವುದು ಸೂಕ್ತ ಹಾಗೂ ಅನಿವಾರ್ಯ ಈ ಬಗ್ಗೆ ಶಿಕ್ಷಣ ಸಚಿವರ ಗಮನಕ್ಕೆ ನನ್ನ ಮನವಿ

ಮಕ್ಕಳ ಉಜ್ವಲ ಭವಿಷ್ಯಕ್ಕೆ ದೂರದೃಷ್ಟಿ ಇಟ್ಟುಕೊಂಡು ಅಮೂಲಾಗ್ರವಾಗಿ ವಿಮರ್ಶಿಸಿ, ಪರಮಾರ್ಶಿಸಿ ಯೋಚಿಸಿರುವ ಅಗತ್ಯ ಚಿಂತನೆಗಳನ್ನ ಸರ್ಕಾರ ಈ ಕೂಡಲೇ ಗಮನಹರಿಸಿ ಮಕ್ಕಳ ಭವಿಷ್ಯವನ್ನ ಉಜ್ವಲಗೊಳಿಸಲು ತಕ್ಷಣದಿಂದಲೇ ಅನುಷ್ಠಾನಕ್ಕೆ(ಜಾರಿಗೆ ) ತರುವುದು ಅತ್ಯಂತ ಸೂಕ್ತ ಹಾಗೂ ಅನಿವಾರ್ಯ. ಪೋಷಕರ ಹಾಗೂ ಮಕ್ಕಳ ನಡುವೆ ಅವಿನಾಭಾವ ಸಂಬಂಧವಿದೆ.ಈ ಸಂಬಂಧ ಹೃದಯ ಸಂಬಂಧ ಹಾಗೂ ಶಾಶ್ವತ ಸಂಬಂಧ ಈ ಸಂಬಂಧವನ್ನ ಯಾರಿಂದಲೂ ಬೇಧಿಸಲು ಸಾಧ್ಯವಿಲ್ಲ. ಈಗ್ಗೆ 20 ವರ್ಷಗಳಿಂದೀಚೆಗೆ ಕೆಲವು ಮಕ್ಕಳಲ್ಲಿ ಸಂಸ್ಕಾರದ ಕೊರತೆ ಜಾಸ್ತಿಯಾಗಿ ಮಾನವೀಯ ಮೌಲ್ಯಗಳು ಮಾಯವಾಗಿ ಕುಟುಂಬ ಹಾಗೂ ಸಮಾಜದಲ್ಲಿ ಸಮರ್ಪಕವಾದ ಸಂಬಂಧವಿಲ್ಲದೇ ಹಳಸಿದ ಕಲುಷಿತ ವಾತಾವರಣವಾಗಿದೆ. ಈ ಬಗ್ಗೆ ಕೆಲವು ಪೋಷಕರು ಹೇಳಿಕೊಳ್ಳಲು ಸಾಧ್ಯವಾಗದೇ ಕೊರಗುತ್ತಾ ಆಯಸ್ಸು ಮತ್ತು ಆರೋಗ್ಯವನ್ನು ಕ್ಷೀಣಿಸಿಕೊಂಡು ಹೇಗೋ ಹಾಗೋ ಬದುಕಬೇಕೆಂದು ಬದುಕುತ್ತಿದ್ದಾರೆ. ಅದೇ ರೀತಿ ಪೌಷ್ಟಿಕ ಆಹಾರದ ಕೊರತೆ ಒಂದು ಕಡೆಯಾದರೆ ಇನ್ನೊಂದು ಕಡೆ ದೈಹಿಕವಾಗಿ ಯಾವುದೇ ವ್ಯಾಯಾಮ ಕ್ರೀಡಾ ಚಟುವಟಿಕೆಗಳು ಇಲ್ಲದೇ ಆರೋಗ್ಯ ದಿನೇ ದಿನೇ ಕ್ಷೀಣಿಸುತ್ತಾ ತಾತನಿಗೆ ಇರುವ ಶಕ್ತಿ ತಂದೆಗಿಲ್ಲ, ತಂದೆಗಿರುವ ಶಕ್ತಿ ಮಕ್ಕಳಿಗಿಲ್ಲ, ಮಕ್ಕಳಿಗಿರುವ ಶಕ್ತಿ ಮೊಮ್ಮಕ್ಕಳಿಗಿಲ್ಲ ಈ ರೀತಿಯಾಗಿ ಪರಿಣಿಸಿದೆ.

ಕೆಲವು ಪೋಷಕರು ಮಕ್ಕಳಿಗೆ ಬೇಕಾಗಿರುವ ವ್ಯಾಯಾಮ ಹಾಗೂ ಕ್ರೀಡಾ ಚಟುವಟಿಗಳ ಬಗ್ಗೆ ಹಾಗೂ ಅವರ ಆರೋಗ್ಯದ ಕಡೆ ಗಮನಹರಿಸದೇ ಕೇವಲ ಪರೀಕ್ಷೆಗಳಲ್ಲಿ ಒಳ್ಳೆಯ ಮಾರ್ಕ್ಸ್ ಕೈಗೊಂಬೆಗಳಾಗಿದ್ದಾರೆ. ಆದ್ದರಿಂದ ನನ್ನ ಅನುಭವದ ಮೇರೆಗೆ ವಿಸ್ತೃತವಾಗಿ ವಿವರಿಸಿರುವ ಮನವಿ ಹಾಗೂ ಮಾರ್ಗ ಸೂಚಕಗಳು ಈ ಕೆಳಕಂಡಂತಿವೆ.

ಕಡ್ಡಾಯವಾಗಿ ಒಂದನೇ ತರಗತಿಯಿಂದ ಹತ್ತನೇ ತರಗತಿವರೆಗೆ ಮಾನವೀಯ ಮೌಲ್ಯಗಳು ಒಳಗೊಂಡ ಕಡ್ಡಾಯ ನೀತಿ ಶಿಕ್ಷಣ ಹಾಗೂ ಕಡ್ಡಾಯ ದೈಹಿಕ ಶಿಕ್ಷಣ ಅತ್ಯಗತ್ಯ ಕೂಡಲೇ ಜಾರಿಗೆ ತರುವುದು ಅಗತ್ಯ ಹಾಗೂ ಅನಿವಾರ್ಯ.

### ದೈಹಿಕ ಶಿಕ್ಷಣ

**ಆರೋಗ್ಯವೇ ಒಂದು ದೊಡ್ಡ ಉಡುಗೊರೆ ಆರೋಗ್ಯ ಸರಿ ಇದ್ದರೆ ಎಲ್ಲವೂ ಆರೋಗ್ಯ. ಬೆಳೆಯುವ ಮಕ್ಕಳಲ್ಲಿ ವ್ಯಾಯಾಮ ಹಾಗೂ ಕ್ರೀಡಾ ಚಟುವಟಿಕೆಗಳ ಮೂಲಕ ಆರೋಗ್ಯ ಕಾಪಾಡಿಕೊಳ್ಳುವುದು ಬಹಳ ಅತ್ಯ ಮುಖ್ಯ. ರಾಜ್ಯದಲ್ಲಿ ದೈಹಿಕ ಶಿಕ್ಷಣ ಜಾರಿಯಲ್ಲಿದ್ದರೂ ಸಹ ಬಹುತೇಕ ಶಾಲೆಗಳಲ್ಲಿ ಸರಿಯಾದ ಸಮರ್ಪಕವಾಗಿ ಅನುಷ್ಠಾನಕ್ಕೆ ತರುವಲ್ಲಿ ಸರ್ಕಾರ ವಿಫಲ ಮತ್ತು ವೈಫಲ್ಯವಾಗಿದೆ ಕಾರಣ ಆ ಬಗ್ಗೆ ಯಾರಿಗೂ ಕಾಳಜಿ ಇಲ್ಲ. ದೈಹಿಕ ಶಿಕ್ಷಣ ಇತರೆ ಪಠ್ಯಪುಸ್ತಕಗಳಿಗಿಂತ ಮೊದಲೇ ಸ್ಥಾನದಲ್ಲಿ ಗುರುತಿಸಿಕೊಳ್ಳುವ ಶಿಕ್ಷಣ. ಇದನ್ನು ಬಹುತೇಕ ಗುರುಗಳು, ಪೋಷಕರು ಮಕ್ಕಳು ಗುರುತಿಸಿಕೊಳ್ಳದೇ ಎಲ್ಲರೂ ಈ ದೈಹಿಕ ಶಿಕ್ಷಣವನ್ನ ಎಲ್ಲರೂ ಅಲ್ಲಗಳಿಯುತ್ತಾರೆ. ಈ ದೈಹಿಕ ಶಿಕ್ಷಣದಿಂದ ಸದಾ ಲವಲವಿಕೆಯಿಂದ ಆರೋಗ್ಯವಾಗಿ ಇರಬೇಕಾದರೆ ಮೆದುಳು ಹೃದಯ ಕಿಡ್ನಿ ಲಿವರ್ ರಕ್ತದ ಚಲನೆ ಮೂಳೆ ಮಾಂಸ ಖಂಡಗಳ ಭದ್ರತೆ ಹಾಗೂ ಇತರೆ ಶರೀರದಲ್ಲಿ ಆಗುವ ಬದಲಾವಣೆಗಳನ್ನ ಬಹುತೇಕ ಯಾರು ಕೂಡ ಗಣನೆಗೆ ತೆಗೆದುಕೊಳ್ಳುವುದಿಲ್ಲ.**

**ಕಡ್ಡಾಯವಾಗಿ ಇತರೆ ಪಠ್ಯಪುಸ್ತಕಗಳ ಜೊತೆಗೆ ದೈಹಿಕ ಶಿಕ್ಷಣದ ಪಠ್ಯಪುಸ್ತಕ ಅತ್ಯವಶ್ಯಕ. ಆದ್ದರಿಂದ ಮಕ್ಕಳ ದೇಹ ಇಂದ್ರಿಯ ಮಾತು ಮನ ಮತ್ತು ಬುದ್ಧಿ ಆರೋಗ್ಯವಾಗಿ ಇರಬೇಕಾದರೆ ಕಡ್ಡಾಯವಾಗಿ ಶಾಲೆಯಲ್ಲಿ ನೀತಿ ಶಿಕ್ಷಣ ಮತ್ತು ದೈಹಿಕ ಶಿಕ್ಷಣ ಜಾರಿಗೆ ತರುವುದು ಅತ್ಯಂತ ಸೂಕ್ತ ಹಾಗೂ ಅನಿವಾರ್ಯ. ಈ ಎರಡು ನೀತಿ ಮತ್ತು ದೈಹಿಕ ಶಿಕ್ಷಣವನ್ನು ಶಿಕ್ಷಣ ಸಂಸ್ಥೆಗಳಲ್ಲಿ ಕಡ್ಡಾಯವಾದರೆ ಮಕ್ಕಳು ಮಾನಸಿಕ ಮತ್ತು ದೈಹಿಕವಾಗಿ ಸದೃಢವಾಗುವುದರ ಜೊತೆಗೆ ನೇರವಾಗಿ ಎನ್ ಸಿಸಿ ಮೂಲಕ ರಾಷ್ಟ್ರೀಯ ಸೈನಿಕ ಶಾಲೆಗೆ ಸೇರುವ ಅರ್ಹತೆಗಳಿಸಿಕೊಂಡಿರುತ್ತಾರೆ ಆಗ ರಾಷ್ಟ್ರ ಬಲಿಷ್ಠ ಹಾಗೂ ಸದೃಢ ಸೇನಾ ಪಡೆಗಳಲ್ಲಿ ಒಂದಾಗಿರುತ್ತದೆ. ಮಕ್ಕಳೇ ಭವಿಷ್ಯದ ಸತ್ಪ್ರಜೆಗಳು. ಈ ನನ್ನ ಮೇಲ್ಕಂಡ ಮನವಿಯನ್ನ ಸರ್ಕಾರ ಈ ಕೂಡಲೇ ಪರಿಗಣಿಸಿ ಜಾರಿಗೆ ತರುವುದರ ಮೂಲಕ ಮಕ್ಕಳ ಭವಿಷ್ಯವನ್ನು ಅತಿ ಎತ್ತರಕ್ಕೆ ಕೊಂಡೊಯ್ಯುತ್ತೀರಾ ಎಂದು ನಂಬಿ ಈ ನನ್ನ ಮನವಿಯನ್ನ ಸರ್ಕಾರದ ಗಮನಕ್ಕೆ ಅದರಲ್ಲೂ ಶಿಕ್ಷಣ ಸಚಿವರ ಗಮನಕ್ಕೆ ತಂದಿರುತ್ತೇನೆ. ಇಂತಿ ವಂದನೆಗಳು**

# ಸೌತೆಕಾಯಿ ಜ್ಯೂಸ್ ಬಿಡಿ ಸೂಪ್ ಟ್ರೈ ಮಾಡಿ





ಬೇಸಿಗೆಯ ಬಿಸಿಲಿನಿಂದ ದೇಹವು ಬೇಗ ದಣಿಯುತ್ತದೆ. ಈ ಸೀಸನ್‌ನಲ್ಲಿ ನಿರ್ಜಲೀಕರಣ, ದೇಹದ ಉಷ್ಣತೆ ಮತ್ತು ಚರ್ಮದ ಸಮಸ್ಯೆಗಳಂತಹ ನಾನಾ ಸಮಸ್ಯೆಗಳು ಕಾಡುವುದು ಸಹಜ. ಹೀಗಾಗಿ ಈ ಸಮಯದಲ್ಲಿ ದೇಹವನ್ನು ತಂಪಾಗಿಡುವ ಆಹಾರವನ್ನು ಸೇವಿಸುವುದು ಬಹಳ ಮುಖ್ಯ. ಅದಕ್ಕಾಗಿ ಜನರು ಕಲ್ಲಂಗಡಿ, ಕರಬೂಜ, ಸೌತೆಕಾಯಿಯಂತಹ ಪದಾರ್ಥಗಳನ್ನು ತಿನ್ನುತ್ತಾರೆ. ವಿಶೇಷವಾಗಿ ಸೌತೆಕಾಯಿಯಲ್ಲಿ ಹೆಚ್ಚಿನ ನೀರಿನಾಂಶ ಇರುವುದರಿಂದ, ಇದು ಬೇಸಿಗೆಯಲ್ಲಿ ದೇಹಕ್ಕೆ ತಂಪನ್ನು ನೀಡುತ್ತದೆ. ಹೀಗಾಗಿ ಅನೇಕ ಮಂದಿ ಸೌತೆಕಾಯಿಯನ್ನು ಸಲಾಡ್ ಅಥವಾ ರೈತಾ ರೂಪದಲ್ಲಿ ತಿನ್ನುತ್ತಾರೆ. ಆದರೆ, ಎಂದಾದರೂ ತಂಪಾಗಿರುವ ಸೌತೆಕಾಯಿ ಸೂಪ್ ಕುಡಿದಿದ್ದೀರಾ? ಹೌದು, ಕೇವಲ 10 ನಿಮಿಷಗಳಲ್ಲಿ ತಯಾರಿಸಲಾಗುವ ಈ ಸೂಪ್ ರೆಸಿಪಿ ಈ ಕೆಳಗಿದೆ ನೋಡಿ.

ಸೌತೆಕಾಯಿಯು ಸುಮಾರು 95 ಪ್ರತಿಶತ ನೀರನ್ನು ಹೊಂದಿರುತ್ತದೆ. ಆದ್ದರಿಂದ, ಇದು ದೇಹವನ್ನು ಹೈಡ್ರೀಕರಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಇದಲ್ಲದೇ, ಇದು ವಿಟಮಿನ್ ಸಿ, ಫೈಬರ್ ಮತ್ತು ಉತ್ಕರ್ಷಣ ನಿರೋಧಕಗಳಲ್ಲಿ ಸಮೃದ್ಧವಾಗಿದೆ. ಇವು ಚರ್ಮವನ್ನು ಆರೋಗ್ಯಕರವಾಗಿಡುವುದಲ್ಲದೇ, ಹೊಟ್ಟೆಯನ್ನು ತಂಪಾಗಿರಿಸುತ್ತದೆ. ಪ್ರತಿದಿನ ಸೌತೆಕಾಯಿ ಸೂಪ್ ಕುಡಿಯುವುದರಿಂದ ದೇಹವು ತಾಜಾವಾಗಿರುವುದಲ್ಲದೇ ಮುಖಕ್ಕೆ ನೈಸರ್ಗಿಕ ಹೊಳಪನ್ನು ನೀಡುತ್ತದೆ ಎಂದು ಆರೋಗ್ಯ ತಜ್ಞರು ಹೇಳುತ್ತಾರೆ.

ತಾಜಾ ಸೌತೆಕಾಯಿಗಳು - 2 ಮೊಸರು - 1 ಕಪ್ ಪುದೀನ ಎಲೆಗಳು - 5 ರಿಂದ 6 ಹಸಿರು ಮೆಣಸಿನಕಾಯಿ -ಬ್ಲ್ಯಾಕ್‌ಸಾಲ್ಟ್ - ರುಚಿಗೆ ತಕ್ಕಷ್ಟು, ಹುರಿದ ಜೀರಿಗೆ ಪುಡಿ - ಟೀ ಸ್ಪೂನ್, ನಿಂಬೆ ರಸ - ಸ್ವಲ್ಪ ತಣ್ಣೀರು ಅಥವಾ ಐಸ್ ಕ್ಯೂಬ್‌ಗಳು ಮೊದಲು ಸೌತೆಕಾಯಿಯನ್ನು ತೊಳೆದು ಸಿಪ್ಪೆ ಸುಲಿದು ಸಣ್ಣ ತುಂಡುಗಳಾಗಿ ಕತ್ತರಿಸಿ. ನಂತರ, ಮಿಕ್ಸರ್ ಜಾರ್‌ನಲ್ಲಿ ಸೌತೆಕಾಯಿ ತುಂಡುಗಳು, ಮೊಸರು, ಪುದೀನ ಎಲೆಗಳು, ಹಸಿರು ಮೆಣಸಿನಕಾಯಿಗಳು ಮತ್ತು ಸ್ವಲ್ಪ ನೀರು ಸೇರಿಸಿ ನುಣ್ಣಗೆ ಪೇಸ್ಟ್ ಮಾಡಿ.ನಂತರ ಬ್ಲ್ಯಾಕ್ ಸಾಲ್ಟ್, ಹುರಿದ ಜೀರಿಗೆ ಪುಡಿ, ನಿಂಬೆ ರಸ ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ. ಬೇಕಾದರೆ, ನೀವಿದಕ್ಕೆ ಐಸ್ ಕ್ಯೂಬ್‌ಗಳನ್ನು ಸೇರಿಸಿ ತಣ್ಣಗಾಗಿಸಿ ಬಡಿಸಬಹುದು. ದೇಹವನ್ನು ಒಳಗಿನಿಂದ ತಂಪಾಗಿಸುತ್ತದೆ, ನಿರ್ಜಲೀಕರಣದ ಅಪಾಯವನ್ನು ಕಡಿಮೆ ಮಾಡುತ್ತದೆ, ಹೊಟ್ಟೆಯನ್ನು ಹಗುರವಾಗಿರಿಸುತ್ತದೆ, ಚರ್ಮವನ್ನು ತೇವಗೊಳಿಸುತ್ತದೆ, ಮುಖಕ್ಕೆ ನೈಸರ್ಗಿಕ ಹೊಳಪನ್ನು ನೀಡುತ್ತದೆ, ತೂಕ ನಿಯಂತ್ರಣದಲ್ಲಿಟ್ಟುಕೊಳ್ಳಲು ಸಹಾಯ ಮಾಡುತ್ತದೆ.

# ಪ್ರಾಣಾಯಾಮ ಮಾಡುವುದು ಹೇಗೆ? ಆರೋಗ್ಯಕ್ಕೇನು ಲಾಭ?

ಪ್ರಾಣಾಯಾಮವು ಉಸಿರಾಟವನ್ನು ನಿಯಂತ್ರಿಸುವ ಮೂಲಕ ದೇಹ ಹಾಗೂ ಮನಸ್ಸನ್ನು ಸದೃಢವಾಗಿಡುತ್ತದೆ. ಇದು 'ಪ್ರಾಣ' (ಜೀವಶಕ್ತಿ) ಹಾಗೂ 'ಆಯಾಮ' (ನಿಯಂತ್ರಣ) ಎಂಬೆರಡು ಸಂಸ್ಕೃತ ಪದಗಳಿಂದ ಕೂಡಿದೆ. ಪ್ರಾಣಾಯಾಮವು ಮಾನಸಿಕ ಒತ್ತಡ ಕಡಿಮೆ ಮಾಡಿ, ಏಕಾಗ್ರತೆ ಹಾಗೂ ಒಟ್ಟಾರೆ ದೇಹದ ಆರೋಗ್ಯದೊಂದಿಗೆ ಮಾನಸಿಕ ಆರೋಗ್ಯವನ್ನೂ ವೃದ್ಧಿಸಲು ಪರಿಣಾಮಕಾರಿಯಾಗಿದೆ.

ಯಾವುದೇ ಪ್ರಾಣಾಯಾಮದ ವಿಧಾನವನ್ನು ಆಯ್ಕೆ ಮಾಡಿಕೊಂಡರೂ ಅಂತಿಮ ಫಲಿತಾಂಶ ಮಾತ್ರ ಒಂದೇ. ಜನರು ತಮಗೆ ಸೂಕ್ತವಾದ ಪ್ರಾಣಾಯಾಮವನ್ನು ಆಯ್ಕೆ ಮಾಡಿಕೊಳ್ಳಬಹುದು. ಪ್ರಾಣಾಯಾಮವನ್ನು ಸಮರ್ಪಣಾಭಾವದಿಂದ ಅಭ್ಯಾಸ ಮಾಡಬೇಕು. ಈ ನಿಟ್ಟಿನಲ್ಲಿ ಇದೀಗ ಪ್ರಮುಖ ನಾಲ್ಕು ಪ್ರಾಥಮಿಕ ಪ್ರಾಣಾಯಾಮ ವಿಧಾನಗಳನ್ನು ಹೇಗೆ ನಿರ್ವಹಿಸುವುದು ಎಂಬುದನ್ನು ತಿಳಿಯೋಣ. ಭಸ್ತ್ರಿಕ ಪ್ರಾಣಾಯಾಮ: ನೀವು ಪದ್ಮಾಸನದಲ್ಲಿ ಕುಳಿತು ಆಳವಾಗಿ ಹಾಗೂ ದೀರ್ಘವಾದ ಬಲವಾಗಿ ಉಸಿರಾಡಬೇಕಾಗುತ್ತದೆ. ಈ ರೀತಿ ಮಾಡುವಾಗ, ಮೂಗಿನ ಹೊಳ್ಳೆಗಳ ಮೂಲಕ ಪ್ರವೇಶಿಸುವ ಗಾಳಿ ಹಾಗೂ ನಿಮ್ಮ ಶ್ವಾಸಕೋಶಗಳನ್ನು ತುಂಬುವ ಗಾಳಿಯನ್ನು ಅನುಭವಿಸಿ. ನಿಮ್ಮ ಡಯಾಫ್ರಾಮ್ ಕೆಳಕ್ಕೆ ಚಲಿಸುವುದನ್ನು, ನಿಮ್ಮ ಹೊಟ್ಟೆಯು ಗಾಳಿಯಿಂದ ತುಂಬಿದಂತೆ ಏರುತ್ತಿರುವುದನ್ನು ಅನುಭವಿಸಬೇಕು. ಉಸಿರಾಡಲು ತೆಗೆದುಕೊಂಡ ಅರ್ಧದಷ್ಟು ಸಮಯದಲ್ಲಿ ಗಾಳಿಯನ್ನು ಹೊರಹಾಕಬೇಕಾಗುತ್ತದೆ. ಇದನ್ನು ಮಾಡುವಾಗ ನಿಮ್ಮ ಡಯಾಫ್ರಾಮ್ ಮೇಲಕ್ಕೆ ಚಲಿಸುವುದನ್ನು ಹೊಟ್ಟೆ ಒಳಮುಖವಾಗಿ ಎಳೆಯುವುದನ್ನು ಹಾಗೂ ನಿಮ್ಮ ಶ್ವಾಸಕೋಶಗಳು ಸಂಕುಚಿತಗೊಳ್ಳುವುದನ್ನು ಗಮನಿಸಬೇಕಾಗುತ್ತದೆ. ಭಸ್ತ್ರಿಕ ಪ್ರಾಣಾಯಾಮವನ್ನು 5 ಬಾರಿ ಮಾಡಬಹುದು.

**ಕಪಾಲಭಾತಿ:** ಪದ್ಮಾಸನದಲ್ಲಿ ಕುಳಿತುಕೊಂಡು ನಿಧಾನವಾಗಿ ಉಸಿರನ್ನು ಒಳಗೆಳೆದುಕೊಳ್ಳಬೇಕು. ಉಸಿರನ್ನು ಹೊರಹಾಕುವ ಹಂತದಲ್ಲಿ ಕಿಬ್ಬೊಟ್ಟೆಯ ಸ್ನಾಯುಗಳನ್ನು ವೇಗವಾಗಿ ತೊಡಗಿಸಿಕೊಳ್ಳಿ ಹಾಗೂ ಗಾಳಿಯನ್ನು ಬಲವಾಗಿ, ಶ್ರವ್ಯವಾಗಿ ಹೊರಹಾಕಬೇಕಾಗುತ್ತದೆ.

ಉಸಿರು ಹೊರಹಾಕುವುದು ವೇಗವಾಗಿರಬೇಕು. ಒತ್ತಡ ಇಲ್ಲವೇ ಬಲವಂತವಾಗಿ ಮಾಡಬಾರದು. ಕಪಾಲಭಾತಿ ಹತ್ತು ಬಾರಿ ಮಾಡಬಹುದು. ನೀವು ಈ ವಿಧಾನಕ್ಕೆ ಒಗ್ಗಿಕೊಂಡ ಬಳಿಕ 20 ಬಾರಿ ಕಪಾಲಭಾತಿ ಪ್ರಾಣಾಯಾಮ ಅಭ್ಯಾಸ ಮಾಡಬಹುದು ಎಂದು ಯೋಗ ತಜ್ಞರು ತಿಳಿಸುತ್ತಾರೆ.

**ಅನುಲೋಮ ವಿಲೋಮ:** ಇದು ಒಂದು ಸಮಯದಲ್ಲಿ ಒಂದು ಮೂಗಿನ ಹೊಳ್ಳೆಯನ್ನು ಮಾತ್ರ ಬಳಸುವ ಪ್ರಾಣಾಯಾಮದ ಒಂದು ರೂಪ. ಪದ್ಮಾಸನದಲ್ಲಿ ಕುಳಿತು ನಿಮ್ಮ ಕಣ್ಣುಗಳನ್ನು ಮುಚ್ಚಿಕೊಳ್ಳಬೇಕು.

ನಂತರ ಎಡ ಮೂಗಿನ ಹೊಳ್ಳೆಯನ್ನು ಎಡ ಹೆಬ್ಬೆರಳಿನಿಂದ ಮುಚ್ಚಿ, ಬಲ ಮೂಗಿನ ಹೊಳ್ಳೆಯ ಮೂಲಕ ನಿಧಾನವಾಗಿ ಉಸಿರಾಡಬೇಕಾಗುತ್ತದೆ. ಈ ರೀತಿಯಲ್ಲಿ ಉಸಿರನ್ನು ಒಳಗೆಳೆದುಕೊಳ್ಳುವಾಗ, ನಿಮ್ಮ ಶ್ವಾಸಕೋಶಗಳು, ಹೊಟ್ಟೆ ಹಾಗೂ ಡಯಾಫ್ರಾಮ್ ಗಾಳಿಯಿಂದ ತುಂಬಿರುವುದನ್ನು ಅನುಭವಿಸಬೇಕಾಗುತ್ತದೆ.

ಬಳಿಕ, ನಿಮ್ಮ ಉಸಿರನ್ನು ಹಿಡಿದುಕೊಳ್ಳಿ. ನಿಮ್ಮ ಹೆಬ್ಬೆರಳನ್ನು ತೆಗೆದುಹಾಕಬೇಕಾಗುತ್ತದೆ. ನಿಮ್ಮ ಮಧ್ಯ ಹಾಗೂ ಉಂಗುರ ಬೆರಳುಗಳನ್ನು ಬಳಸಿ ಬಲ ಮೂಗಿನ ಹೊಳ್ಳೆಯನ್ನು ಮುಚ್ಚಿಕೊಳ್ಳಿ. ಈಗ ಎಡ ಮೂಗಿನ ಹೊಳ್ಳೆಯ ಮೂಲಕ ನಿಧಾನವಾಗಿ ಉಸಿರು ಬಿಡಿ. ಈ ಪರ್ಯಾಯ ರೀತಿಯಲ್ಲಿ ಮೂಗಿನ ಹೊಳ್ಳೆಗಳ ನಡುವೆ ಬದಲಾಯಿಸುತ್ತಾ 5 ಬಾರಿ ಅನುಲೋಮ ವಿಲೋಮ ಪ್ರಾಣಾಯಾಮ ಅಭ್ಯಾಸ ಮಾಡಬಹುದು.

**ಬಾಹ್ಯ ಪ್ರಾಣಾಯಾಮ:** ಎರಡೂ ಮೂಗಿನ ಹೊಳ್ಳೆಗಳ ಮೂಲಕ ಏಕಕಾಲದಲ್ಲಿ ಉಸಿರಾಡಿ, ನಿಮ್ಮ ಶ್ವಾಸಕೋಶಗಳು, ಡಯಾಫ್ರಾಮ್ ಹಾಗೂ ಹೊಟ್ಟೆ ಗಾಳಿಯಿಂದ ತುಂಬಿರುವುದನ್ನು ಅನುಭವಿಸಿ. ನಂತರ ಕಪಾಲಭಾತಿಯಂತೆಯೇ ಗಾಳಿಯನ್ನು ವೇಗವಾಗಿ ಹೊರಹಾಕಿ. ಇದನ್ನು ಮಾಡುವಾಗ ತಲೆಯನ್ನು ಕೆಳಕ್ಕಿಳಿಸಿ, ನಿಮ್ಮ ಗಲ್ಲವನ್ನು ನಿಮ್ಮ ಎದೆಗೆ ಒತ್ತಿರಿ. ನಿಮ್ಮ ಹೊಟ್ಟೆಯನ್ನು ನಿಮ್ಮ ಬೆನ್ನುಮೂಳೆಯ ಹತ್ತಿರಕ್ಕೆ ಸಾಧ್ಯವಾದಷ್ಟು ಒಳಮುಖವಾಗಿ ಎಳೆಯಿರಿ. ಈ ಭಂಗಿಯಲ್ಲಿ ಸ್ವಲ್ಪ ಸಮಯದವರೆಗೆ ನಿಮ್ಮ ಉಸಿರನ್ನು ಹಿಡಿದುಕೊಳ್ಳಿ. ಬಳಿಕ, ನಿಮ್ಮ ತಲೆಯನ್ನು ಹಿಂದಕ್ಕೆ ಎತ್ತುವಾಗ ಉಸಿರಾಡಿ. ಈ ರೀತಿಯಲ್ಲಿ 5 ರಿಂದ 8 ಬಾರಿ ಬಾಹ್ಯ ಪ್ರಾಣಾಯಾಮ ಅಭ್ಯಾಸ ಮಾಡಬಹುದು ಎಂದು ಯೋಗ್ ತಜ್ಞರು ತಿಳಿಸುತ್ತಾರೆ.

**ಓದುಗರಿಗೆ ಪ್ರಮುಖ ಸೂಚನೆ:** ಈ ವರದಿಯಲ್ಲಿ ನಿಮಗೆ ನೀಡಲಾದ ಎಲ್ಲಾ ಆರೋಗ್ಯ ಸಂಬಂಧಿತ ಮಾಹಿತಿ ಹಾಗೂ ಸಲಹೆಗಳು ಸಾಮಾನ್ಯ ಮಾಹಿತಿಗಾಗಿ ಮಾತ್ರ. ನಾವು ಈ ಮಾಹಿತಿಯನ್ನು ವೈಜ್ಞಾನಿಕ ಸಂಶೋಧನೆ, ಅಧ್ಯಯನಗಳು, ವೈದ್ಯಕೀಯ ಮತ್ತು ಆರೋಗ್ಯ ವೃತ್ತಿಪರ ಸಲಹೆಯ ಆಧಾರದ ಮೇಲೆ ಒದಗಿಸುತ್ತಿದ್ದೇವೆ. ನೀವು ಈ ಬಗ್ಗೆ ವಿವರವಾಗಿ ತಿಳಿದುಕೊಳ್ಳಬೇಕು. ಮತ್ತು ಈ ವಿಧಾನ ಅಥವಾ ಕಾರ್ಯವಿಧಾನವನ್ನು ಅಳವಡಿಸಿಕೊಳ್ಳಬೇಕಾದರೆ ಪರಿಣಿತ ವೈದ್ಯರನ್ನು ಸಂಪರ್ಕಿಸುವುದು ಉತ್ತಮ.



# ನೀವು ಬಟ್ಟೆಗಳನ್ನ ತೊಳೆಯುವಾಗ ಬಣ್ಣ ಮಾಸುತ್ತದೆಯೇ?; ಕಲರ್ ಹೋಗದಂತೆ ತಡೆಯುವುದು ಹೇಗೆ?

ನಾವು ಹೊಸ ಬಟ್ಟೆಗಳನ್ನು ಖರೀದಿಸಿದಾಗ ಅವುಗಳನ್ನು ಅತ್ಯಂತ ಕಾಳಜಿ ಮತ್ತು ಪ್ರೀತಿಯಿಂದ ನೋಡಿಕೊಳ್ಳುತ್ತೇವೆ. ಕೆಲವು ದಿನಗಳ ನಂತರ ಅವುಗಳ ಬಗ್ಗೆ ನಮ್ಮ ಆರಂಭಿಕ ಉತ್ಸಾಹವು ಮಸುಕಾಗುತ್ತದೆ. ಇದರ ಪರಿಣಾಮವಾಗಿ ಇವು ಹಳೆಯದಾಗಿ ಕಾಣಲು ಪ್ರಾರಂಭಿಸುತ್ತವೆ. ಇದಕ್ಕೆ ನಮ್ಮ ಬಟ್ಟೆಗಳನ್ನು ತೊಳೆಯುವಾಗ ಮಾಡುವ ಸಣ್ಣ ತಪ್ಪುಗಳೇ ಮೂಲ ಕಾರಣವಾಗಿವೆ. ಈ ರೀತಿ ಯಾಗುವುದನ್ನು ತಡೆಯಲು ಮತ್ತು ನಿಮ್ಮ ಬಟ್ಟೆಗಳು ಹೆಚ್ಚು ಕಾಲ ಬಾಳಿಕೆ ಬರುವಂತೆ ಉಳಿಯಲು ಮತ್ತು ದೀರ್ಘಕಾಲದವರೆಗೆ ಹೊಸದಾಗಿ ಕಾಣುವಂತೆ ಖಚಿತಪಡಿಸಿಕೊಳ್ಳಲು ಇವುಗಳನ್ನು ತೊಳೆಯುವಾಗ ಕೆಲವು ಮುನ್ನೆಚ್ಚರಿಕೆಗಳನ್ನು ತೆಗೆದುಕೊಳ್ಳಬೇಕಾಗುತ್ತದೆ ಎಂದು ತಜ್ಞರು ತಿಳಿಸುತ್ತಾರೆ. ಬಟ್ಟೆಗಳ ತೊಳೆಯುವಾಗ ಬಣ್ಣ ಮಾಸುತ್ತದೆ ತಡೆಯಲು ಮುನ್ನೆಚ್ಚರಿಕೆಗಳೇನು ಎಂಬುದನ್ನು ನೋಡೋಣ. ಇತ್ತೀಚಿನ ದಿನಗಳಲ್ಲಿ ಹೆಚ್ಚಿನ ಜನರು ತಮ್ಮ ಬಟ್ಟೆಗಳನ್ನು ತೊಳೆಯಲು ವಾಷಿಂಗ್ ಮಷಿನ್ ಬಳಸುತ್ತಾರೆ. ನೀವು ಅವರಲ್ಲಿ ಒಬ್ಬರಾಗಿದ್ದರೆ, ಅವುಗಳನ್ನು ವಾಷಿಂಗ್ ಮಷಿನ್‌ಗೆ ಹಾಕುವಾಗ ಮೊದಲು ನಿಮ್ಮ ಬಟ್ಟೆಗಳ ಪಾಕೆಟ್‌ಗಳನ್ನು ಯಾವುದೇ ವಸ್ತುಗಳಿಗಾಗಿ ನೀವು ಯಾವಾಗಲೂ ಪರಿಶೀಲಿಸಬೇಕು. ತಜ್ಞರು ಸಲಹೆ ನೀಡುವುದು ಏನೆಂದರೆ, ವಸ್ತುಗಳು ವಿಶೇಷವಾಗಿ ಮೌಲ್ಯಯುತವಾಗಿಲ್ಲದಿದ್ದರೂ ತೊಳೆಯುವ ಮೊದಲು ಇವುಗಳನ್ನು ತೆಗೆದುಹಾಕುವುದು ಉತ್ತಮ. ವಿಶೇಷವಾಗಿ ಸಡಿಲವಾದ ಚಿಲ್ಲರೆ ಅಥವಾ ನಾಣ್ಯಗಳಂತಹ ವಸ್ತುಗಳನ್ನು ಜೇಬಿನಲ್ಲಿ ಬಿಟ್ಟು ಯಂತ್ರಕ್ಕೆ ಹಾಕಿದರೆ ಇವು ಗಾಜಿನ ಬಾಗಿಲಿಗೆ ಗೀರುಗಳನ್ನು ಉಂಟುಮಾಡಬಹುದು.

ನಿಪುಣರು ಗಮನಿಸುವುದೇನೆಂದರೆ ನಾಣ್ಯಗಳಲ್ಲ, ಜಿಪ್ಪರ್‌ಗಳು ಸಹ ತೊಳೆಯುವ ಯಂತ್ರಕ್ಕೆ ಹಾನಿ ಉಂಟುಮಾಡಬಹುದು.

ಬಟ್ಟೆಗಳ ಮೇಲಿನ ಜಿಪ್ಪರ್‌ಗಳನ್ನು ಬಿಚ್ಚಿಟ್ಟಾಗ ಇದು ಸಂಭವಿಸುತ್ತದೆ. ಇವು ತೊಳೆಯುವ ಚಕ್ರದ ಸಮಯದಲ್ಲಿ ಯಂತ್ರದ ಅಂಚುಗಳಿಗೆ ಸಿಲುಕಬಹುದು, ಗಾಜಿನ ಬಾಗಿಲಿಗೆ ಪದೇ ಪದೇ ಬಡಿಯಬಹುದು. ನಾವೆಲ್ಲರೂ ನಮ್ಮ ಬಟ್ಟೆಗಳನ್ನು ತೊಳೆಯಲು ಸೋಪ್‌ಗಳು ಮತ್ತು ಡಿಟರ್ಜೆಂಟ್‌ಗಳನ್ನು ಬಳಸುತ್ತೇವೆ. ಇದು ಯಂತ್ರದಿಂದ ಅಥವಾ ಕೈಯಿಂದ ಆಗಿರಲಿ. ತಜ್ಞರು ಈ ವಿಷಯದಲ್ಲಿಯೂ ಎಚ್ಚರಿಕೆ ವಹಿಸಬೇಕು ಎಂದು ಸಲಹೆ ನೀಡುತ್ತಾರೆ. ನಿರ್ದಿಷ್ಟವಾಗಿ ನೀವು ಕಡಿಮೆ ಸಾಂದ್ರತೆಯ ಉತ್ಪನ್ನಗಳನ್ನು ಬಳಸುವುದನ್ನು ಖಚಿತಪಡಿಸಿಕೊಳ್ಳಬೇಕಾಗುತ್ತದೆ. ಹೆಚ್ಚು ಸಾಂದ್ರತೆಯಿರುವ ಸೋಪ್‌ಗಳು ಮತ್ತು ಡಿಟರ್ಜೆಂಟ್‌ಗಳನ್ನು ಬಳಸುವುದು, ಕೊಳೆಯನ್ನು ತ್ವರಿತವಾಗಿ ತೆಗೆದುಹಾಕುವ ಪ್ರಯತ್ನದಲ್ಲಿ ಇವುಗಳನ್ನು ಅತಿಯಾದ ಪ್ರಮಾಣದಲ್ಲಿ ಬಳಸುವುದು, ಇದರಿಂದ ನಿಮ್ಮ ಉಡುಪುಗಳ ಬಣ್ಣವು ಬೇಗ ಮಾಸಿಹೋಗುತ್ತದೆ ಎಂದು ತಜ್ಞರು ಸೂಚಿಸುತ್ತಾರೆ.

# ವಕೀಲರ ಸೇವೆ ಪ್ರಾಮಾಣಿಕ ಹಾಗೂ ಉತ್ಕೃಷ್ಟ: ಉಪ ಲೋಕಾಯುಕ್ತ ನ್ಯಾ. ಕೆ.ಎನ್. ಫಣೀಂದ್ರ

## ಉಪ ಲೋಕಾಯುಕ್ತರು ವಿಶೇಷಚೇತನರಿಗೆ ವಿವಿಧ ಸಾಧನ-ಸಲಕರಣೆಗಳನ್ನು ವಿತರಿಸಿ, ಬಳಿಕ ವಕೀಲರು ಹಾಗೂ ಸಾರ್ವಜನಿಕರೊಂದಿಗೆ ಸಂವಾದ!

• **ಉದಯವಾಹಿನಿ,ಯಾದಗಿರಿ**

ವಕೀಲ ವೃತ್ತಿ ಸಮಾಜ ಸೇವೆಯೊಂದಿಗೆ ನಿಕಟ ಸಂಬಂಧ ಹೊಂದಿದ್ದು, ದೇಶ ನಿರ್ಮಾಣದಲ್ಲಿ ವಕೀಲರ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಅಂಬೇಡ್ಕರ್, ಮಹಾತ್ಮ ಗಾಂಧೀಜಿ, ನೆಹರು ಹಾಗೂ ಸರ್ದಾರ್ ವಲ್ಲಭಭಾಯಿ ಪಟೇಲ್ ಸೇರಿದಂತೆ ಅನೇಕ ಮಹನೀಯರು ವಕೀಲರಾಗಿ ದೇಶ ಕಟ್ಟುವ ಕಾರ್ಯದಲ್ಲಿ ತೊಡಗಿಕೊಂಡಿದ್ದರು. ಆದ್ದರಿಂದ ವಕೀಲರ ಸೇವೆ ಪ್ರಾಮಾಣಿಕ ಹಾಗೂ ಉತ್ಕೃಷ್ಟ ಸೇವೆಯಾಗಿದೆ ಎಂದು ಉಪ ಲೋಕಾಯುಕ್ತ ನ್ಯಾಯಮೂರ್ತಿ ಕೆ.ಎನ್. ಫಣೀಂದ್ರ ಹೇಳಿದರು.

ನಗರದ ಜಿಲ್ಲಾ ನ್ಯಾಯಾಲಯದ ಸಭಾಂಗಣದಲ್ಲಿ ಕರ್ನಾಟಕ ಲೋಕಾಯುಕ್ತ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಹಿರಿಯ ನಾಗರಿಕರು ಮತ್ತು ವಿಶೇಷಚೇತನರ ಕಲ್ಯಾಣ ಇಲಾಖೆ, ಜಿಲ್ಲಾ ನ್ಯಾಯವಾದಿಗಳ ಸಂಘ ಯಾದಗಿರಿ ಹಾಗೂ ಶಹಾಪುರ ಮತ್ತು ಶೋರಾಪುರ ತಾಲ್ಲೂಕು ನ್ಯಾಯವಾದಿಗಳ ಸಂಘಗಳ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಿದ್ದ ನ್ಯಾಯಾಂಗ ಅಧಿಕಾರಿಗಳು ಮತ್ತು ವಕೀಲರೊಂದಿಗೆ ಸಂವಾದ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.


ಉದಯವಾಹಿನಿ ಚಿತ್ರ

> ಉಪ ಲೋಕಾಯುಕ್ತ ಕೆ.ಎನ್. ಫಣೀಂದ್ರ ಅವರು ಜಿಲ್ಲೆಯಾದ್ಯಂತ ಮಿಂಚಿನ ಸಂಚಾರ ನಡೆಸುವ ಮೂಲಕ ಲೋಕಾಯುಕ್ತದ ಮಹತ್ವವನ್ನು ಅಧಿಕಾರಿಗಳು ಹಾಗೂ ಸಾರ್ವಜನಿಕರಿಗೆ ಮನವರಿಕೆ ಮಾಡಿಕೊಡುತ್ತಿದ್ದಾರೆ. ಯಾದಗಿರಿಯ ಹೊಸ ನ್ಯಾಯಾಲಯ ಕಟ್ಟಡದ ಜಾಗ ಮಂಜೂರಿಗೆ ಅವರ ಕೊಡುಗೆ ಗಮನಾರ್ಹವಾಗಿದೆ ಎಂದು ಹೇಳಿದರು. -ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಮರುಳಸಿದ್ದಾರಾಧ್ಯ

ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಬಗ್ಗೆ ವಕೀಲರಿಗೆ ಅರಿವು ಮೂಡಿಸುವ ಉದ್ದೇಶದಿಂದ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಇಂತಹ ಸಂವಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.

ವಕೀಲರು ಕಾಯ್ದೆಯ ಕುರಿತು ಸಮಗ್ರ ಮಾಹಿತಿ ಪಡೆದು ಜನಸಾಮಾನ್ಯರಿಗೂ ತಿಳಿಸಬೇಕು ಎಂದು ಅವರು ಕರೆ ನೀಡಿದರು.

ಇನ್ನೂ ಒಂದು ವರ್ಷ ಲೋಕಾಯುಕ್ತ ಸಂಸ್ಥೆಯಲ್ಲಿ ಸೇವೆ ಸಲ್ಲಿಸುವ ಅವಕಾಶ ಇರುವುದರಿಂದ ಜನರ ಅನುಕೂಲಕ್ಕಾಗಿ ಕಾರ್ಯನಿರ್ವಹಿಸುವುದಾಗಿ ತಿಳಿಸಿದ ಅವರು, ಸಮಾಜದಲ್ಲಿ ಭ್ರಷ್ಟಾಚಾರ ಇನ್ನೂ ದೊಡ್ಡ ಸವಾಲಾಗಿ ಉಳಿದಿದ್ದು, ಪ್ರತಿಯೊಬ್ಬರೂ ತಮ್ಮ ಕರ್ತವ್ಯವನ್ನು ಪ್ರಾಮಾಣಿಕವಾಗಿ ನಿರ್ವಹಿಸಬೇಕು ಎಂದು ಸಲಹೆ ನೀಡಿದರು.

**ವಿಶೇಷಚೇತನರಿಗೆ ವಿವಿಧ ಸಾಧನ-ಸಲಕರಣೆ**

ಕಾರ್ಯಕ್ರಮದಲ್ಲಿ ಉಪ ಲೋಕಾಯುಕ್ತರು ವಿಶೇಷಚೇತನರಿಗೆ ವಿವಿಧ ಸಾಧನ-ಸಲಕರಣೆಗಳನ್ನು ವಿತರಿಸಿ, ಬಳಿಕ ವಕೀಲರು ಹಾಗೂ ಸಾರ್ವಜನಿಕರೊಂದಿಗೆ ಸಂವಾದ ನಡೆಸಿದರು.

> ಉಪ ಲೋಕಾಯುಕ್ತ ಫಣೀಂದ್ರ ಅವರು ಭ್ರಷ್ಟಾಚಾರ ವಿರುದ್ಧ ನಿರಂತರ ಹೋರಾಟ ನಡೆಸುತ್ತಿದ್ದು, ಭ್ರಷ್ಟರಿಗೆ ಸಿಂಹಸ್ವಪ್ನರಾಗಿದ್ದಾರೆ. ಜಿಲ್ಲೆಯಲ್ಲಿ ಲೋಕಾಯುಕ್ತ ಸಂಸ್ಥೆ ಇನ್ನಷ್ಟು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಬೇಕಿದೆ ಎಂದು ಅಭಿಪ್ರಾಯಪಟ್ಟರು. -ಸಂಘದ ಅಧ್ಯಕ್ಷ ಆರ್.ಎಸ್. ಪಾಟೀಲ್

> ಭಾರತದ ಸಂವಿಧಾನವು ಎಲ್ಲರಿಗೂ ಸಮಾನ ಹಕ್ಕುಗಳನ್ನು ನೀಡಿದ್ದು, ಮಕ್ಕಳ ಶಿಕ್ಷಣ ಮತ್ತು ಆರೋಗ್ಯಕ್ಕೆ ಹೆಚ್ಚಿನ ಆದ್ಯತೆ ನೀಡಲಾಗಿದೆ. 6ರಿಂದ 14 ವರ್ಷದ ಮಕ್ಕಳನ್ನು ದುಡಿಮೆಗೆ ಕಳುಹಿಸುವುದು ಕಾನೂನುಬಾಹಿರವಾಗಿದ್ದು, ಅವರ ಶಿಕ್ಷಣಕ್ಕೆ ಒತ್ತು ನೀಡಬೇಕಾಗಿದೆ. ಪ್ರತಿಯೊಬ್ಬರೂ ತಮ್ಮ ಇಚ್ಛೆಯ ವೃತ್ತಿಯನ್ನು ಆಯ್ಕೆ ಮಾಡಿಕೊಳ್ಳುವ ಹಕ್ಕನ್ನು ಸಂವಿಧಾನ ನೀಡಿದೆ ಎಂದು ತಿಳಿಸಿದರು. -ಉಪ ಲೋಕಾಯುಕ್ತ ನ್ಯಾ. ಕೆ.ಎನ್. ಫಣೀಂದ್ರ

ಕಾರ್ಯಕ್ರಮದಲ್ಲಿ ಹಿರಿಯ ಸಿವಿಲ್ ನ್ಯಾಯಾಧೀಶ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮರಿಯಪ್ಪ, ಜಿಲ್ಲಾ ಹಿರಿಯ ನಾಗರಿಕರು ಮತ್ತು ವಿಶೇಷಚೇತನರ ಕಲ್ಯಾಣಾಧಿಕಾರಿ ಶರಣಪ್ಪ ಪಾಟೀಲ್, ಶಹಾಪುರ ತಾಲ್ಲೂಕು ವಕೀಲರ ಸಂಘದ ಕಾರ್ಯದರ್ಶಿ ಸಂತೋಷ, ಶೋರಾಪುರ ತಾಲ್ಲೂಕು ವಕೀಲರ ಸಂಘದ ಅಧ್ಯಕ್ಷ ಹನೂರ್ ಬಸವರಾಜ ಸೇರಿದಂತೆ ವಕೀಲರು, ನ್ಯಾಯಾಲಯದ ಸಿಬ್ಬಂದಿ ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

# ರುದ್ರಪ್ಪ ಲಮಾಣಿಗೆ ಸಚಿವ ಮತ್ತು ಉಮೇಶ ಜಾಧವಗೆ ರಾಜ್ಯಸಭೆ ಸದಸ್ಯ ನೇಮಕಕ್ಕೆ ಒತ್ತಾಯ

• **ಉದಯವಾಹಿನಿ,,ಚಿಂಚೋಳಿ**

ಕೇಂದ್ರ ಬಿಜೆಪಿ ಸರ್ಕಾರವು ಕಲಬುರ್ಗಿ ಮಾಜಿ ಸಂಸದ ಡಾ.ಉಮೇಶ ಜಾಧವಗೆ ರಾಜ್ಯಸಭೆ ಸದಸ್ಯರಾಗಿ ಮತ್ತು ರಾಜ್ಯ ಸರ್ಕಾರದಲ್ಲಿ ರುದ್ರಪ್ಪ ಲಮಾಣಿ ಅವರಿಗೆ ಸಚಿವ ಸ್ಥಾನ ನೀಡಿ ಬಂಜಾರ ಸಮಾಜಕ್ಕೆ ಸಾಮಾಜಿಕ ನ್ಯಾಯ ನೀಡಬೇಕು ಎಂದು ಬಂಜಾರ ಸಮಾಜದ ತಾಲ್ಲೂಕಾ ಅಧ್ಯಕ್ಷ ಪ್ರೇಮಸಿಂಗ್ ಜಾಧವ ಮತ್ತು ಗೌರವಾಧ್ಯಕ್ಷ ಅಶೋಕ ಚವ್ವಾಣ ಒತ್ತಾಯಿಸಿದ್ದಾರೆ.

ಪಟ್ಟಣದಲ್ಲಿ ಬಿಜೆಪಿ ಮುಖಂಡರು ಮತ್ತು ಬಂಜಾರ ಸಮಾಜದ ವತಿಂದ ಕರೆದ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಲಬುರ್ಗಿಯಲ್ಲಿ ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷರಿಗೆ ಸೋಲುಣಿಸಿದ ಮತ್ತು ಬಂಜಾರ ಸಮಾಜದ ರಾಷ್ಟ್ರೀಯ ನಾಯಕರು,ಸೇವಲಾಲ್ ಜಯಂತಿಯು ದೆಹಲಿಯಲ್ಲಿ ಮಾಡಿ ಇಡಿ ರಾಷ್ಟ್ರಕ್ಕೆ ಬಂಜಾರ ಸಮಾಜ ಗುರುತಿಸುವಂತೆ ಮಾಡಿದ ನಾಯಕ ಡಾ.ಉಮೇಶ ಜಾಧವ ಅವರಿಗೆ ಕೇಂದ್ರ ಬಿಜೆಪಿ ಸರ್ಕಾರವು ರಾಜ್ಯಸಭಾ ಸದಸ್ಯನ್ನಾಗಿ ನೇಮಕ ಮಾಡಬೇಕು,ಮತ್ತು ರಾಜ್ಯ ಕಾಂಗ್ರೆಸ್ ಸರ್ಕಾರವು ಬಂಜಾರ ಸಮಾಜದ ಏಕೈಕ ನಾಯಕ ರುದ್ರಪ್ಪ ಲಮಾಣಿ ಅವರಿಗೆ ಗುರುತಿಸಿ ಬಂಜಾರ ಸಮಾಜಕ್ಕೆ ನ್ಯಾಯ ಕಲ್ಪಿಸಲು ಸಚಿವ ಸ್ಥಾನ ನೀಡಬೇಕು ಎಂದು ಒತ್ತಾಯಿಸಿದರು.


ಉದಯವಾಹಿನಿ ಚಿತ್ರ

**ಬಂಜಾರ ಸಮಾಜದ ಏಕೈಕ ನಾಯಕ**

ಗೋಪಾಲ ಜಾಧವ ಮತ್ತು ರಮೇಶ ರಾಠೋಡ್ ಮಾತನಾಡಿ ಒಳುಸಲಾತಿಯಲ್ಲಿ ನಮ್ಮ ಸಮಾಜಕ್ಕೆ ಅನ್ಯಾಯವಾಗಿದೆ, ಬಂಜಾರ ಸಮಾಜದ ಶಾಸಕ ರುದ್ರಪ್ಪ ಲಮಾಣಿ ಕಾಂಗ್ರೆಸ್ ಪಕ್ಷದಲ್ಲಿ ಒಬ್ಬರಿದ್ದು ಅವರನ್ನು ಸಚಿವ ಸಂಪುಟಕ್ಕೆ ಸೇರಿಸಿಕೋಂಡು ಪ್ರಬಲ ಖಾತೆ ನೀಡಬೇಕು,ಮತ್ತು ಮಾಜಿ ಸಂಸದ ಡಾ.ಉಮೇಶ ಜಾಧವ ಅವರು ಬಿಜೆಪಿ ಸೇರ್ಪಡೆಯಾದ ನಂತರ ಬಂಜಾರ ಸಮಾಜದ ಪ್ರತಿಶತಃ 80ರಷ್ಟು ಮತಗಳು ಬಿಜೆಪಿಗೆ ಒಲಿಯುವಂತೆ ಮಾಡಿದ ಕೀರ್ತಿ ಮತ್ತು ಅವರ ಶ್ರಮಕ್ಕೆ ತಕ್ಕಂತೆ ಕೇಂದ್ರ ಬಿಜೆಪಿ ಸರ್ಕಾರವು ಡಾ.ಉಮೇಶ ಜಾಧವ ಅವರಿಗೆ ಪರಿಗಣಿಸಿ ರಾಜ್ಯಸಭೆಗೆ ನೇಮಕ ಮಾಡಬೇಕು ಎಂದರು.

ಪತ್ರಿಕಾಗೋಷ್ಠಿಯಲ್ಲಿ ಜಗದೀಶಸಿಂಗ್ ಠಾಕೂರ್,ಸತೀಶರೆಡ್ಡಿ ತಾದಲಾಪೂರ,ರಮೇಶ ರಾಠೋಡ,ಶಂಕರ ರಾಠೋಡ,ಗೋಂದ ರಾಠೋಡ ಫೇಮಸಿಂಗ್ ರಾಠೋಡ್ ಅನೇಕರಿದರು.

# ಕಾಂಗ್ರೆಸ್‌ಗೆ ಜನರೇ ಉತ್ತರ ನೀಡಲಿದ್ದಾರೆ : ಹಣಮೇಗೌಡ ಬೀರನಕಲ್

• **ಉದಯವಾಹಿನಿ,ಯಾದಗಿರಿ**

ಮುಖ್ಯಮಂತ್ರಿ ಸ್ಥಾನದಿಂದ ಸಿದ್ದರಾಮಯ್ಯ ಅವರನ್ನು ಕೆಳಗಿಳಿಸಲು ಕಾಂಗ್ರೆಸ್ ಹೈಕಮಾಂಡ್ ಕೈಗೊಂಡಿರುವ ನಿರ್ಧಾರ ಅಹಿಂದ ವರ್ಗದ ಆಶೋತ್ತರಗಳಿಗೆ ಮಾಡಿದ ಐತಿಹಾಸಿಕ ಅನ್ಯಾಯವಾಗಿದ್ದು, ಈ ಬೆಳವಣಿಗೆಯ ಪರಿಣಾಮವನ್ನು ಮುಂದಿನ ದಿನಗಳಲ್ಲಿ ಕಾಂಗ್ರೆಸ್ ಪಕ್ಷ ಎದುರಿಸಬೇಕಾಗುತ್ತದೆ ಎಂದು ಅಹಿಂದ ಮುಖಂಡ ಹಣಮೇಗೌಡ ಬೀರನಕಲ್ ಎಚ್ಚರಿಕೆ ನೀಡಿದರು.

ನಗರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದ ರಾಜಕೀಯ ಇತಿಹಾಸದಲ್ಲಿ ಹಿಂದುಳಿದ ವರ್ಗಗಳು, ಅಲ್ಪಸಂಖ್ಯಾತರು ಮತ್ತು ದಲಿತ ಸಮುದಾಯಗಳ ಪರವಾಗಿ ನಿರಂತರವಾಗಿ ಧ್ವನಿ ಎತ್ತಿದ ನಾಯಕರಲ್ಲಿ ಸಿದ್ದರಾಮಯ್ಯ ಅವರು ಪ್ರಮುಖರಾಗಿದ್ದಾರೆ. ಇಂತಹ ನಾಯಕರನ್ನು ಅಧಿಕಾರಾವಧಿ ಪೂರ್ಣಗೊಳ್ಳುವ ಮುನ್ನವೇ ಮುಖ್ಯಮಂತ್ರಿ ಹುದ್ದೆಯಿಂದ ಕೆಳಗಿಳಿಸಿರುವುದು ಕೇವಲ ರಾಜಕೀಯ ನಿರ್ಧಾರವಲ್ಲ, ಸಾಮಾಜಿಕ ನ್ಯಾಯದ ಪರಿಕಲ್ಪನೆಗೆ ನೀಡಿರುವ ದೊಡ್ಡ ಹೊಡೆತವಾಗಿದೆ ಎಂದು ಆರೋಪಿಸಿದರು.


ಉದಯವಾಹಿನಿ ಚಿತ್ರ

ರಾಜ್ಯದ ಬಡವರು, ರೈತರು, ಮಹಿಳೆಯರು, ಕಾರ್ಮಿಕರು ಹಾಗೂ ಶೋಷಿತ ಸಮುದಾಯಗಳ ಬದುಕಿನಲ್ಲಿ ಪರಿವರ್ತನೆ ತರಲು ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಹಲವಾರು ಜನಪರ ಯೋಜನೆಗಳನ್ನು ಜಾರಿಗೊಳಿಸಿತ್ತು. ವಿಶೇಷವಾಗಿ ಗ್ಯಾರಂಟಿ ಯೋಜನೆಗಳು ಲಕ್ಷಾಂತರ ಕುಟುಂಬಗಳಿಗೆ ಆರ್ಥಿಕ ಭದ್ರತೆ ಒದಗಿಸಿದ್ದವು. ಇಂತಹ ಸಂದರ್ಭದಲ್ಲಿ ಅವರ ರಾಜೀನಾಮೆ ಪಡೆಯಲು ತೋರಿದ ಆತುರ ಅಹಿಂದ ವರ್ಗದ ಭಾವನೆಗಳಿಗೆ ಧಕ್ಕೆ ತಂದಿದೆ ಎಂದು ಹೇಳಿದರು.

> ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ದೊರೆತ ಭಾರೀ ಜನಾದೇಶದ ಹಿಂದೆ ಸಿದ್ದರಾಮಯ್ಯ ಅವರ ನಾಯಕತ್ವ ಪ್ರಮುಖ ಕಾರಣವಾಗಿತ್ತು. ಇಂದು ಅದೇ ನಾಯಕನನ್ನು ಅಧಿಕಾರದಿಂದ ದೂರ ಮಾಡುವ ಮೂಲಕ ಪಕ್ಷವು ತನ್ನದೇ ಬೆಂಬಲಿಗರ ಭಾವನೆಗಳಿಗೆ ಧಕ್ಕೆ ತಂದಿದೆ ಎಂದು ಹೇಳಿದರು. -ಹಣಮೇಗೌಡ ಬೀರನಕಲ್

# ಬೆಳೆ ಹಾನಿ ಪರಿಹಾರಕ್ಕೆ ಆಗ್ರಹಿಸಿ ರೈತರ ಧರಣಿ

• **ಉದಯವಾಹಿನಿ, ಶಿವಮೊಗ್ಗ**

ಅಕಾಲಿಕ ಮಳೆಯಿಂದಾಗಿ ಅಡಿಕೆ ತೋಟಗಳನ್ನು ಕಳೆದುಕೊಂಡ ರೈತರಿಗೆ ಸೂಕ್ತ ಪರಿಹಾರ ನೀಡದ ಸರ್ಕಾರದ ವಿರುದ್ಧ ರೈತರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಶಿವಮೊಗ್ಗ ನಗರದ ಜಿಲ್ಲಾ ಪಂಚಾಯಿತಿ ಕಚೇರಿ ಮುಂಭಾಗದಲ್ಲಿ ಜಮಾಯಿಸಿದ ಹತ್ತಕ್ಕೂ ಹೆಚ್ಚು ರೈತರು, ಪರಿಹಾರ ವಿತರಣೆಯ ಬಗ್ಗೆ ಜಿಲ್ಲಾ ಉಸ್ತುವಾರಿ ಸಚಿವ ಮಧು ಬಂಗಾರಪ್ಪ ಅವರು ತಲೆಕೆಡಿಸಿಕೊಂಡಿಲ್ಲ ಎಂದು ಆರೋಪಿಸಿ ಆಕ್ರೋಶ ಹೊರಹಾಕಿದರು. ಈ ಸಂದರ್ಭದಲ್ಲಿ ರೈತರು ಹಾಗೂ ಪೊಲೀಸರ ನಡುವೆ ತೀವ್ರ ವಾಗ್ವಾದ ನಡೆಯಿತು.

ಕಳೆದ 20 ದಿನಗಳ ಹಿಂದೆ ಸುರಿದ ಅಕಾಲಿಕ ಮಳೆಗೆ ಶಿವಮೊಗ್ಗ ಗ್ರಾಮಾಂತರ ಕ್ಷೇತ್ರದ ಕೈಮರ, ಅರಹತೊಳಲು, ಮಂಗೋಟೆ, ಸನ್ಯಾಸಿಕೋಡಮಗ್ಗಿ ಸೇರಿದಂತೆ ಸುತ್ತಮುತ್ತಲಿನ ಸಾವಿರಾರು ಎಕರೆ ಪ್ರದೇಶಗಳಲ್ಲಿ ಅಡಿಕೆ ತೋಟಗಳು ಸಂಪೂರ್ಣವಾಗಿ ಹಾನಿಗೊಳಗಾಗಿವೆ.

ಆದರೆ, ಈವರೆಗೂ ಸರ್ಕಾರವಾಗಲಿ ಅಥವಾ ಜಿಲ್ಲಾಡಳಿತವಾಗಲಿ ಯಾವುದೇ ಸೂಕ್ತ ಪರಿಹಾರ ನೀಡಿಲ್ಲ. ನಮ್ಮ ನೋವನ್ನು ಕೇಳುವವರು ಯಾರು ಎಂದು ರೈತರು ಪೊಲೀಸರನ್ನು ಪ್ರಶ್ನಿಸಿದರು. ಅಷ್ಟೇ ಅಲ್ಲದೆ, ಇದೇ ವೇಳೆ ಜಿಲ್ಲಾ ಪಂಚಾಯಿತಿ ಕಚೇರಿಯ ಮುಂಭಾಗದಲ್ಲಿಯೇ ಪ್ರತಿಭಟನಾಕಾರರು ಧರಣಿ ಕುಳಿತರು.


ಉದಯವಾಹಿನಿ ಚಿತ್ರ

ಈ ವಿಷಯ ತಿಳಿಯುತ್ತಿದ್ದಂತೆ ಸ್ಥಳಕ್ಕೆ ಆಗಮಿಸಿದ ಶಿವಮೊಗ್ಗ ನಗರ ಶಾಸಕ ಎಸ್. ಎನ್. ಚನ್ನಬಸಪ್ಪ ಹಾಗೂ ಗ್ರಾಮಾಂತರ ಶಾಸಕಿ ಶಾರದಾ ಪೂರ್ಯಾನಾಯ್ಕ್ ಅವರು ರೈತರ ಮನವಿಯನ್ನು ಸ್ವೀಕರಿಸಿದರು. ಅಲ್ಲದೆ, ಇಂದು ನಡೆಯಲಿರುವ ಕೆಡಿಪಿ ಸಭೆಯಲ್ಲಿ ಈ ವಿಷಯವನ್ನು ಪ್ರಸ್ತಾಪಿಸುವುದಾಗಿ ರೈತರಿಗೆ ಭರವಸೆ ನೀಡಿದರು.

# ಜುಲೈ 31 ರ ವರೆಗೆ ಯಾಂತ್ರೀಕೃತ ಮೀನುಗಾರಿಕೆ ನಿಷೇಧ

• **ಉದಯವಾಹಿನಿ, ಕಾರವಾರ :**

ಉತ್ತರ ಕನ್ನಡ ಜಿಲ್ಲೆಯೂ ಸೇರಿದಂತೆ ಕರ್ನಾಟಕದ ಕರಾವಳಿಯಲ್ಲಿ ಯಾಂತ್ರೀಕೃತ ದೋಣಿಗಳ ಮೀನುಗಾರಿಕೆ ಚಟುವಟಿಕೆಗಳಿಗೆ ಜೂನ್ 1 ರಿಂದ ಜುಲೈ 31 ರವರೆಗೆ ಒಟ್ಟು 61 ದಿನಗಳ ನಿಷೇಧವನ್ನು ಹೇರಿ ಮೀನುಗಾರಿಕೆ ಇಲಾಖೆ ಆದೇಶ ಹೊರಡಿಸಿದೆ. ಮುಂಗಾರಿನ ಅವಧಿಯಲ್ಲಿ ಮೀನಿನ ಸಂತಾನೋತ್ಪತ್ತಿ ಕಾಲವಾದ ಕಾರಣ ಮೀನುಗಾರಿಕೆಗೆ ನಿಷೇಧ ಹೇರುವ ವಾಡಿಕೆ ದೇಶದ ಕರಾವಳಿಯಲ್ಲಿ ಚಾಲ್ತಿಯಲ್ಲಿದೆ. ಈ ವರ್ಷ ಸಹ ವಾಡಿಕೆಯಂತೆ ಮಳೆಗಾಲದಲ್ಲಿ ಯಾಂತ್ರಿಕೃತ ಮೀನುಗಾರಿಕೆಗೆ ನಿಷೇಧ ಹೇರಲಾಗಿದೆ.

ಯಾಂತ್ರೀಕೃತ ಮತ್ತು 10 ಹೆಚ್.ಪಿ. ಅಶ್ವಶಕ್ತಿಗಿಂತ ಅಧಿಕ ಸಾಮರ್ಥ್ಯದ ಇನ್‌ಬೋರ್ಡ್ ಅಥವಾ ಔಟ್ ಬೋರ್ಡ್ ಯಂತ್ರ ಅಳವಡಿಸಿರುವ ಮೀನುಗಾರಿಕೆ ದೋಣಿಗಳಲ್ಲಿ ಯಾವುದೇ ಬಲೆಗಳನ್ನು, ಮೀನು ಹಿಡಿಯುವ ಸಾಧನಗಳನ್ನು ಉಪಯೋಗಿಸಿ ಕೈಗೊಳ್ಳುವ ಮೀನುಗಾರಿಕೆ ಚಟುವಟಿಕೆಗಳಿಗೆ ಜೂನ್ 1 ರಿಂದ ಜುಲೈ 31 ರವರೆಗೆ ಒಟ್ಟು 61 ದಿನಗಳ ನಿಷೇಧವನ್ನು ಹೇರಿ ಆದೇಶ ಹೊರಡಿಸಲಾಗಿದೆ ಹಾಗೂ ಈ ನಿಷೇಧಿತ ಅವಧಿಯಲ್ಲಿ ದೋಣಿಗಳನ್ನು ಸಾಗಿಸುವ ಉದ್ದೇಶಕ್ಕಾಗಿ ಹತ್ತು ಹೆಚ್.ಪಿ. ಅಶ್ವಶಕ್ತಿಗಿಂತ ಕಡಿಮೆ ಸಾಮರ್ಥ್ಯದ ಮೋಟಾರೀಕೃತ ದೋಣಿ ಮತ್ತು ಸಾಂಪ್ರದಾಯಿಕ ನಾಡದೋಣಿಗಳು ಸುರಕ್ಷತಾ ಕ್ರಮಗಳೊಂದಿಗೆ ಮೀನುಗಾರಿಕೆ ನಡೆಸಲು ಅನುಮತಿ ನೀಡಲಾಗಿದೆ.


ಉದಯವಾಹಿನಿ ಚಿತ್ರ

ಮೀನುಗಾರಿಕೆ ಇಲಾಖೆಯ ಆದೇಶದಲ್ಲಿ ನೀಡಲಾಗಿರುವ ಸೂಚನೆಗಳನ್ನು ಎಲ್ಲಾ ಯಾಂತ್ರೀಕೃತ ದೋಣಿಗಳ ಮಾಲೀಕರು ಕಡ್ಡಾಯವಾಗಿ ಪಾಲಿಸುವಂತೆ ಸೂಚಿಸಲಾಗಿದೆ. ಈ ಸೂಚನೆಗಳನ್ನು ಮೀನುಗಾರಿಕೆ ಮಾಡುವವರು ಉಲ್ಲಂಘಿಸಿದ್ದಲ್ಲಿ, ಅಂಥವರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಇಲಾಖೆ ಎಚ್ಚರಿಸಿದೆ.

**ಯಾಂತ್ರೀಕೃತ ದೋಣಿಗಳ ಮಾಲೀಕರು ಕಡ್ಡಾಯವಾಗಿ ಪಾಲಿಸಬೇಕು**

> ನಿಯಮ ಉಲ್ಲಂಘನೆ ಮಾಡಿದರೆ ಬೋಟ್‌ಗಳಿಗೆ ಸರ್ಕಾರದಿಂದ ನೀಡುವ ಮಾರಾಟ ಕರರಹಿತ ಡೀಸೆಲ್ ಹಾಗೂ ಯಾವುದೇ ಸಹಾಯ ಸೌಲಭ್ಯಗಳನ್ನು ರದ್ದುಗೊಳಿಸಲಾಗುವುದು. ಕರಾವಳಿ ಪ್ರದೇಶದ ಎಲ್ಲಾ ಮೀನುಗಾರರ ಹಿತದೃಷ್ಟಿಯಿಂದ ಹೊರಡಿಸಲಾದ ಈ ಆದೇಶವನ್ನು ಎಲ್ಲಾ ಮೀನುಗಾರರು ಪಾಲಿಸಿ ಸಹಕರಿಸುವಂತೆ ಉತ್ತರ ಕನ್ನಡ ಜಿಲ್ಲಾ ಮೀನುಗಾರಿಕೆ ಜಂಟಿ ನಿರ್ದೇಶಕರು ತಿಳಿಸಿದ್ದಾರೆ.

# ಎಸ್‌ಐಆರ್ ಹೆಸರಿನಲ್ಲಿ ಮತದಾನದ ಹಕ್ಕು ಕಸಿಯುವ ಸಂಚು ಬೇಡ

• **ಉದಯವಾಹಿನಿ, ವಿಜಯಪುರ**

ರಾಜ್ಯದಲ್ಲಿ ಜಾರಿಗೆ ತರಲು ಮುಂದಾಗಿರುವ ಎಸ್‌ಐಆರ್ ಕ್ರಮವನ್ನು ತಕ್ಷಣ ಹಿಂಪಡೆಯಬೇಕೆಂದು ಆಗ್ರಹಿಸಿ TMS ವಿರೋಧಿ ಜಾತ್ಯತೀತ ಸಂಘಗಳು ಹಾಗೂ ಜನಪರ ಸಂಘಟನೆಗಳ ಒಕ್ಕೂಟ ನಗರದ ಜಿಲ್ಲಾಧಿಕಾರಿ ಕಚೇರಿ ಎದುರು ಬೃಹತ್ ಪ್ರತಿಭಟನೆ ನಡೆಸಿ, ಜಿಲ್ಲಾಧಿಕಾರಿಗಳ ಮುಖಾಂತರ ಮುಖ್ಯಮಂತ್ರಿ ಹಾಗೂ ಕರ್ನಾಟಕ ಸರ್ಕಾರಕ್ಕೆ ಮನವಿ ಸಲ್ಲಿಸಿತು.



ಉದಯವಾಹಿನಿ ಚಿತ್ರ

ವಿಜಯಪುರದಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿಧ ಜನಪರ, ಪ್ರಗತಿಪರ ಹಾಗೂ ರಾಜಕೀಯ ಸಂಘಟನೆಗಳ ಮುಖಂಡರು ಪ್ರತಿಭಟನೆಯಲ್ಲಿ ಭಾಗವಹಿಸಿ, TMS ಕ್ರಮದಿಂದ ಬಡವರು, ಅಲ್ಪಸಂಖ್ಯಾತರು, ರೈತರು, ಕಾರ್ಮಿಕರು ಹಾಗೂ ಹಿಂದುಳಿದ ವರ್ಗಗಳ ಮತದಾನದ ಹಕ್ಕಿಗೆ ಧಕ್ಕೆ ಉಂಟಾಗುವ ಸಾಧ್ಯತೆ ಇದೆ ಎಂದು ತೀವ್ರ ಆತಂಕ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಮುಖಂಡ ಶ್ರೀನಾಥ ಪೂಜಾರಿ, ''ಚುನಾವಣಾ ಪ್ರಕ್ರಿಯೆಯನ್ನು ಪಾರದರ್ಶಕ ಹಾಗೂ ನ್ಯಾಯಸಮ್ಮತವಾಗಿ ನಡೆಸುವ ಹೆಸರಿನಲ್ಲಿ ಜಾರಿಗೊಳಿಸಲಾಗುತ್ತಿರುವ TMS ಕ್ರಮವು ಸಾಮಾನ್ಯ ಜನರ ಮತದಾನದ ಹಕ್ಕಿನ ಮೇಲೆ ಗಂಭೀರ ಪರಿಣಾಮ ಬೀರುವ ಸಾಧ್ಯತೆ ಇದೆ. ರಾಜ್ಯ ಸರ್ಕಾರವು ತಕ್ಷಣ ಕೇಂದ್ರ ಚುನಾವಣಾ ಆಯೋಗದ ಮೇಲೆ ಒತ್ತಡ ಹೇರಿ ಈ ಅವೈಜ್ಞಾನಿಕ ಹಾಗೂ ಜನವಿರೋಧಿ ಕ್ರಮವನ್ನು ಹಿಂಪಡೆಯುವಂತೆ ಆಗ್ರಹಿಸಬೇಕು'' ಎಂದು ಹೇಳಿದರು.

ಅಹಿಂದ ಮುಖಂಡ ಎಸ್.ಎಂ. ಪಾಟೀಲ ಗಣೇಹಾರ ಮಾತನಾಡಿ, ''ಮತದಾರರ ಪಟ್ಟಿಯಲ್ಲಿ ಹೆಸರು ಉಳಿಸಿಕೊಳ್ಳಲು ಅನಗತ್ಯ ದಾಖಲೆಗಳನ್ನು ಕಡ್ಡಾಯಗೊಳಿಸಿರುವುದು ಬಡಜನರಿಗೆ ಸಂಕಷ್ಟ ಉಂಟುಮಾಡಲಿದೆ. ವಿಶೇಷವಾಗಿ ಗ್ರಾಮೀಣ ಭಾಗದ ಜನರಿಗೆ ಜನನ ಪ್ರಮಾಣಪತ್ರ, ಭೂ ದಾಖಲೆ, ಶಿಕ್ಷಣ ದಾಖಲೆಗಳನ್ನು ಒದಗಿಸುವುದು ಕಷ್ಟಕರವಾಗಿದೆ. ಇದರಿಂದ ಸಾವಿರಾರು ಜನರು ಮತದಾನದ ಹಕ್ಕಿನಿಂದ ವಂಚಿತರಾಗುವ ಭೀತಿ ಎದುರಾಗಿದೆ'' ಎಂದು ಆತಂಕ ವ್ಯಕ್ತಪಡಿಸಿದರು.

# 2.62 ಕೋಟಿ ರೂ ಮೌಲ್ಯದ ಸತ್ತು ಮಾಲೀಕರಿಗೆ ಹಸ್ತಾಂತರಿಸಿದ ಪೊಲೀಸ್ ಇಲಾಖೆ

• **ಉದಯವಾಹಿನಿ, ಬಳ್ಳಾರಿ**

ಜಿಲ್ಲೆಯ ವಿವಿಧ ಪೊಲೀಸ್ ಠಾಣೆಗಳಲ್ಲಿ ಕಳೆದ ಆರು ತಿಂಗಳಲ್ಲಿ ದಾಖಲಾದ ಕಳ್ ಕರಣಗಳಲ್ಲಿ ಪೊಲೀಸರು ವಶಪಡಿಸಿಕೊಂಡ ರೂ.2.62 ಕೋಟಿ ಮೌಲ್ಯದ ಸ್ವತ್ತನ್ನು ನಿನ್ನೆ ಎಸ್ಪಿ ಕಚೇರಿ ಆವರಣದಲ್ಲಿ ಐಜಿಪಿ ಡಾ.ಹರ್ಷ, ಎಸ್ಪಿ ಡಾ.ಸುಮನ್ ಡಿ.ಪನ್ನೇಕರ್ ಮತ್ತವರ ಸಿಬ್ಬಂದಿ ಮಾಲೀಕರಿಗೆ ವಿತರಿಸಿದರು. ಕಳೆದ 2025ರ ಅ.1ರಿಂದ 2026ರ ಮೇ 27ರವರೆಗೆ 294 ಕಳ್ಳತನ ಪ್ರಕರಣ ದಾಖಲಾಗಿ, 5,80,73,923 ಮೌಲ್ಯದ ಸ್ವತ್ತು ಕಳುವಾಗಿತ್ತು ಪ್ರಕರಣಗಳನ್ನು ಭೇದಿಸಲು ಎರಡು ತಿಂಗಳಿಂದ ವಿಶೇಷ ಕಾಳಜಿ ವಹಿಸಿ ತನಿಖೆಗಾಗಿ ತಂಡಗಳನ್ನು ರಚಿಸಿ ವ್ಯಾಪಕವಾಗಿ ಕಾರ್ಯಾಚರಣೆ ನಡೆಸಿ 66 ಪ್ರಕರಣಗಳನ್ನು ಪತ್ತೆ ಹಚ್ಚಿ, ನಗದು ಹಣ, ಚಿನ್ನ, ಬೆಳ್ಳಿ, ಬೈಕ್ ಮರ್ದಲಾದವು ಸೇರಿ 2.62,45,351 ರೂ ಮಾಲು ವಶಪಡಿಸಿಕೊಂಡು ಶೇ.45 ರಷ್ಟು ಪ್ರಕರಣಗಳನ್ನು ಬೇಧಿಸಲಾಗಿದೆ. ಇದರಲ್ಲಿ ಚೀಟಿಂಗ್ ಪ್ರಕರಣಕ್ಕೆ ಸಂಬಂಧಿಸಿದಂತೆ ಒಂದೇ ಪ್ರಕರಣದಲ್ಲಿ 1.45ಕೋಟಿ ಸ್ವತ್ತು ವಶಕ್ಕೆ ಪಡೆದಿರುವುದು ವಿಶೇಷವಾಗಿದೆ. ಹಗಲು ಕಳ್ಳತನಕ್ಕೆ ಸಂಬಂಧಿಸಿದಂತೆ 13 ಪ್ರಕರಣ ದಾಖಲಾಗಿದ್ದು, 4 ಪ್ರಕರಣ ಪತ್ತೆಯಾಗಿದೆ. 28,54,600 ರೂ ಸತ್ತು ಕಳುವಾಗಿದೆ. ರಾತ್ರಿ ಕಳ್ಳತನಕ್ಕೆ ಸಂಬಂಧಿಸಿದಂತೆ 57 ಪ್ರಕರಣದಲ್ಲಿ 1,31,17,400 ಕಳುವಾಗಿದ್ದು, ಇದರಲ್ಲಿ ಪತ್ತೆಯಾಗಿದ್ದು 13,43,600. ಮನೆ ಕಳ್ಳತನ 16 ಪ್ರಕರಣ ದಾಖಲಾಗಿದ್ದು, 3 ಪ್ರಕರಣದಲ್ಲಿ ಪತ್ತೆ ಹಚ್ಚಲಾಗಿದೆ.

# ಮಂಗಳೂರಿಗೆ ಸಿಟಿ ಬಸ್ ಮಾರ್ಗಗಳ ವಿಸ್ತರಣೆಗೆ ಸಂಸದ ಬ್ರಿಜೇಶ್ ಚೌಟ ಸಲಹೆ

## ಮುಂದಿನ ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ (ಆರ್‌ಟಿಎ) ಸಭೆಯಲ್ಲಿ ತುರ್ತಾಗಿ ಮಂಡಿಸಿ ಸೂಕ್ತ ತೀರ್ಮಾನ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಪತ್ರ

• **ಉದಯವಾಹಿನಿ, ಮಂಗಳೂರು**

ನಗರದ ಕೆಲವು ಪ್ರಮುಖ ಸಿಟಿ ಬಸ್ ಮಾರ್ಗಗಳ ಬದಲಾವಣೆ ಮತ್ತು ವಿಸ್ತರಣೆಯ ಅಗತ್ಯತೆ ಕುರಿತು ಸಂಸದ ಬ್ರಿಜೇಶ್ ಚೌಟ ದ.ಕ. ಜಿಲ್ಲಾಡಳಿತಕ್ಕೆ ಪತ್ರ ಬರೆದಿದ್ದಾರೆ. ಈ ಜಿಲ್ಲಾಧಿಕಾರಿಗಳ ಕಚೇರಿಯು ಗಂಭೀರವಾಗಿ ಪರಿಗಣಿಸಿದ್ದು, ಮುಂದಿನ ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ (ಆರ್‌ಟಿಎ) ಸಭೆಯಲ್ಲಿ ತುರ್ತಾಗಿ ಮಂಡಿಸಿ ಸೂಕ್ತ ತೀರ್ಮಾನ ಕೈಗೊಳ್ಳುವಂತೆ ಅಪರ ಜಿಲ್ಲಾಧಿಕಾರಿಯು ಸಾರಿಗೆ ಇಲಾಖೆಯ ಹಿರಿಯ ಅಧಿಕಾರಿಗಳಿಗೆ ಪತ್ರ ಬರೆದಿದ್ದಾರೆ.

ಮಂಗಳೂರು ನಗರದ ಭೌಗೋಳಿಕ ಮತ್ತು ಜನಸಂಖ್ಯಾ ಬೆಳವಣಿಗೆಗೆ ಪೂರಕವಾಗಿ ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಮೇಲ್ದರ್ಜೆಗೇರಿಸಲು ಹಾಗೂ ಪ್ರಯಾಣಿಕರ ದೈನಂದಿನ ಸಂಚಾರವನ್ನು ಸುಗಮಗೊಳಿಸಲು ಸಂಸದರು ಪ್ರಸ್ತಾವನೆ ಸಲ್ಲಿಸಿದ್ದಾರೆ. ಸಂಸದ ಬ್ರಿಜೇಶ್ ಚೌಟ ಜಿಲ್ಲಾಡಳಿತಕ್ಕೆ ಬರೆದ ಪತ್ರದಲ್ಲಿ ಮಂಗಳೂರು ನಗರದ ಪ್ರಸ್ತುತ ಸಾರಿಗೆ ಸ್ಥಿತಿ-ಗತಿಗಳ ಕುರಿತು ಪ್ರಮುಖವಾಗಿ ಪ್ರಸ್ತಾಪಿಸಿದ್ದಾರೆ. ನಗರವು ದಿನದಿಂದ ದಿನಕ್ಕೆ ವೇಗವಾಗಿ ಬೆಳೆಯುತ್ತಿದ್ದು, ಚಾಲ್ತಿಯಲ್ಲಿರುವ ಹಲವು ಸಿಟಿ ಬಸ್ಸುಗಳು ಇನ್ನೂ ಹಳೆಯ ಮತ್ತು ಸಣ್ಣ ಮಾರ್ಗಗಳಲ್ಲೇ ಸಂಚರಿಸುತ್ತಿದೆ. ಇದರಿಂದ ಸಾರ್ವಜನಿಕರ ಹೆಚ್ಚುತ್ತಿರುವ ಸಾರಿಗೆ ಅವಶ್ಯಕತೆಗಳನ್ನು ಪೂರೈಸಲು ಸಾಧ್ಯವಾಗುತ್ತಿಲ್ಲ. ಇಂತಹ ಹಳೆಯ ಮಾರ್ಗಗಳಿಂದಾಗಿ ಬಸ್ ಆಪರೇಟರ್‌ಗಳಿಗೂ ಆರ್ಥಿಕವಾಗಿ ನಷ್ಟ ಉಂಟಾಗುತ್ತಿದ್ದು, ಬದಲಾಗುತ್ತಿರುವ ಜನಸಂಖ್ಯೆಗೆ ಅನುಗುಣವಾಗಿ ಈ ಮಾರ್ಗಗಳನ್ನು ವಿಸ್ತರಿಸುವುದು ಸಾರ್ವಜನಿಕರಿಗೆ ಅನುಕೂಲ ಕಲ್ಪಿಸುವುದರ ಜೊತೆಗೆ ಸಾರಿಗೆ ವ್ಯವಸ್ಥೆಯನ್ನು ಲಾಭದಾಯಕವಾಗಿ ನಡೆಸಲು ಇರುವ ಏಕೈಕ ತಾರ್ಕಿಕ ಮಾರ್ಗವಾಗಿದೆ ಎಂದು ಸಂಸದರು ಸ್ಪಷ್ಟಪಡಿಸಿದ್ದರು.

ಸಾರ್ವಜನಿಕ ವಲಯದಿಂದ ಬಂದಿರುವ ವ್ಯಾಪಕ ಪ್ರತಿಕ್ರಿಯೆಗಳು ಮತ್ತು ಸ್ಥಳೀಯ ಅಗತ್ಯತೆಗಳನ್ನು ಸೂಕ್ಷ್ಮವಾಗಿ ಗಮನಿಸಿರುವ ಸಂಸದರು, ಸದ್ಯ ಮೂರು ಪ್ರಮುಖ ಬಸ್ ಮಾರ್ಗಗಳ ವಿಸ್ತರಣೆಗೆ ಬಲವಾದ ಶಿಫಾರಸು ಮಾಡಿದ್ದಾರೆ. ಮಾರ್ಗ ಸಂಖ್ಯೆ 5 ಅನ್ನು ಮೋರ್ಗನ್ಸ್‌ಗೇಟ್‌ನಿಂದ ಜೆಪ್ಪಿನಮೊಗರುವಿನವರೆಗೆ ವಿಸ್ತರಿಸಲು ಕೋರಲಾಗಿದೆ. ಹಾಗೆಯೇ ಬೈಕಂಪಾಡಿ ಭಾಗದ ಕೈಗಾರಿಕಾ ಕಾರ್ಮಿಕರು ಮತ್ತು ನಿತ್ಯ ಪ್ರಯಾಣಿಕರ ಹಿತದೃಷ್ಟಿಯಿಂದ ಮಾರ್ಗ ಸಂಖ್ಯೆ 7ನ್ನು ಉರ್ವಸ್ಟೋರ್‌ನಿಂದ ಬೈಕಂಪಾಡಿ ಕೈಗಾರಿಕಾ ಪ್ರದೇಶದವರೆಗೆ ದೇಶ-ವಿದೇಶಗಳ ಪ್ರವಾಸಿಗರಿಗೆ ಮತ್ತು ಸ್ಥಳೀಯ ಸಂದರ್ಶಕರಿಗೆ ನೇರ ಸಂಪರ್ಕ ಕಲ್ಪಿಸುವ ನಿಟ್ಟಿನಲ್ಲಿ ಮಾರ್ಗ ಸಂಖ್ಯೆ 13ನ್ನು ಪಣಂಬೂರು ಬೀಚ್‌ನ ಒಳಭಾಗದವರೆಗೆ ವಿಸ್ತರಿಸಲು ಸಂಸದರು ಬರೆದಿದ್ದ ಪತ್ರದಲ್ಲಿ ಕೋರಲಾಗಿದೆ. ಈ ಪ್ರಸ್ತಾವಿತ ಮಾರ್ಗ ವಿಸ್ತರಣೆಗಳು ದೈನಂದಿನ ಪ್ರಯಾಣಿಕರಾದ ವಿದ್ಯಾರ್ಥಿಗಳು ಉದ್ಯೋಗಿಗಳಿಗೆ ನೆರವಾಗುವುದಲ್ಲದೆ ಕರಾವಳಿಯ ಪ್ರಮುಖ ಪ್ರವಾಸಿ ತಾಣಗಳಿಗೆ ನೇರ ಸಂಪರ್ಕ ಒದಗಿಸುವ ಮೂಲಕ ಸ್ಥಳೀಯ ಪ್ರವಾಸೋದ್ಯಮದ ಬೆಳವಣಿಗೆಗೂ ದೊಡ್ಡ ಉತ್ತೇಜನ ನೀಡಲಿವೆ ಎಂದು ಸಂಸದರು ಅಭಿಪ್ರಾಯಪಟ್ಟಿದ್ದಾರೆ. ಈ ಅಂಶಗಳನ್ನು ಗಂಭೀರವಾಗಿ ಪರಿಗಣಿಸಿರುವ ಜಿಲ್ಲಾಧಿಕಾರಿಗಳ ಕಚೇರಿಯು, ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳು,ಉಪ ಸಾರಿಗೆ ಆಯುಕ್ತರು ಹಿರಿಯ ಪ್ರಾದೇಶಿಕ ಸಾರಿಗೆ ಅಧಿಕಾರಿ ಗಳಿಗೆ ಪತ್ರ ಬರೆದಿದೆ.

> ನಗರದ ಗಡಿಗಳು ದಿನದಿಂದ ದಿನಕ್ಕೆ ವಿಸ್ತರಣೆಯಾಗುತ್ತಿದ್ದರೂ, ಸಾರ್ವಜನಿಕ ಬಸ್ಸುಗಳು ಇನ್ನೂ ಹಳೆಯ ಹಾಗೂ ಸಣ್ಣ ಮಾರ್ಗಗಳಲ್ಲೇ ಸಂಚರಿಸುತ್ತಿರುವುದರಿಂದ ಸಾರ್ವಜನಿಕರು ಎದುರಿಸುತ್ತಿದ್ದ ಸಮಸ್ಯೆಗಳಿಗೆ ಜಿಲ್ಲಾಡಳಿತದ ಈ ನಿರ್ಧಾರದಿಂದ ಶೀಘ್ರದಲ್ಲೇ ಮುಕ್ತಿ ಸಿಗುವ ಸಾಧ್ಯತೆ ದಟ್ಟವಾಗಿದೆ ಎಂದು ಸಂಸದರು ಹೇಳಿಕೆಯಲ್ಲಿ ತಿಳಿಸಿದ್ದಾರೆ. -ಸಂಸದ ಬ್ರಿಜೇಶ್ ಚೌಟ.

**ಸಂಸದರು ಪ್ರಸ್ತಾವನೆ ಸಲ್ಲಿಕೆ**


ಉದಯವಾಹಿನಿ ಚಿತ್ರ

**ತುರ್ತು ನಿರ್ಧಾರ ಕಡ್ಡಾಯ ಮಂಡಿಸಬೇಕು**

> ಸಂಸದರು ಪ್ರಸ್ತಾಪಿಸಿರುವ ಈ ಮೂರೂ ಮಾರ್ಗಗಳ ಸಾಧಕ-ಬಾಧಕಗಳು ಮತ್ತು ಕಾರ್ಯಸಾಧ್ಯತೆಯ ಬಗ್ಗೆ ಸಮಗ್ರವಾಗಿ ಪರಿಶೀಲಿಸಬೇಕು ಹಾಗೂ ತುರ್ತಾಗಿ ಅಗತ್ಯ ಶಿಫಾರಸುಗಳೊಂದಿಗೆ ಮುಂದಿನ ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಮುಂದಿನ ಸಭೆಯಲ್ಲಿ ಸೂಕ್ತ ಪರಿಗಣನೆಗಾಗಿ ಮತ್ತು ತುರ್ತು ನಿರ್ಧಾರಕ್ಕಾಗಿ ಕಡ್ಡಾಯವಾಗಿ ಮಂಡಿಸಬೇಕು ಎಂದು ಜಿಲ್ಲಾಡಳಿತ ತನ್ನ ಪತ್ರದಲ್ಲಿ ಸೂಚನೆ ನೀಡಿದೆ.

# ಮಿನಿ ನ್ಯೂಸ್

## ಮಾರ್ಗ ಸೂಚಿ ಪರಿಶೀಲನೆ

• **ಉದಯವಾಹಿನಿ, ಲಕ್ಷ್ಮೇಶ್ವರ,**

ಪಟ್ಟಣದ ಸರ್ಕಾರಿ ಮಾದರಿ ಪ್ರಾಥಮಿಕ ಕನ್ನಡ ಹೆಣ್ಣು ಮಕ್ಕಳ ಶಾಲೆಗೆ ಶಿರಹಟ್ಟಿ ತಾಲ್ಲೂಕ ನೋಡಲ್ ಅಧಿಕಾರಿ ಹಾಗೂ ಗದಗ್ ಜಿಲ್ಲಾ ಡಳಿತ ಉಪ ಪ್ರಾಚಾರ್ಯ ಜಿಎಂ ಮುಂದಿನ ಮನಿ ಅವರು ಭೇಟಿ ನೀಡಿ ಶಾಲಾ ಪ್ರಾರಂಭೋತ್ಸವದ ಮಾರ್ಗಸೂಚಿಗಳನ್ನು ಪರಿಶೀಲನೆ ಮಾಡಿದರು. ಈ ಸಂದರ್ಭದಲ್ಲಿ ಅವರು ಪ್ರಸಕ್ತ ಶೈಕ್ಷಣಿಕ ವರ್ಷ ಶಾಲಾ ಪ್ರಾರಂಭೋತ್ಸವ ಸೇತುಬಂಧ ಕಾರ್ಯಕ್ರಮ ಶಾಲಾ ವೇಳಾಪಟ್ಟಿ ಶಾಲಾ ಸ್ವಚ್ಛತೆ ಬಿಸಿಯುಟದ ವ್ಯವಸ್ಥೆ ಪಠ್ಯಪುಸ್ತಕ ಮತ್ತು ಸಮಸ್ಯೆ ವಿತರಣೆ ಮುಂತಾದ ಸರ್ಕಾರದ ಯೋಜನೆಗಳ ಕುರಿತು ಮಾರ್ಗದರ್ಶನ ಮಾಡಿದರು. ಈ ಸಂದರ್ಭದಲ್ಲಿ ಶಾಲೆಯ ಮುಖ್ಯೋಪಾಧ್ಯಾಯರಾದ ಬಸವರಾಜ್ ಕುಂಬಾರ್ ಸಿಆರ್‌ಪಿಸಿ ಶ್ರೀನಿವಾಸ್ ಮತ್ತೂರ ಇದ್ದರು ಇದೇ ಸಂದರ್ಭದಲ್ಲಿ ಇಂದಿರಾನಗರ ಶಾಲೆಗೆ ಮುಖ್ಯೋಪಾಧ್ಯಾಯರಾಗಿದ್ದ ಎಲ್ ಆರ್ ಮಲಸಮುದ್ರ ನಿವೃತ್ತಿಯಾದ ಹಿನ್ನೆಲೆಯಲ್ಲಿ ಅವರನ್ನು ಸನ್ಮಾನಿಸಲಾಯಿತು.


ಉದಯವಾಹಿನಿ ಚಿತ್ರ

## ಪರಿಪೂರ್ಣ ವೈದ್ಯಕೀಯ ಅಧ್ಯಯನಕ್ಕೆ ಕೌಶಲ್ಯಾಭಿವೃದ್ಧಿ ತರಬೇತಿ ಅಗತ್ಯ

• **ಉದಯವಾಹಿನಿ, ವಿಜಯಪುರ:**

ಪರಿಪೂರ್ಣ ವೈದ್ಯಕೀಯ ಅಧ್ಯಯನಕ್ಕೆ ಕೌಶಲ್ಯಾಭಿವೃದ್ಧಿ ತರಬೇತಿ ಅಗತ್ಯ ಎಂದು ಬಿ.ಎಲ್.ಡಿ.ಇ ಡೀಮ್ಡ್ ವಿಶ್ವವಿದ್ಯಾಲಯದ ಶ್ರೀ ಬಿ. ಎಂ. ಪಾಟೀಲ ವೈದ್ಯಕೀಯ ಕಾಲೇಜಿನ ಪ್ರಾಚಾರ್ಯ ಡಾ. ತೇಜಸ್ವಿನಿ ವಲ್ಲಭ ಹೇಳಿದ್ದಾರೆ. ನಗರದದಲ್ಲಿ ಶ್ರೀ ಬಿ. ಎಂ. ಪಾಟೀಲ ವೈದ್ಯಕೀಯ ಮಹಾವಿದ್ಯಾಲಯದ ಶಸ್ತ್ರಚಿಕಿತ್ಸೆ ವಿಭಾಗದ ವತಿಯಿಂದ ಜಾನ್ಸನ್ ಅಂಡ್ ಜಾನ್ಸನ್ ಸಂಸ್ಥೆಯ ಸಹಯೋಗದಲ್ಲಿ ಆಯೋಜಿಸಲಾದ ಪ್ರಥಮ ವರ್ಷದ ಶಸ್ತ್ರಚಿಕಿತ್ಸೆ ಆಧಾರಿತ ವಿಭಾಗಗಳ ಸ್ನಾತಕೋತ್ತರ ವೈದ್ಯಕೀಯ ವಿದ್ಯಾರ್ಥಿಗಳ ಕೌಶಲ್ಯಾಭಿವೃದ್ಧಿ ತರಬೇತಿ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು. ಜಾನ್ಸನ್ ಅಂಡ್ ಜಾನ್ಸನ್ ಸಂಸ್ಥೆಯು ದೇಶಾದ್ಯಂತ ವೈದ್ಯಕೀಯ ಮಹಾವಿದ್ಯಾಲಯಗಳ ವಿದ್ಯಾರ್ಥಿಗಳಿಗೆ ಚಲಿಸುವ ವಾಹನದ ಮೂಲಕ ಕೌಶಲ್ಯಾಭಿವೃದ್ಧಿ ತರಬೇತಿ ನೀಡುತ್ತಿರುವುದು ಶ್ಲಾಘನೀಯವಾಗಿದೆ.

ಬಿ.ಎಲ್.ಡಿ.ಇ. ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಈಗಾಗಲೇ ವಿಶ್ವದರ್ಜೆಯ ಕೌಶಲ್ಯಾಭಿವೃದ್ಧಿ ಪ್ರಯೋಗಾಲಯ ಕಾರ್ಯನಿರ್ವಹಿಸುತ್ತಿದ್ದು, ಸಾವಿರಾರು ವಿದ್ಯಾರ್ಥಿಗಳು ಇದರ ಪ್ರಯೋಜನ ಪಡೆದಿದ್ದಾರೆ ಎಂದು ಅವರು ತಿಳಿಸಿದರು.

ಶಸ್ತ್ರಚಿಕಿತ್ಸಾ ವಿಭಾಗದ ಮುಖ್ಯಸ್ಥ ಡಾ. ಮಂಜುನಾಥ ಕೋಟೆಣ್ಣವರ ಅವರು ಸ್ವಾಗತಿಸಿ ಮಾತನಾಡಿ, ಶಸ್ತ್ರಚಿಕಿತ್ಸೆ ಆಧಾರಿತ ವಿಭಾಗಗಳ ಸ್ನಾತಕೋತ್ತರ ವೈದ್ಯಕೀಯ ವಿದ್ಯಾರ್ಥಿಗಳು ರೋಗಿಗಳಿಗೆ ಸಂಪೂರ್ಣ ಪ್ರಮಾಣದ ಚಿಕಿತ್ಸೆ ನೀಡುವ ಮುನ್ನ ಇಂಥ ಕೌಶಲ್ಯಾಭಿವೃದ್ಧಿ ತರಬೇತಿಗಳು ಅವರ ಆತ್ಮವಿಶ್ವಾಸವನ್ನು ಹೆಚ್ಚಿಸಲು ಸಹಕಾರಿಯಾಗುತ್ತವೆ. ರಾಷ್ಟ್ರೀಯ ವೈದ್ಯಕೀಯ ಆಯೋಗದ (ಎನ್‌ಎಂಸಿ) ನಿಯಮಾವಳಿಗಳ ಪ್ರಕಾರವೂ ಇಂತಹ ತರಬೇತಿಗಳು ಅತ್ಯಗತ್ಯವಾಗಿವೆ ಎಂದು ಹೇಳಿದರು.

## ಸೇಂದಿ ಅಕ್ರಮ ಸಾಗಣೆ: ಪ್ರಕರಣ ದಾಖಲು

• **ಉದಯವಾಹಿನಿ, ಕುರುಗೋಡು**

ವಾಹನವೊಂದರಲ್ಲಿ ಅಕ್ರಮವಾಗಿ ಸಾಗಿಸುತ್ತಿದ್ದ 100 ಲೀಟರ್ ಸೇಂದಿ ವಶಪಡಿಸಿಕೊಂಡ ಘಟನೆ ತಾಲ್ಲೂಕಿನ ಯಲ್ಲಾಪುರ ಕ್ರಾಸ್‌ನಲ್ಲಿ ಸಂಭವಿಸಿದೆ. ಆಂಧ್ರಪ್ರದೇಶದ ಉರವಕೊಂಡ ತಾಲ್ಲೂಕಿನ ಜಲ್ಲಿಪಲ್ಲಿ ಗ್ರಾಮದಿಂದ ಸುಧಾಕರ ಎಂಬುವರು ಗೋಪಿ ಅವರ ಮುಖಾಂತರ ವಾಹನದಲ್ಲಿ ಯಲ್ಲಾಪುರ ಗ್ರಾಮದ ತಿಪ್ಪೇಸ್ವಾಮಿ ಅವರಿಗೆ ಸೇಂದಿ ಸರಬರಾಜು ಮಾಡುತ್ತಿದ್ದರು. ಖಚಿತ ಮಾಹಿತಿ ಪಡೆದ ಪೊಲೀಸರು' ದಾಳಿ ನಡೆಸಿ ಸೇಂದಿ ಬಾಟಲಿ ಹಾಗೂ ವಾಹನ ಸಮೇತ ಮೂವರನ್ನು ವಶಕ್ಕೆ ಪಡೆದಿದ್ದಾರೆ.

ಪಿಎಸ್‌ಐ ಸುಪ್ರಿತ್ ವಿ., ಸಿಬ್ಬಂದಿ ಶರಣಪ್ಪ ಮತ್ತು ರೇವಣ್ಣ ಕಾರ್ಯಾಚರಣೆಯಲ್ಲಿ ಇದ್ದರು. ಈ ಕುರಿತು ಸ್ಥಳೀಯ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಮುಂದುವರಿದ ಮೀನು ಇಳುವರಿ ಕುಸಿತ

• **ಉದಯವಾಹಿನಿ, ಉಡುಪಿ:**

ವರ್ಷದಿಂದ ವರ್ಷಕ್ಕೆ ಜಿಲ್ಲೆಯಲ್ಲಿ ಮೀನು ಇಳುವರಿ ನಿಗದಿತ ಗುರಿಗಿಂತ ಕುಸಿಯುತ್ತಿದ್ದು, ಮತ್ಸ್ಯಕ್ಷಾಮವು ಮತ್ಸ್ಯೋದ್ಯಮಕ್ಕೆ ಹೊಡೆತ ನೀಡುತ್ತಿದೆ. 2025-26ನೇ ಸಾಲಿನ ಮೀನುಗಾರಿಕಾ ಋತುವಲ್ಲಿ 2024-25ನೇ ಸಾಲಿನ ಮೀನುಗಾರಿಕಾ ಋತುವಿಗಿಂತ ಹೆಚ್ಚು ಇಳುವರಿ ಲಭಿಸಿದರೂ ನಿಗದಿತ ಗುರಿಗಿಂತ ಕಡಿಮೆ ಲಭಿಸಿದೆ ಎನ್ನುವುದು ಮೀನುಗಾರಿಕಾ ಇಲಾಖೆಯ ಅಂಕಿ ಅಂಶಗಳು ಹೇಳುತ್ತಿವೆ.

ಕಳೆದ ವರ್ಷ ಮೇ ತಿಂಗಳ ಮೂರನೇ ವಾರದಲ್ಲಿ ಆರಂಭವಾಗಿದ್ದ ಮಳೆಯು ಅಕ್ಟೋಬರ್ ತಿಂಗಳವರೆಗೂ ನಿರಂತರವಾಗಿ ಸುರಿದಿತ್ತು. ಇದರಿಂದಾಗಿ ಟ್ರಾಲಿಂಗ್ ನಿಷೇಧದ ಅವಧಿಯಲ್ಲಿ ನಾಡದೋಣಿಗಳಿಗೂ ಉತ್ತಮ ಮೀನುಗಾರಿಕೆ ನಡೆಸಲು ಸಾಧ್ಯವಾಗಿರಲಿಲ್ಲ. ಟ್ರಾಲಿಂಗ್ ನಿಷೇಧ ತೆರವಾದ ಬಳಿಕವೂ ಪದೇ ಪದೇ ತೂಫಾನ್ ಬಂದುದರಿಂದ ಆಳಸಮುದ್ರಕ್ಕೆ ಮೀನುಗಾರಿಕೆಗೆ ತೆರಳುವ ದೋಣಿಗಳು ಮಲ್ಪೆ ಬಂದರಿನಲ್ಲೇ ಲಂಗರು ಹಾಕಿದ್ದವು. ಮಳೆಗಾಲದಲ್ಲಿ ಹವಾಮಾನ ವೈಪರೀತ್ಯದಿಂದ ಹೆಚ್ಚಿನ ದಿನಗಳಲ್ಲಿ ಮೀನುಗಾರಿಕೆ ನಡೆಸಲು ಸಾಧ್ಯವಾಗಲಿಲ್ಲ. ಬೇಸಿಗೆಯಲ್ಲಿ ಮಾರ್ಚ್ ತಿಂಗಳಿನಿಂದಲೇ ಬಿಸಿಲಿನ ಧಗೆಯೂ ಹೆಚ್ಚಾಗಿ ಮೀನುಗಾರಿಕೆಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿತ್ತು ಎಂದು ಮಲ್ಪೆಯ ಮೀನುಗಾರರು ತಿಳಿಸಿದ್ದಾರೆ.

## ಉಚಿತ ಬ್ಯೂಟಿ ಪಾರ್ಲರ್ ತರಬೇತಿ ಶಿಬಿರದ ಸಮಾರೋಪ

• **ಉದಯವಾಹಿನಿ, ಬ್ರಹ್ಮಾವರ**

ಇಲ್ಲಿನ ಗ್ರಾಮೀಣಾಭಿವೃದ್ಧಿ ಮತ್ತು ಸ್ವಯಂ ಉದ್ಯೋಗ ತರಬೇತಿ ಸಂಸ್ಥೆ (ರುಡ್‌ಸೆಟ್) ವತಿಯಿಂದ ಆಯೋಜಿಸಿದ್ದ 35 ದಿನಗಳ ಉಚಿತ ಬ್ಯೂಟಿ ಪಾರ್ಲರ್ ತರಬೇತಿ ಶಿಬಿರದ ಸಮಾರೋಪವು ಇತ್ತೀಚೆಗೆ ಜರುಗಿತು. ಕಾರ್ಯಕ್ರಮದಲ್ಲಿ ಶಿಬಿರಾರ್ಥಿಗಳಿಗೆ ಕಿಟ್ ಹಾಗೂ ಪ್ರಮಾಣಪತ್ರಗಳನ್ನು ವಿತರಿಸಿ ಮಾತನಾಡಿದ ಚಾಂತಾರು ಪಿಡಿಒ ಮೀರಾ, 'ಮಹಿಳೆಯರ ಅಚ್ಚುಮೆಚ್ಚಿನ ಕ್ಷೇತ್ರಗಳಲ್ಲಿ ಸೌಂದರ್ಯ ವೃದ್ಧಿಯ ಕೆಲಸವೂ ಒಂದಾಗಿದೆ. ತಮ್ಮನ್ನು ತಾವು ಅಂದವಾಗಿ ಕಾಣುವಂತೆ ಮಾಡಿಕೊಳ್ಳುವುದರ ಜತೆಗೆ ಇತರರ ಸೌಂದರ್ಯ ವೃದ್ಧಿಸುವಲ್ಲಿಯೂ ಸಮಾನ ಕಾಳಜಿ ವಹಿಸಬೇಕು. ಬಹಿರಂಗ ಶುದ್ಧಿಯ ಜತೆಗೆ ಅಂತರಂಗದ ಶುದ್ಧಿಯೂ ಇದ್ದಾಗ ಮಾತ್ರ ಗ್ರಾಹಕರಿಗೆ ಉತ್ತಮ ಸೇವೆ ನೀಡಲು ಸಾಧ್ಯ. ಮಹಿಳೆಯರು ಇಲ್ಲಿ ಪಡೆದ ಉತ್ತಮ ತರಬೇತಿಯನ್ನು ಸದ್ಬಳಕೆ ಮಾಡಿಕೊಂಡು, ಸ್ವಾಭಿಮಾನಿ ಉದ್ಯಮಿಗಳಾಗಿ ಪಾಲ್ಗೊಳ್ಳಬೇಕು' ಎಂದು ಹೇಳಿದರು.

